ಪ್ರಾಯೋಗಿಕ ಸಂಚಿಕೆ
ಮೇ 1, 2007
ಬೆಲೆ ರೂ. 5/-

ಜನಶಕ್ತಿ

ಕನ್ನಡ ವಾರಪತ್ರಿಕೆ

ಮೇ ದಿನ 2007



ಸಮರ್ಪಿತ ಕಾರ್ಮಿಕ ಆಂದೋಲನಕ್ಕೆ ಕರೆ



ಬಿಸಿಯೂಟ ನುಂಗುತ್ತಿರುವ ಇಸ್ಕಾನ್



ಜೆಡಿ(ಎಸ್) ಬಿಜೆಪಿಗೆ ಅಧಿಕಾರ ಒಪ್ಪಿಸುವುದೇ?


‘ಪ್ರೊವೋಕ್ಡ್’ ಹೆಣ್ಣಿನ ಸಂಕಟಗಳ ಮನೋಜ್ಞ ಅಭಿವ್ಯಕ್ತಿ



ಕೋಮುವಾದದ ಕುರಿತು : ಜಿ.ಎಸ್.ಶಿವರುದ್ರಪ್ಪ



ಕೋಮುವಾದದ ನೆರಳಲ್ಲಿ...



■ ಜಿ.ಎಸ್.ಶಿವರುದ್ರಪ್ಪ

ಕೋಮುವಾದ ವಿರೋಧಿ ಆಶಯಗಳನ್ನು ಪ್ರತಿನಿಧಿಸುವ ವಿಶಿಷ್ಟ ಧ್ವನಿ ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪನವರದ್ದು. ಎಸ್‌ಎಫ್‌ಐ ಸಂಘಟಿಸಿದ್ದ ಕೋಮುವಾದದ ಕುರಿತ ಸಮಾವೇಶವೊಂದರಲ್ಲಿ ಅವರು ಮಾಡಿದ ಭಾಷಣದಿಂದ ಆಯ್ದ ಭಾಗಗಳು ಇವು.

ನಾನು ವಿದ್ಯಾರ್ಥಿಯಾಗಿದ್ದ ಕಾಲ ಈ ರಾಷ್ಟ್ರದ ಚರಿತ್ರೆಯಲ್ಲಿ ಅತ್ಯಂತ ಚಲನಶೀಲವಾದ ಕಾಲವಾಗಿತ್ತು; ಉಜ್ವಲವಾದ ಕಾಲವಾಗಿತ್ತು. ಆಗ ಪರಾಕ್ರಮಣದ ವ್ಯಥೆಯ ಜತೆಗೆ, ಈ ಪರತಂತ್ರದಿಂದ ಪಾರಾಗಿ, ಸ್ವತಂತ್ರವಾಗುವ ಹೋರಾಟದ ಕೆಚ್ಚಿತ್ತು. ಕಣ್ಣ ಮುಂದೆ ಭವ್ಯ ಭಾರತದ ನಿರ್ಮಾಣದ ಕನಸಿತ್ತು. ಜತೆಗೆ ಈ ಗುರಿಗೆ ಮುನ್ನಡೆಸಬಲ್ಲ ಮಾರ್ಗದರ್ಶಕ ಮಹಾಸತ್ವಗಳಿದ್ದವು. ರಾಷ್ಟ್ರಕವಿ ಕುವೆಂಪು ಅವರ ಮಾತುಗಳಲ್ಲಿ ಹೇಳಬೇಕಾದರೆ :

'ಮುಂದಕ್ಕೆ ಗುರಿಯಿತ್ತು, ಹಿಂದಕ್ಕೆ ಗುರುವಿದ್ದ,
ನುಗ್ಗಿದುದು ಧೀರದಂಡು!'

ಆದರೆ ಸ್ವಾತಂತ್ರ್ಯ ಬಂದ ಅರ್ಧ ಶತಮಾನದ ನಂತರದ ಕಾಲದ ಇಂದಿನ ಭಾರತದಲ್ಲಿ ನಿಂತ ನಿಮ್ಮ ಮುಂದೆ - ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ಸ್ವತಂತ್ರ ಭಾರತವಿದೆ. ಈ ಭಾರತ ಕಂಡ ಪ್ರಜಾಪ್ರಭುತ್ವದ ಕನಸುಗಳು ಈಡೇರದ, ಒಂದು ಉಬ್ಬಸಗೊಳಿಸುವ ಅಸ್ವಸ್ಥತೆ ಈ ದೇಶವನ್ನೆಲ್ಲ ಕಬಂಧನಂತೆ ಆವರಿಸಿಕೊಂಡಿದೆ. ಈ ಅಸ್ವಸ್ಥತೆಯ ಕಾರಣಗಳನ್ನು ಸ್ಥೂಲವಾಗಿ ನಾಲ್ಕು ಎಂದು ಗುರುತಿಸಬಹುದು.

ಮೊದಲನೆಯದು: ಪರಿಸರ ನಾಶದ ತಲ್ಲಣಗಳು

ಎರಡನೆಯದು : ಕಳೆದ ಎರಡು ಶತಮಾನಗಳ ಕಾಲದಲ್ಲಿ ಈ ಜಗತ್ತು ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಅನೂಹ್ಯವಾದ ಪ್ರಗತಿಯನ್ನು ಸಾಧಿಸಿದ್ದರೂ, ಈ ಭಾರತದ ಜನ ಮನಸ್ಸು ಇನ್ನೂ ಅವೈಚಾರಿಕತೆಯಲ್ಲಿ ಮತ್ತು ಹೊಸ ಹೊಸ ಮೂಢನಂಬಿಕೆಗಳಲ್ಲಿ ಸ್ಥಗಿತಗೊಳ್ಳುತ್ತಿರುವ ಕ್ರಮ.


ಮೂರನೆಯದು: ದಿನದಿಂದ ದಿನಕ್ಕೆ ದೇವರು - ದೇವಸ್ಥಾನ ಮತ್ತು ಧರ್ಮದ ಹೆಸರಿನಲ್ಲಿ ವಿಜೃಂಭಿಸುತ್ತಿರುವ ಸಂಬಂಧದ ಅನಾಹುತಗಳು ಮತ್ತು ಜಾಗತಿಕ ಭಯೋತ್ಪಾದಕತೆಯೊಂದಿಗೆ ಅದು ವಿಸ್ತರಿಸಿಕೊಳ್ಳುತ್ತಿರುವ ಸಂಬಂಧದ ಅಪಾಯಗಳು.

ನಾಲ್ಕನೆಯದು: ಜಾಗತೀಕರಣ, ಉದಾರೀಕರಣಗಳ ಜಾಲದಲ್ಲಿ ಈ ದೇಶ ಬಹುರಾಷ್ಟ್ರೀಯತೆಯ ನಿಯಂತ್ರಣಕ್ಕೆ ಒಳಗಾಗಿ ಪಡುತ್ತಿರುವ ಪಾಡುಗಳು.

ಇನ್ನು ನಾನು ಪ್ರಸ್ತಾಪಿಸಿದ ಎರಡು ಮೂರನೇ ಆತಂಕಗಳಾದ ಅವೈಚಾರಿಕತೆ ಹಾಗೂ ಈ ದೇಶ ಹೇಗೋ ಬಹುಕಾಲದಿಂದ ಕಾಪಾಡಿಕೊಂಡು ಬಂದ ಕೋಮುಸಾಮರಸ್ಯದ ಆಕೃತಿಗಳು ಧಾರ್ಮಿಕ ಮೂಲಭೂತವಾದಿಗಳಿಂದ ಚೂರು ಚೂರಾಗುತ್ತಿರುವುದನ್ನು ಅಸಹಾಯಕತೆಯಿಂದ ನಾವು ನೋಡಬೇಕಾಗಿರುವ ದುರಂತ - ಈ ಎರಡೂ ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ನಿಚ್ಚಳವಾದ ವೈಚಾರಿಕತೆಯಿಂದ ಈ ದೇಶದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡದೆ ಇದ್ದರೆ ನಾವು ಇನ್ನಷ್ಟು ಅಧೋಗತಿಗೆ ಇಳಿಯುವುದು ಖಂಡಿತ.

ನಾಲ್ಕನೆಯದಾದ ಜಾಗತೀಕರಣ ಉದಾರೀಕರಣಗಳ ಕಾರಣದಿಂದ ನಮ್ಮ ದೇಶೀಯ ಸಂಸ್ಕೃತಿಗಳು ಕ್ರಮೇಣ ನಾಶವಾಗುವ ಪರಿಸ್ಥಿತಿ ಪ್ರಾಪ್ತವಾಗುವುದಲ್ಲದೆ, ಬಂಡವಾಳಶಾಹಿ ರಾಷ್ಟ್ರಗಳ ಕೈಗೊಂಬೆಯೂ ಮಾರುಕಟ್ಟೆಯೂ ಆಗಿ ಈ ದೇಶ ಪರಿವರ್ತಿತವಾಗಿ, ನಾವು ಬಹುಕಾಲದಿಂದ ಹೋರಾಡಿ ಪಡೆದುಕೊಂಡ ಸ್ವಾತಂತ್ರ್ಯಕ್ಕೆ ಯಾವ ಬೆಲೆಯೂ ಇಲ್ಲವಾಗುವ ಸಂಭವವಿದೆ.

ಹತ್ತೊಂಬತ್ತನೆಯ ಶತಮಾನದ ಮಹಾ ಸಂತರಾದ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಯೋಗ ವಿಜ್ಞಾನದ ಪ್ರಯೋಗ ಶಾಲೆಯಲ್ಲಿ ಸಾಕ್ಷಾತ್ಕರಿಸಿಕೊಂಡು ಸಾರಿದ ಸತ್ಯ ಇದು; 'ಜಗತ್ತಿನ ಎಲ್ಲ ಧರ್ಮಗಳ ತಿರುಳೂ ಒಂದೇ. ಯಾವ ಒಂದು ಧರ್ಮವೂ ಮತ್ತೊಂದಕ್ಕಿಂತ ಶ್ರೇಷ್ಠವೂ ಅಲ್ಲ, ಕನಿಷ್ಠವೂ ಅಲ್ಲ; ಎಲ್ಲ ಧರ್ಮಗಳೂ ಸತ್ಯವೇ. ಮತಗಳೆಲ್ಲ ಮೂಲತಃ ಪಥಗಳೇ.' ಶ್ರೀ ರಾಮಕೃಷ್ಣರ ಸಾಕ್ಷಾತ್ ಶಿಷ್ಯರಾದ ಶ್ರೀ ಸ್ವಾಮಿ ವಿವೇಕಾನಂದರು, ಈ ಮಹಾ ಸತ್ಯವನ್ನು ಸೆಪ್ಟೆಂಬರ್ ಹನ್ನೊಂದು, 1963 ರಂದು ಅಮೆರಿಕಾದ ಚಿಕಾಗೋ ನಗರದ ಸರ್ವಧರ್ಮ ಸಮ್ಮೇಳನದಲ್ಲಿ ಜಗತ್ತಿನ ಕಿವಿಗೆ ಕೇಳುವಂತೆ ಉದ್ಘೋಷಿಸಿದ ಒಂದು ಶತಮಾನದ ತರುವಾಯು, ಅದೇ ಸೆಪ್ಟೆಂಬರ್ ಹನ್ನೊಂದನೆಯ ತಾರೀಖು 2001 ರಂದು ಇಸ್ಲಾಂ ಧಾರ್ಮಿಕ ಮೂಲಭೂತವಾದಿ ಉಗ್ರರಿಂದ ಅಮೆರಿಕಾದ ನ್ಯೂಯಾರ್ಕ್ ನಗರದ ಬೃಹತ್ ವಾಣಿಜ್ಯ ಸಂಕೀರ್ಣದ ಅವಳಿ ಕಟ್ಟಡಗಳು ಧ್ವಂಗೊಂಡ ಸಂಗತಿ, ಜಗತ್ತಿನಾದ್ಯಂತ ಸುದ್ದಿ ಮಾಡಿ ತಲ್ಲಣದ ತರಂಗಗಳನ್ನು ಎಬ್ಬಿಸಿತೆಂಬುದು ಒಂದು ವಿಪರ್ಯಾಸದ ವಿಷಯವಾಗಿದೆ. ಆದರೆ ಇದಕ್ಕೂ ಮುನ್ನ ಅದೇ ಶ್ರೀ ರಾಮಕೃಷ್ಣರ - ಸ್ವಾಮಿ ವಿವೇಕಾನಂದರ ನಾಡಾದ ಭಾರತದಲ್ಲಿ ಕಳೆದ ಎರಡು - ಮೂರು ದಶಕಗಳ ಕಾಲಮಾನದಲ್ಲಿ ಕೋಮುಗಲಭೆಗಳಲ್ಲಿ ಸತ್ತವರ ಸಂಖ್ಯೆ, ಅಮೆರಿಕಾದ ಈ ಬೃಹದ್ ದುರ್ಘಟನೆಯಲ್ಲಿ ಸತ್ತವರ ಸಂಖ್ಯೆಗಿಂತ ಅನೇಕಪಟ್ಟು ಮಿಗಿಲಾಗಿದೆ ಎಂಬ ಸಂಗತಿ ಜಗತ್ತಿನಾದ್ಯಂತ ಅಂತಹ ದೊಡ್ಡ ಸುದ್ದಿಯಾಗದೆ ಹೋದರೂ - ನಿಜಕ್ಕೂ ಅದುಭಾರತದ ಧಾರ್ಮಿಕ ಸಾಮರಸ್ಯಕ್ಕೆ ಬಿದ್ದ ಬಹುದೊಡ್ಡ ಹೊಡೆತವಾಗಿದೆ.



ಬಾಬ್ರಿ ಮಸೀದಿಯ ಧ್ವಂಸ

ಸಂಘರ್ಷಗಳಿದ್ದರೂ ಸಹಬಾಳ್ವೆ

ಇಂಡಿಯಾದ ಚರಿತ್ರೆಯಲ್ಲಿ ಒಂದು ಧರ್ಮದವರಿಗೂ ಮತ್ತೊಂದು ಧರ್ಮದವರಿಗೂ ಸಂಘರ್ಷಗಳು ಉಂಟಾದ ಸಂದರ್ಭಗಳು ಸಾಕಷ್ಟಿದ್ದರೂ, ಅವು ಅನಂತರದ ಸಹಬಾಳ್ವೆಗೆ ಅಷ್ಟೇನೂ ಮಾರಕವಾಗಿರಲಿಲ್ಲವೆಂದು ಹೇಳಬಹುದು. ಜತೆಗೆ ಯಾವ ಧರ್ಮದ ದೊರೆಗಳು ರಾಜ್ಯಭಾರ ಮಾಡಿದರೂ ಅವರು ಬಹುತೇಕ ತಮ್ಮ ರಾಜ್ಯದ ಎಲ್ಲ ಧರ್ಮಗಳವರ ಹಿತವನ್ನು ತಕ್ಕಮಟ್ಟಿಗೆ ಕಾಯ್ದುಕೊಂಡು ಬರುವ ಕಡೆಗೆ ಗಮನವಿತ್ತರೆಂದು ಚಾರಿತ್ರಿಕ ದಾಖಲೆಗಳು ಸಾಬೀತುಪಡಿಸುತ್ತವೆ. ಇಂಡಿಯಾದ ರಾಜರು ತಾಳಿದ ಧಾರ್ಮಿಕ ನಿಲುವುಗಳನ್ನು ಸ್ಥೂಲವಾಗಿ ಮೂರು ಬಗೆ ಎಂದು ವಿಂಗಡಿಸಿ ನೋಡಬಹುದು. ಮೊದಲನೆ ವರ್ಗದವರು ಸರ್ವಧರ್ಮ ಸಹಿಷ್ಣುಗಳು; ಅಶೋಕ, ಅಕ್ಬರ್ ಇಂಥವರು. ಎರಡನೆಯವರು ಸ್ವಧರ್ಮಸಂರಕ್ಷಕರು ಎಂದರೆ ಅನ್ಯಧರ್ಮಗಳ ಆಕ್ರಮಣಗಳಿಂದ ಹಿಂದೂ ಧರ್ಮವನ್ನು ಸಂರಕ್ಷಿಸಿದವರು. ಶಿವಾಜಿ ಮತ್ತು ವಿಜಯನಗರದ ರಾಜರು ಈ ಸಾಲಿಗೆ ಸೇರುತ್ತಾರೆ. ಮೂರನೆಯವರು ತಮ್ಮ ಧರ್ಮವೇ ಶ್ರೇಷ್ಠ ಎಂದು ಅದನ್ನು ಬಲವಂತವಾಗಿ ಅನ್ಯಧರ್ಮೀಯರ ಮೇಲೆ ಹೇರುವವರು. ಘಜನಿ ಮಹಮ್ಮದ್, ಔರಂಗಜೇಬ್ ಇಂಥವರು. ಈ ಬಗೆಯ ಜನರು ಎಷ್ಟೋ ವೇಳೆ ಅನ್ಯಧರ್ಮೀಯರ ದೇವಾಲಯಾದಿಗಳನ್ನು ನಾಶಪಡಿಸಿದ ನಿದರ್ಶನಗಳೂ ಸಾಕಷ್ಟಿವೆ. ಈ ದಿನ ಒಂದು ನಿರ್ದಿಷ್ಟಕೋಮಿಗೆ ಸೇರಿದವರ ಬಗ್ಗೆ ದ್ವೇಷ - ಅಸಹನೆಗಳನ್ನು ಪ್ರಚೋದಿಸಲು, ದೇವಾಲಯ ನಾಶದ ದೃಷ್ಟಾಂತಗಳನ್ನು ಮುಂದಿಡುತ್ತಾ, ಈ ದೇಶದ ಎಲ್ಲಾ ದೇವಾಲಯಗಳ ನಾಶವೂ, ಉದ್ದೇಶ ಪೂರ್ವಕವಾದ ಮತೀಯ ದ್ವೇಷಗಳಿಂದಲೇ ಸಂಭವಿಸಿತೆಂದು ಚರಿತ್ರೆ ಯನ್ನು ವ್ಯಾಖ್ಯಾನಿಸುವವರು ಸಾಕಷ್ಟಿದ್ದಾರೆ. ನಾವು ಈ ಸಂಗತಿಗಳನ್ನು ತಕ್ಕ ಎಚ್ಚರ ಮತ್ತು ವಿವೇಚನೆಯಿಂದ ಪರಿಶೀಲಿಸಿ ಇವುಗಳ ಸತ್ಯಾಸತ್ಯತೆಗಳನ್ನು ಸರಿಯಾಗಿ ಮಂಡಿಸುವ ಅಗತ್ಯವಿದೆ. ಯಾಕೆಂದರೆ ಹಿಂದೆ ಈ ದೇಶದಲ್ಲಿ ಒಂದು ಧರ್ಮದವರ ದೇವಾಲಯಗಳನ್ನು ಇನ್ನೊಂದು ಧರ್ಮದವರು ನಾಶಪಡಿಸಿದ ನಿದರ್ಶನಗಳು ಸಾಕಷ್ಟಿದ್ದರೂ ಅವೆಲ್ಲವೂ ಧಾರ್ಮಿಕ ಅಸಹನೆಯ ಕಾರಣದಿಂದಲೇ ಸಂಭವಿಸಿದವುಗಳೆಂದು ತೀರ್ಮಾನಿಸುವುದು ಚರಿತ್ರೆಗೆ ಮಾಡುವ ಅಪಚಾರವಾಗುತ್ತದೆ. ವಾಸ್ತವದ ಸಂಗತಿಯೇನೆಂದರೆ ದೇವಾಲಯಗಳು ಹಿಂದಿನ ಕಾಲದ ಸಾಮಾಜಿಕ ಸಂದರ್ಭದಲ್ಲಿ ವಹಿಸುತ್ತಿದ್ದ ಪಾತ್ರ ಬಹುಮುಖಿಯಾಗಿದ್ದರೂ ಅವು ಸಂಪತ್ತಿನ ಸಂಚಯಸ್ಥಾನಗಳೂ ಆಗಿದ್ದುದರಿಂದ ದೇವಾಲಯಗಳ ಮೇಲೆ ನಡೆದ ದಾಳಿಗಳ ಹಿಂದೆ, ಹೀಗೆ ಸಂಪತ್ತನ್ನು ದೋಚುವ ಆರ್ಥಿಕ ಉದ್ದೇಶವೇ ಪ್ರಧಾನವಾಗಿತ್ತು ಎನ್ನಬಹುದು. ಘಜನಿ ಮಹಮದನು ಗುಜರಾತಿನ ಸುಪ್ರಸಿದ್ಧ ದೇವಾಲಯವನ್ನು ಕೊಳ್ಳೆ ಹೊಡೆಯಲು ಮುಖ್ಯ ಆಕರ್ಷಣೆಯಾದದ್ದು ಅಲ್ಲಿ ಸಂಚಯನಗೊಂಡ ಸಂಪತ್ತೇ ಹೊರತು, ಆತನ ಧರ್ಮ ದ್ವೇಷವಲ್ಲ ಮತ್ತು ಹೀಗೆ ಸಂಪತ್ತಿಗಾಗಿ ಬೇರೆ ರಾಜ್ಯಗಳ ದೇವಸ್ಥಾನಗಳ ಮೇಲೆ ದಾಳಿ ಮಾಡಿದವರು ಕೇವಲ ಮುಸ್ಲಿಂ ದೊರೆಗಳೇ ಅಲ್ಲ, ಹಿಂದೂ ರಾಜರುಗಳೂ ಮತ್ತೊಬ್ಬ ಹಿಂದೂ ರಾಜರುಗಳ ರಾಜ್ಯಗಳ ಮೇಲೆ ದಾಳಿ ನಡೆಯಿಸಿದಜಾಗ ಸಂಭವಿಸಿದ ಘಟನೆಗಳೂ ಹೌದು. ನಿದರ್ಶನಕ್ಕೆ ಹೇಳುವುದಾದರೆ ಕಾಶ್ಮೀರ ರಾಜಮನೆತನದ ಹರ್ಷ ಎಂಬಾತನು ದೇವಾಲಯಗಳನ್ನು ಹೀಗೆ ಸಂಪತ್ತಿಗಾಗಿ ಕೊಳ್ಳೆ ಹೊಡೆಯಲೆಂದೇ 'ದೇವಾಲಯೋತ್ಪಾಟನೆ ನಾಯಕ' ಎಂಬ ಮಂತ್ರಿಯನ್ನು ನೇಮಿಸಿದ್ದನಂತೆ! ಅಷ್ಟೇ ಅಲ್ಲ, ಗೆದ್ದ ರಾಜರು ಸೋತ ರಾಜನ ನಗರಗಳನ್ನು ಲೂಟಿ ಮಾಡುವುದು, ಅವರ ದೇವಾಲಯಗಳನ್ನು ನಾಶಪಡಿಸುವುದು, ತಮ್ಮ ವಿಜಯವನ್ನು ಸಾರುವ ಸಂಕೇತವೂ ಆಗಿತ್ತು. ಕರ್ನಾಟಕದ ಪವಿತ್ರ ಕ್ಷೇತ್ರವಾದ ಶೃಂಗೇರಿಯನ್ನು ಮರಾಠರು ಲೂಟಿ ಮಾಡಿದಾಗ, ಆ ಹಾನಿಯ ನಷ್ಟವನ್ನು ಸರಿಪಡಿಸಿ, ಶಾರದಾ ದೇವಿಯ ಪೂಜೆಗೆ ಅನುಕೂಲ ಮಾಡಿಕೊಟ್ಟವನು ಟಿಪ್ಪೂಸುಲ್ತಾನ್. ಅಂದಿನ ಆಳರಸರ ಪಾಲಿಗೆ ರಾಜಶಾಸನದ ಸಮಸ್ಯೆಗಳಾಗಿರಲಿಲ್ಲ. ಎಷ್ಟೋ ರಾಜರು, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಹೋಗುವುದು ಮತ್ತು ಹೋಗಿದ್ದು ಅವರ ವೈಯಕ್ತಿಕ ಆಯ್ಕೆಯ ಸಂಗತಿಯಾಗಿತ್ತು.

ದೇಶ ವಿಭಜನೆ - ಅಲ್ಪಸಂಖ್ಯಾತರ ಅಸುರಕ್ಷಿತ ಭಾವನೆ

ಆದರೆ ಯಾವಾಗ ಈ ದೇಶ ವಿಭಜನೆಗೊಂಡು ಎರಡಾಯಿತೋ ಮತ್ತು ಈ ದೇಶದ ಅಲ್ಪಸಂಖ್ಯಾತರಾದ ಮುಸ್ಲಿಮರು ಮತ್ತು ಕ್ರೈಸ್ತರು ಒಂದು ಬಗೆಯ ಅರಕ್ಷಿತ ಹಾಗೂ ಆತಂಕದ ಸ್ಥಿತಿಗೆ ಒಳಗಾದರೋ ಮತ್ತು ಅವರ ರಾಷ್ಟ್ರೀಯತೆಯನ್ನೇ ಬಹುಸಂಖ್ಯಾತರು ಶಂಕಿಸತೊಡಗಿದರೋ, ಪ್ರಶ್ನಿಸತೊಡಗಿದರೋ, ಅಂದಿನಿಂದ ಈ ದೇಶದ ಕೋಮುವಾದ ರಾಜಕೀಯದ ವಿಷಯವಾಗಿ, ತೀರಾ ವಿಕೃತಗೊಂಡ ಸ್ವರೂಪವನ್ನು ಪಡೆದುಕೊಂಡಿತು. ತನ್ನ ಸಂವಿದಾನದಲ್ಲಿ ಸೆಕ್ಯುಲರ್ ಅಥವಾ ಜಾತ್ಯಾತೀತತೆ ಯನ್ನು ಗೋಷಿಸಿಕೊಂಡ ಭಾರತದ ರಾಜಕಾರಣದ ಒಂದು ಪಂಗಡವು, ರಾಜಕೀಯ ಲಾಭದ ಕಾರಣಕ್ಕಾಗಿ 'ಹಿಂದೂ ರಾಷ್ಟ್ರೀಯವಾದ' ವನ್ನು ಎತ್ತಿಹಿಡಿಯುತ್ತ, ತನಗೆ ಅನುಕೂಲಕರವಾದ ರೀತಿಯಲ್ಲಿ ಈ ದೇಶದ ಚರಿತ್ರೆಯನ್ನು ವ್ಯಾಖ್ಯಾನಿಸುತ್ತಾ, ಕೋಮುವಾದವನ್ನು ಪ್ರಬಲವಾಗಿ ಪ್ರತಿಪಾದಿಸತೊಡಗಿದೆ. ಒಂದು ಧರ್ಮದವರನ್ನು ಇನ್ನೊಂದು ಧರ್ಮದವರ ವಿರುದ್ಧ ಎತ್ತಿಕಟ್ಟುವುದು, ಬಹುಸಂಖ್ಯಾತರ ಸಂಸ್ಕೃತಿಗೆ, ಈ ಅಲ್ಪಸಂಖ್ಯಾತರು ಹೊರಗಿನವರು ಎಂದು ವಾದಿಸುವುದು, ಚರಿತ್ರೆಯನ್ನು ಉದ್ದಕ್ಕೂ ಹಿಂದೂ ಧರ್ಮದ ವಿರುದ್ಧವಾಗಿ ಅವರು ಮಾಡಿರುವರೆನ್ನಲಾದ ಅನ್ಯಾಯ - ಅಪಚಾರಗಳನ್ನು ಬಣ್ಣಕಟ್ಟಿ ಎತ್ತಿ ಹೇಳಿ ಅವರ ಬಗ್ಗೆ ದ್ವೇಷ - ತಿರಸ್ಕಾರಗಳನ್ನು ಹುಟ್ಟಿಸುವುದು ಈ ಕೋಮುವಾದದ ಲಕ್ಷಣವಾಗಿದೆ.

ವೈವಿಧ್ಯತೆಗಳು ಮಾನ್ಯ

ಸರಿಯಾಗಿ ವಿಚಾರ ಮಾಡಿ ನೋಡಿದರೆ ನಿಜವಾದ ಹಿಂದೂ ಧರ್ಮವಾಗಲೀ ಭಾರತೀಯ ಸಂಸ್ಕೃತಿಯಾಗಲೀ ಕೋಮುವಾದವನ್ನೂ, ಧಾರ್ಮಿಕ ಮೂಲಭೂತ ವಾದವನ್ನೂ ಪ್ರತಿಪಾದಿಸುವ ಸ್ವರೂಪದ್ದಲ್ಲ. ಯಾಕೆಂದರೆ, ಎಲ್ಲ ಬಗೆಯ ವೈವಿಧ್ಯತೆಗಳನ್ನು ಮಾನ್ಯ ಮಾಡುವುದು ಅದರ ಲಕ್ಷಣವಾಗಿದೆ. ಅನೇಕ ಪರಕೀಯ ಸಂಸ್ಕೃತಿಗಳನ್ನು ಬರಮಾಡಿಕೊಂಡರೂ, ಆ ಕಾರಣಕ್ಕೆ ತನ್ನತನವನ್ನು ಕಳೆದುಕೊಳ್ಳದೆ, ಅವುಗಳೆಲ್ಲದರ ಸಹಬಾಳ್ವೆಗೆ ಅವಕಾಶ ಮಾಡಿಕೊಡುವ ಉದಾರತೆ ಹಿಂದೂ ಧರ್ಮಕ್ಕೆ ಇದೆ. ಜತೆಗೆ ಭಾರತೀಯ ಸಂಸ್ಕೃತಿಗೆ ಅನೇಕ ಪರಕೀಯ ಧರ್ಮ ಹಾಗೂ ಸಂಸ್ಕೃತಿಗಳು ಕೊಟ್ಟ ಕೊಡುಗೆಗಳನ್ನೂ ನಾವು ನಿರ್ಲಕ್ಷಿಸಲು ಬರುವುದಿಲ್ಲ. ಜಗತ್ತಿನ ಬಹುದೊಡ್ಡ ಧರ್ಮಗಳು ಇಲ್ಲಿಗೆ ಬಂದು ನೆಲಸಿವೆ. ಪ್ರಾಚೀನ ಹಿಂದೂ ಧರ್ಮದ ಜತೆಗೆ, ಕ್ರೈಸ್ತ, ಮಹಮದೀಯ, ಬೌದ್ಧ, ಜೈನ, ಪಾರಸಿಕ, ಸೂಫೀ - ಇತ್ಯಾದಿ ವಿವಿಧ ಧಾರ್ಮಿಕ ಪಂಥಗಳು ಇಲ್ಲಿ ನೆಲೆ ನಿಂತಿವೆ. ಮತ್ತು ಭಾರತದ ಬಹುಮುಖೀ ಸಂಸ್ಕೃತಿಯನ್ನು ಅವು ರೂಪಿಸಿವೆ. ಅವುಗಳದೇ ಆದ ವಾಸ್ತುಶಿಲ್ಪ, ಚಿತ್ರಕಲೆ, ಸಂಗೀತ, ಸಾಹಿತ್ಯಗಳನ್ನು ಕೊಡುಗೆಯಾಗಿ ನೀಡಿವೆ. ಮತ್ತು ವಿವಿಧ ತತ್ವ

ಪುಟ 11 ನೋಡಿ

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

'ಜನಶಕ್ತಿ' ಮೊಳಗಲಿ, ಜನಶಕ್ತಿ ಎಚ್ಚರಗೊಳ್ಳಲಿ, ಸಿಡಿಲಾಗಿ ಎರಗಲಿ

'ಜನಶಕ್ತಿ' ಎಂಬ ಪದವೇ ಶಕ್ತಿಯನ್ನು ಚಿಮ್ಮುತ್ತದೆ. ಜನಶಕ್ತಿ ಎಂಬ ಪರಿಕಲ್ಪನೆ ಅದರ ವಿಶಾಲ ವ್ಯಾಪ್ತಿಯಲ್ಲಿ ಅದರ ಸಾಮರ್ಥ್ಯದ ಬೃಹತ್ ವಿಕಾಸದಲ್ಲಿ ಭಾರತದ ಎಲ್ಲ ಸಮ್ಯಸೆಗಳಿಗೆ ಉತ್ತರವಾಗಿ ಕಾಣುತ್ತದೆ. ಭಾರತದ ಬೆಳವಣಿಗೆಗೆ ತೊಡಕಾದ ಎಲ್ಲ ಅಡೆತಡೆಗಳನ್ನು ಒರೆಗೆ ಒಗೆಯುವ ಶಕ್ತಿ, ಭಾರತದ ಎಲ್ಲ ಜನಸಮುದಾಯಗಳ ಅಭಿವೃದ್ಧಿಯನ್ನು ಸಾಧಿಸುವ ಶಕ್ತಿ ಜನಶಕ್ತಿಯಾಗಿದೆ.

ಸೂರ್ಯ ಮುಳುಗದ ಸಾಮ್ರಾಜ್ಯವಾಗಿದ್ದ ಬ್ರಿಟಿಷರ ಸೈನ್ಯ ಶಕ್ತಿ ಮತ್ತು ಪ್ರಭುತ್ವ ಶಕ್ತಿಯನ್ನು ಎದುರಿಸಿದ ಭಾರತದ ಜನ ಶಕ್ತಿ, ಸ್ವಾತಂತ್ರ್ಯದ ಸಂದರ್ಭದಲ್ಲಿ ಭಾರತದ ರಾಜ ನವಾಬರುಗಳಿಗೆ ತಮಗೆಬೇಕಾದಂತೆ ವರ್ತಿಸುವ ಸ್ವಾತಂತ್ರ್ಯ ನೀಡಿ ಭಾರತವನ್ನು ತುಂಡು ತುಂಡಾಗಿ ವಿಭಜಿಸುವ ಬ್ರಿಟಿಷ್ ಷಡ್ಯಂತವನ್ನು ಮೈಸೂರು ರಾಜರೂ ಸೇರಿದಂತೆ ಭಾರತದ ಪಾಳೆಯಗಾರಿ ಪ್ರಭುಗಳ 'ಸ್ವಾತಂತ್ರ್ಯ' ಕಾಂಕ್ಷೆಯನ್ನು ಸೋಲಿಸಿದ್ದು ಭಾರತದ ಜನ ಶಕ್ತಿ ('ಮೈಸೂರು ಚಲೋ' ಎಂದು ಹೊರಟು ಅರಮನೆಗೆ ಮುತ್ತಿಗೆಹಾಕಿ ಭಾರತಕ್ಕೆ ಸೇರುತ್ತೇನೆಂದು, ಮೈಸೂರು ಸಂಸ್ಥಾನದಲ್ಲಿ ಜನಪ್ರತಿನಿಧಿಗಳಿಗೆ ಅಧಿಕಾರ ವರ್ಗಾವಣೆ ಮಾಡುತ್ತೇನೆಂದು ಒಪ್ಪಿಗೆ ಪಡೆದದ್ದು ಈ ಚರಿತ್ರಾರ್ಹ ಜನಶಕ್ತಿಯ ಒಂದು ಬೆಳಗು); ಭಾರತದಲ್ಲಿ ಜನಭಾಷೆಗಳ ಆಧಾರದಲ್ಲಿಯೇ ಆಡಳಿತ ಎಂದು ಒತ್ತಾಯಿಸಿ ಭಾಷಾವಾರು ಪ್ರಾಂತ್ಯಗಳನ್ನು ಹೋರಾಡಿ ಪಡೆದದ್ದು, ಭಾರತದ ಭೂಪಟವನ್ನು ಸುಂದರವಾಗಿ ಮಾರ್ಪಡಿಸಿದ್ದು, ಭಾರತದ ಜನಶಕ್ತಿ; ತುರ್ತುಪರಿಸ್ಥಿತಿಯ ಹೇರಿಕೆಯನ್ನು ಕಿತ್ತೊಗೆದದ್ದು, ಪ್ರಜಾಪ್ರಭುತ್ವವನ್ನು ಮರು ಸ್ಥಾಪಿಸಿದ್ದು ಭಾರತದ ಜನಶಕ್ತಿ; ಕೋಮುವಾದಿಗಳ ನಿರಂತರ ಪ್ರಯತ್ನಗಳು ಕೋಮುದಂಗೆಗಳ ಉದ್ರೇಕದ ನಡುವೆಯೂ ಆಗಾಗ್ಗೆ ಉದ್ರಿಕ್ತವಾಗುತ್ತಿರುವ ಪ್ರದೇಶಾಂಧತೆ, ಭಾರತವನ್ನು ವಿಭಜಿಸುವ ಬಯಸುವ ಭಯೋತ್ಪಾದಕತೆಯನ್ನು ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಎದುರಿಸಿ ಭಾರತದ ಐಕ್ಯತೆಯನ್ನು ಕಾಪಾಡುತ್ತಾ ಬಂದಿರುವುದು ಭಾರತದ ಜನಶಕ್ತಿ.

ಭಾರತವನ್ನು ಇಲ್ಲಿಯವರೆಗೆ ರೂಪಿಸುವುದು ಭಾರತದ ಜನಶಕ್ತಿ; ಇಂದಿನ ಭಾರತದ ಸಮಸ್ಯೆಗಳನ್ನು ನಿವಾರಿಸಲು ಎಚ್ಚರಗೊಳ್ಳಬೇಕಾಗಿರುವುದು, ಸೆಣಸಬೇಕಾಗಿರುವುದು ಮುಂದಿಗೆ ಭಾರತವನ್ನು ರೂಪಿಸಬೇಕಾಗಿರುವುದು ಭಾರತದ ಜನಶಕ್ತಿಯೇ.

ಇಂದು ಭಾರತ ಎದುರಿಸುತ್ತಿರುವ ಮಹತ್ತರ ಸವಾಲುಗಳನ್ನು ಸೆಣಸಲು ಅಗತ್ಯವಾದ ಉನ್ನತ ಪ್ರಜ್ಞೆಯನ್ನುಳ್ಳ, ಸವಾಲುಗಳಷ್ಟೆ ಬೃಹತ್ತಾದ, ಅಗಾಧವಾದ ಜನಶಕ್ತಿ ಭಾರತ ವ್ಯಾಪಿಯಾಗಿ ರೂಪುಗೊಳ್ಳಬೇಕಾಗಿದೆ. ಉತ್ತಿಷ್ಠತ, ಜಾಗೃತ, ಪ್ರಾಪ್ಯವರಾನ್ನಿಭೋದತ - ಏಳಿ, ಎದ್ದೇಳೀ, ಗುರಿ ಮುಟ್ಟುವವರೆಗೂ ನಿಲ್ಲದಿರಿ ಎಂಬ ವಿವೇಕಾನಂದರ ವಾಣಿಯಂತೆ ದೇಶಾದ್ಯಂತ ರೂಪುಗೊಂಡು ಚಲಿಸಬೇಕಾಗಿದೆ. ದೇಶದ ಮುಂಚಲನೆಗೆ ಆಧಾರವಾಗಬೇಕಾಗಿದೆ.

ಭಾರತದ ಕೆಲವು ರಾಜ್ಯಗಳಲ್ಲಿ ಪಶ್ಚಿಮಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಉನ್ನತ ರಾಜಕೀಯ ಪ್ರಜ್ಞೆಯನ್ನು ಜನರ ವಿಶಾಲ ಐಕ್ಯತೆಯನ್ನು ರೂಪಿಸಲು ಸಾಧ್ಯವಾಗಿದೆ. ಆದರಿಂದ ಅಲ್ಲಿನ ಜನಶಕ್ತಿ ಮೈ ಕೊಡವಿ ನಿಂತಿದೆ. ಭಾರತ ದೇಶದ ಮುಂಚಲನೆಗೆ ಪ್ರೇರಣೆ ನೀಡಿದೆ. ಆದರೆ ಉಳಿದ ರಾಜ್ಯಗಳಲ್ಲಿ, ಕರ್ನಾಟಕದಲ್ಲಿ ಆ ಎತ್ತರವನ್ನು ಆ ಬಿತ್ತರವನ್ನೂ ಇನ್ನೂ ಸಾಧಿಸಬೇಕಾಗಿದೆ. ಆ ಮೂಲಕ ಇಡೀ ಭಾರತದ ಜನಶಕ್ತಿಯ ಅಗಾಧ ಸಾಮರ್ಥ್ಯವನ್ನು ಭಾರತದ ಮಾತ್ರವಲ್ಲ ಇಡೀ ವಿಶ್ವವೇ ಬೆಕ್ಕಸ ಬೆರಗಾರುವಂತೆ ಕಂಡುಕೊಳ್ಳಬೇಕಾಗಿದೆ.

ಜನಶಕ್ತಿಯನ್ನು ಎಚ್ಚರಿಸುವಲ್ಲಿ, ಒಗ್ಗೂಡಿಸುವಲ್ಲಿ ಅನೇಕ ಸಮಸ್ಯೆಗಳಿವೆ. ಜಾತಿ ಪದ್ಧತಿ, ಪಾಳೆಯಗಾರಿ ಭೂಮಾಲಕ ಶಕ್ತಿಗಳ ಹಿಡಿತ, ಕ್ರೌರ್ಯಗಳು, ಪ್ರಜಾಸತ್ತಾತ್ಮಕ ಹಕ್ಕುಗಳ ಅರಿವು ಮತ್ತು ಪ್ರತಿಪಾದನೆಯಲ್ಲಿ ಕಂದರ. ಬಂಡವಾಳಶಾಹಿ ಭೂಮಾಲಿರ ರಾಜಕೀಯ ಪಕ್ಷಗಳು ಹುಟ್ಟಿಸುವ ಭ್ರಮೆಗಳು ಕುತಂತ್ರಗಳು ಇತ್ಯಾದಿಗಳನ್ನು ಎದುರಿಗೆ ಆ ಉನ್ನತ ಪ್ರಜ್ಞೆ ಅಗಾಧಶಕ್ತಿ ಬೆಳೆಯಬೇಕಾಗಿದೆ.

ಅನೇಕ ರೂಪಗಳಲ್ಲಿ ಈ ಶಕ್ತಿಯ ಅಭಿಜನವನ್ನು ಕಾಣುತ್ತಿರುವಾಗಲೇ ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳ ಬಗ್ಗೆ ಅತೃಪ್ತಿ, ಅಸಮಾಧಾನ ಮೊಳೆತು ಅದು ಉನ್ನತ ರಾಜಕೀಯ ಪ್ರಜ್ಞೆಯಾಗಿ ಬೆಳೆಯಲು ಹವಣಿಸುತ್ತಿರುವಾಗ ಈ ಜನಶಕ್ತಿಯನ್ನು ವಿಘಟಿಸುವ ದುಷ್ಟ ಯೋಜನೆಗಳನ್ನು ಜನ ವಿರೋಧಿ ಶಕ್ತಿಗಳು ನಡೆಸುತ್ತಿವೆ. ಬಹುಸಂಖ್ಯಾತ ಹಿಂದು ಕೋಮುವಾದ, ಅಲ್ಪಸಂಖ್ಯಾತರಲ್ಲಿ ಮೂಲಭೂತವಾದ ಜಾತಿವಾದ, ದಲಿತರ ಮೇಲಿನ ದೌರ್ಜನ್ಯಗಳು, ಮಹಿಳೆಯರ ಮೇಲಿನ ದೌರ್ಜನ್ಯಗಳು, ಭಾಷಾಂಧತೆ, ಪ್ರದೇಶಾಂಧತೆ ಲೋಲುಪತೆ, ರಾಜಕೀಯ ವಿಮುಖತೆ ಇತ್ಯಾದಿಗಳು ಜನಶಕ್ತಿಯ ವಿಕಸನವನ್ನು ತಡೆಯುತ್ತಿವೆ ಜನರನ್ನು ಒಡೆಯುತ್ತಿವೆ. ಕರ್ನಾಟಕದಲ್ಲಂತೂ ಇತ್ತೀಚಿನ ಜನಗಳಲ್ಲಿ ಜನರ ಪ್ರಜ್ಞೆಯ ಬೆಳವಣಿಗೆಯನ್ನು ತಡೆಯಲು ಗರಿಷ್ಠ ಪ್ರಯತ್ನವನ್ನು ನಡೆಸಲಾಗುತ್ತಿದೆ.

ಜಾಗತೀಕರಣದ ವಿರುದ್ಧ ಕಾರ್ಮಿಕರ ರೈತರ, ಕೂಲಿಕಾರರ ಹೋರಾಟಗಳಲ್ಲಿ, ಜನ ತಮ್ಮ ಬದುಕಿಗಾಗಿ ನಡೆಯುತ್ತಿರುವ ಹೋರಾಟಗಳಲ್ಲಿ, ಕೋಮುವಾದದ ವಿರುದ್ಧ ಹೋರಾಟಗಳಲ್ಲಿ ದಲಿತರ ಮೇಲಿನ ಅಸ್ಪೃಶ್ಯತೆ, ದೌರ್ಜನ್ಯದ ವಿರುದ್ಧದ ಹೋರಾಟಗಳಲ್ಲಿ, ಮಹಿಳೆಯರ ಸಮಾನತೆಗಾಗಿ ಹಾಗೂ ಅವರ ಮೇಲಿನ ದೌರ್ಜನ್ಯಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳಲ್ಲಿ, ಶಿಕ್ಷಣಕ್ಕಾಗಿ ಉದ್ಯೋಗಕ್ಕಾಗಿ ನಡೆಸುತ್ತಿರುವ ಹೋರಾಟಗಳಲ್ಲಿ ಮೂಡುತ್ತಿರುವ ಎಚ್ಚರವನ್ನು ಬೆಳೆಸಬೇಕಾಗಿದೆ. ಮೇಲಿನ ಹಂತಕ್ಕೆ ಜನಶಕ್ತಿಯ ಅಗಾಧ ಬೆಳವಣಿಗೆಯ ಹಂತಕ್ಕೆ ಕೊಂಡೊಯ್ಯಬೇಕಾಗಿದೆ.

ಅದಕ್ಕಾಗಿ 'ಜನಶಕ್ತಿ' ಕನ್ನಡ ವಾರಪತ್ರಿಕೆ ಒಂದು ಪ್ರಮುಖ ಸಾಧನ. ದುಡಿವ ಜನರ ಪ್ರಾಣಮಿತ್ರನಾಗಿ ಜನರ ಹೋರಾಟಗಳಿಗೆ ನೆರವು, ಹೋರಾಟಗಳಿಂದ ಬೆಳೆದ ಪ್ರಜ್ಞೆಯ ಜನಶಕ್ತಿಯ ಮುಂದಿನ ಬೆಳವಣಿಗೆಯ ಹರಿಕಾರನಾಗಿ ಕನ್ನಡ ಜನಶಕ್ತಿ ಕೆಲಸ ಮಾಡುತ್ತಿದೆ.

ಕರ್ನಾಟಕದಲ್ಲಿರುವ ಅನೇಕ ವಾರಪತ್ರಿಕೆಗಳು ದಿನಪತ್ರಿಕೆಗಳಿಗಿಂತ ಮುಂದಾಗಿ, ಆಳವಾಗಿ, ಎತ್ತರವಾಗಿ ಕರ್ನಾಟಕದ ಜನಶಕ್ತಿಯನ್ನು ಬೆಳೆಸುವ ಗುರಿ ಕನ್ನಡ ಜನಶಕ್ತಿಯದು. ಕೇವಲ ಪ್ರಸಾರವನ್ನು ಹೆಚ್ಚಿಸಿಕೊಳ್ಳುವುದಷ್ಟೇ ಗುರಿಯಾಗಿರದೆ ಜನ ಪ್ರಜ್ಞೆಯನ್ನು ಬೆಳೆಸುವುದು ಕನ್ನಡ ಜನಶಕ್ತಿಯ ಗುರಿ.

ಈ ಗುರಿಯನ್ನು ಸಾಧಿಸಲು ಕರ್ನಾಟಕದ ಚಳುವಳಿಗಾರ ಜನ, ಹೋರಾಟದ ಕಣದಲ್ಲಿ ಎಚ್ಚರಗೊಂಡ ಜನ ನೆರವಾಗಬೇಕು. 'ಕನ್ನಡ ಜನಶಕ್ತಿ'ಯನ್ನು ಜನರೆಲ್ಲರ ನಡುವೆ ಕೊಂಡೊಯ್ಯಬೇಕು. ಕನ್ನಡ ಬಲ್ಲ ದುಡಿವ ಜನರೆಲ್ಲರೂ ಕನ್ನಡ ಜನಶಕ್ತಿಯನ್ನು ತಮ್ಮದಾಗಿಸಿಕೊಳ್ಳಬೇಕು. ಕನ್ನಡ ಜನರ ಬಳಿಗೆ ಕನ್ನಡ ಜನಶಕ್ತಿಯ ವಿಚಾರಗಳನ್ನು ಕೊಂಡೊಯ್ಯಬೇಕು. ಕರ್ನಾಟಕದ ಜನಶಕ್ತಿ ತನ್ನ ಅಗಾಧ ಸಾಮರ್ಥ್ಯವನ್ನು ಸಾಧಿಸಬೇಕು.' ಏಳಿ, ಎಚ್ಚರಗೊಳ್ಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ'.

ಗೋ ರಕ್ಷಣೆಗೆ ಶಾಸ್ತ್ರ ಮತ್ತು ಶಸ್ತ್ರ ಬಳಸುವುದೆಂದರೆ...


ಈ ವಾರ ಕರ್ನಾಟಕ ಬಿಂದು ಸ್ಫೋಟ

■ ಎಸ್.ವೈ.ಗುರುಶಾಂತ್

ಅಲ್ಲಿ ಹೊಸನಗರದಲ್ಲಿ ಗೋ ಸಂರಕ್ಷಣೆಯ ಗೋಷ್ಠಿಗಳು ಬಿರುಸಿನಿಂದ ಸಾಗಿದ್ದವು. ಪುಷ್ಕಳವಾದ ಭೋಜನವೂ ಸಾಂಗೋಪಸಾಂಗವಾಗಿ ಒಳಗೆ ಸರಿಯುತ್ತಿತ್ತು. ಇಲ್ಲಿ ಗುಲ್ಬರ್ಗಾದ ಗಬ್ಬೂರು (ಬಿ) ಗ್ರಾಮದಲ್ಲಿ ಮಾವಿನ ಹಣ್ಣು ಕಿತ್ತಿದ್ದಾನೆಂದು ದಲಿತ ಬಾಲಕನ ಕಗ್ಗೊಲೆ ನಡೆದೇ ಹೋಯಿತು. ಈ ದಲಿತನ ಹತ್ಯೆ ಯಾವ 'ಗೋ ಗೋಷ್ಠಿ'ಯಲ್ಲೂ ಕೇಳಿಬರಲಿಲ್ಲ. ಕೇಳಿತಾದರೂ ಹೇಗೆ? ಅದು ಸಂಘಪರಿವಾರದ 'ಪಾವಿತ್ರ್ಯ'ದ ಸಮಯದಲ್ಲಿ! ದಲಿತ ಜೀವಕ್ಕೆ ಏನಾದರೂ ಬೆಲೆ ಇದ್ದರೆ ತಾನೆ?

ಗೋವಾಗಲೀ - ಇತರೆ ಯಾವುದೇ ಪ್ರಾಣಿಯಾಗಲೀ ಪ್ರೀತಿ - ಮಮಕಾರ ಇಟ್ಟುಕೊಳ್ಳಲು ವ್ಯಕ್ತಿಯೊಬ್ಬನು ಸ್ವತಂತ್ರನು! ಆದರೆ ಎಲ್ಲ ಪ್ರಾಣಿಗಳಂತೆ ಈ ನಭೋಮಂಡಲದಲ್ಲಿ ಜನಿಸಿ ಜೀವಿಸುವ ಗೋವಿನ ಬಗ್ಗೆಯೇ ಇಷ್ಟೊಂದು 'ಕಾಳಜಿ' ಯಾಕೆ? ಅಷ್ಟೊಂದು ವೈಭವೀಕರಣ ಯಾಕೆ? ಗೋವು ಉಚ್ಚ ಜಾತಿಯ ಬ್ರಾಹ್ಮಣರಿಗೆ ಈಗ ಪವಿತ್ರ ಎನಿಸುತ್ತಿದ್ದರೆ, ಕೋಳಿಯೂ ಸಹ ಈಶಾನ್ಯ ಭಾರತದ ಬುಡಕಟ್ಟು ಜನರಿಗೆ ಪವಿತ್ರವಾಗಿದೆ. ಕೋಳಿಯನ್ನು ತಿನ್ನಬಹುದು ಎಂದಾದರೆ ಗೋವನ್ನೇಕಲ್ಲ? ಈ ಸತ್ಯವನ್ನೇಕೆ ಪರಿಗಣಿಸುವುದಿಲ್ಲ? ಮನುವಿನ ಕಣ್ಣಲ್ಲಿ ಸಮಾನವಾಗಿರಲು ಸಾಧ್ಯವೇ? ಪರಮ ಪವಿತ್ರದ ನಡೆದ ನುಡಿ ಪಾಲಿಸಬೇಕಾದುದು 'ಧರ್ಮ ಸಂಹಿತೆ'ಯಲ್ಲವೇ? ಇದನ್ನೂ ಅವರೇ ಬರೆದಿಟ್ಟಿದ್ದಾರೆ.

ಭಾರಿ ಅಬ್ಬರದ ಪ್ರಚಾರದ, ವೈಭವೋಪೇತ ವ್ಯವಸ್ಥೆಗಳ ಈ ಗೋ ಸಂರಕ್ಷಣಾ ಸಮಾವೇಶದ ಅಂತಿಮ ಕರೆಯಾದರೂ ಏನು? ಇದರ ನೇತೃತ್ವ ವಹಿಸಿದ್ದ ರಾಘವೇಂದ್ರ ಭಾರತಿ ಸ್ವಾಮಿ ಕೊಟ್ಟ ಅಂತಿಮ ಸಂದೇಶ 'ಗೋರಕ್ಷಣೆಗೆ ಶಾಸ್ತ್ರ ಹಾಗೂ ಶಸ್ತ್ರ ಬಳಸಬೇಕು' ಎಂಬುದು! ಇದೊಂದು ಅತ್ಯಂತ ಅಪಾಯಕಾರಿಯಾದ ಕರೆ. ಯಾವುದೇ ನಾಗರಿಕ ನೀತಿ ಸಂಹಿತೆ, ಪ್ರಜಾಸತ್ತಾತ್ಮಕ ಕಾನೂನು ಹ'ಊಣ'ಗಾರಿಕ'ಯ'ಂ ಪರಿಪಾಲನೆಯಿಲ್ಲದೇ ವ್ಯಕ್ತಿಯೊಬ್ಬ ತಾನೇ ನ್ಯಾಯ ನಿರ್ಣಯಿಸಿ, ನೇರವಾಗಿ ಶಿಕ್ಷೆಯ ಜಾರಿಯನ್ನು ಮಾಡುವ ಫ್ಯಾಸಿಸ್ಟ್ ಕರೆ ಇದು. ಇದು ಜಾರಿಯಾಗತೊಡಗಿದರೆ ಏನೆಲ್ಲಾ ಅನಾಹುತ, ಅರಾಜಕತೆ ಸೃಷ್ಟಿಗೊಳ್ಳಬಹುದು? ಅಥವಾ ಈ ಪ್ರಯೋಗದಲ್ಲಿ ತೊಡಗಿರುವ ಕರ್ನಾಟಕದ ಆದಿ ಕರಾವಳಿ ಉಡುಪಿಯಂತಹ ಘಟನೆಗಳ ಕರಾಳ ನೆನಪೇ ಸಾಕಲ್ಲವೇ? ಖಾವಿ ಹೊದ್ದುಕೊಂಡ ಕರಸೇವಕರ ಇಂತಹ ಗುಪ್ತ ಅಜೆಂಡಾದ ಗೋಷ್ಠಿಯಲ್ಲಿ ನಾಗರೀಕ ಸರ್ಕಾರದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಭಾಗವಹಿಸುತ್ತಾರೆಂದರೆ? ಇಂತಹ ಪ್ರಜಾಪ್ರಭುತ್ವ ವಿರೋಧಿ - ಮಾನವ ವಿರೋಧಿ ಕೃತ್ಯಗಳ ಬಗ್ಗೆ ಚಕಾರವೆತ್ತಲಿಲ್ಲವೆಂದರೆ? ಇಂತಹ ಸಮಾವೇಶಕ್ಕೆ ಕೆಡಿಎಫ್ ಸರ್ಕಾರ ಸಾರ್ವಜನಿಕ ಬೊಕ್ಕಸದಿಂದ ಒಂದು ಕೋಟಿ ರೂಪಾಯಿ ನೀಡಿದ್ದಲ್ಲದೇ ಮತ್ತೆ ಸಮಾವೇಶದಲ್ಲೇ ಆರು ಕೋಟಿ ಒದಗಿಸಲು ಪ್ರಕಟಿಸಿದ್ದು ಸರ್ಕಾರವೇ ನರ ಸಂಹಾರ ಕಾರ್ಯಕ್ಕೆ ಪ್ರೋತ್ಸಾಹ, ಬೆಂಬಲ ನೀಡಿದಂತಲ್ಲವೇ?



ಸದ್ಯ ಗೋವಿನ ಪಾವಿತ್ರ್ಯ ಎಷ್ಟು ಎಂಬ ಬಗೆಗೆ, ಬ್ರಾಹ್ಮಣರೂ ಗೋ ಮಾಂಸ ಭಕ್ಷಿಸುತ್ತಿದ್ದ ಪೂರ್ವ ಇತಿಹಾಸದ ಮೀಮಾಂಸೆಯನ್ನು ಮತ್ತೊಮ್ಮೆ ಕೈಗೊಳ್ಳಬಹುದು. ಆದರೆ ಇತರರ ಆಹಾರವನ್ನು ಕಸಿಯಲು, ಏನು ತಿನ್ನಬೇಕು, ತಿನ್ನಬಾರದು ಎಂದು ನಿರ್ದೇಶಿಸಲು ಇವರಿಗೇನು ಹಕ್ಕಿದೆ?

ಗೋಮಾಂಸ ತಿನ್ನುವವರು ಕೇವಲ ಮುಸ್ಲಿಮರೇನಲ್ಲ. ಹಾಗೆ ಬಿಂಬಿಸುತ್ತಿರುವುದರಲ್ಲಿ ದುಷ್ಟ ಸಂಚಿದೆ. ದಲಿತರ, ಹಿಂದುಳಿದ ವರ್ಗಳಂತಹ ಶೂದ್ರರು ಆಹಾರ ಪದ್ಧತಿಯಲ್ಲಿ ಗೋಮಾಂಸ ಭಕ್ಷಣೆಯೂ ಸೇರಿದೆ. ಇನ್ನುಳಿದವರು 'ಗುಟ್ಟುಗುಟ್ಟಾಗಿ' ತಿನ್ನುವುದು ಗುಟ್ಟಿನ ಸಂಗತಿಯೇನಲ್ಲ. ಇಂತಹ ವಿವಿಧ ಜನಾಂಗಗಳ ವೈವಿಧ್ಯಮಯ ಆಹಾರ ಪದ್ಧತಿಯನ್ನು ನಿಯಂತ್ರಿಸುವುದು, ನಿರ್ಬಂಧಿಸುವುದು ಫ್ಯಾಸಿಸ್ಟ್ ಕ್ರಮ. ಮಾತ್ರವಲ್ಲ ಆಹಾರ ಪದ್ಧತಿಯ ಹೇರಿಕೆಯೂ ಕೂಡಾ.

ನನಗೆ ಇನ್ನೊಂದು ಘಟನೆ ನೆನಪಾಗುತ್ತದೆ. ಮಂಗಳೂರಿನ ಜಪ್ಪಿನಮೊಗರುವಿನಲ್ಲಿ ಡಿವೈಎಫ್ಐನ ಕಾರ್ಯಕ್ರಮವೊಂದಕ್ಕೆ ಹೋಗಿದ್ದೆ. ಇದು ಸುಮಾರು 6-7 ವರುಷಗಳ ಹಿಂದಿನ ಮಾತು.ಈ ಪ್ರದೇಶದಲ್ಲೊಂದು ಯಜ್ಞ ನಡೆಯುತ್ತಿತ್ತು. ಸಾರ್ವಜನಿಕ ಸಮಾರಂಭದಲ್ಲಿ ನಾನು ಮಾತನಾಡುವಾಗ ಈ ಯಜ್ಞದ ಬಗ್ಗೆ ಮಾತನಾಡದಂತೆ ನನಗೆ ಸಲಹೆ ನೀಡಿದರು. ಅಲ್ಲಿಯ ಕೆಲವರು ಉದ್ರೇಕಗೊಂಡು ಕಲ್ಲು ತೂರಿ ಆಕ್ರಮಣ ಮಾಡಬಹುದು ಎಂದು! ಆಗಲಿ ಬಿಡಿ ನೋಡೋಣ ಎಂದಾಗ ಬೇಡವೇಬೇಡ ಎಂದು ಪರಿಪರಿಯಾಗಿ ಕೇಳಿಕೊಂಡರು. ಅವರ ಕಾಳಜಿ ಏನೇ ಇರಲಿ ಆದರೆ ಆ ಪ್ರದೇಶದಲ್ಲಿ ಯಜ್ಞದ ಬಗ್ಗೆ ಮತ್ತು ತುಪ್ಪ, ಬಟ್ಟೆ, ಹಾಲು ಇತ್ಯಾದಿ ಅಪಾರವಾದ ವಸ್ತುಗಳನ್ನು ಬೆಂಕಿಗೆ ಹಾಕುವುದರ ಬಗ್ಗೆ ಯಾರೂ ಮಾತಾಡಬಾರದು ಎಂಬ ವಾತಾವರಣ ಸೃಷ್ಟಿಯಾಗಿತ್ತು. ಸಮಾರಂಭ ಮುಗಿದ ಬಳಿಕ ಊಟಕ್ಕೆ ಹಿತೈಷಿಗಳ ಮನೆಗೆ ಹೋದಾಗ ಅಲ್ಲಿ ಇನ್ನೊಂದು ಅಂಶ ತಿಳಿದು ಆಶ್ಚರ್ಯ ಹಾಗೂ ಆತಂಕಿತನಾದೆ. ಯಜ್ಞ ನಡೆಯುತ್ತಿರುವುದರಿಂದ ಆ ಒಂದು ವಾರದ ಕಾಲ ಯಾರೂ ಮಾಂಸಾಹಾರದ ಅಡಿಗೆ ಮಾಡುವಂತಿಲ್ಲ ಎಂಬ ನಿಷೇಧ ಹೇರಲಾಗಿತ್ತು! ಮಾಂಸಾಹಾರ ಆಹಾರ ಪದ್ಧತಿಯಲ್ಲಿ ಹಾಸುಹೊಕ್ಕಾಗಿರುವ ಕರಾವಳಿಯಲ್ಲಿ ಇಂತಹದ್ದೊಂದು ಫರ್ಮಾನು! ಇದನ್ನು ಒಪ್ಪಿಸಲು ಹಲವಾರು ನಯ ನಾಜೂಕಿನ ವಾದಗಳು. ತಪ್ಪಿದರೆ ಸರಿಯಾದ ಬಡಿತ! ಇದನ್ನೇ 'ಗೋ-ಸ್ವಾಮಿ' ಹೇಳಿದ್ದು 'ಶಾಸ್ತ್ರ ಹಾಗೂ ಶಸ್ತ್ರ' ಎಂದಿರಬೇಕು. ಇಂತಹ ಮಾತುಗಳು, ಕೃತಿಗಳು ಸೃಷ್ಟಿಯಾಗುವುದೇ ಆರ್.ಎಸ್.ಎಸ್. ಪ್ರಯೋಗ ಶಾಲೆಯಲ್ಲಿ. ಇಂತಹ ಯತ್ನಗಳ ನಾಗರ ಮೆಲ್ಲನೇ ತಲೆ ಎತ್ತುತ್ತಿರುವಾಗಲೇ ಸರಿಯಾಗಿ ನೋಡಿಕೊಂಡು ಪ್ರತಿರೋಧಿಸಿದ್ದರೆ? ನೋಡಿ ಇಂದಿನ ಕರಾವಳಿ ಹೀಗಿರುತ್ತಿರಲಿಲ್ಲ ಎನ್ನಿಸುತ್ತದೆ. ಧಾರ್ಮಿಕ ಆಚರಣೆ - ಉಪದೇಶಗಳ ಮುಖದ ಹಿಂದಿನ ಕರಾಳ ಸತ್ಯಗಳನ್ನು ಆಗಿದ್ದಾಗ್ಗೆ ಅರಿತು ಉತ್ತರ ನೀಡುತ್ತಲೇ ಇರಬೇಕಾಗುತ್ತದೆ. 'ವಂದೆ ಮಾತರಂ' ಎಂದು ಹೇಳುತ್ತಲೇ ದೇಶಭಕ್ತಿಯ ಸೋಗಿನಲ್ಲಿ 'ವಂದೆ ಮಾತರಂ ನ ಕಹತೋ ಹಿಂದೂಸ್ತಾನ್ ಛೋಡ್ನಾ ಹೋಗ' ಎಂದು ಅಲ್ಪಸಂಖ್ಯಾತರಲ್ಲಿ ಆತಂಕ ಹುಟ್ಟಿಸುತ್ತಿರುವ ಈ ಸಂತತಿಯೇ 'ವಂದೇ ಗೋ ಮಾತರಂ' ಎನ್ನುತ್ತಿದೆ. ಇದಕ್ಕೆ ನಾವೀಗ ಏನು ಹೇಳಬೇಕು, ಏನು ಮಾಡಬೇಕು... 'ದುಷ್ಟರ ಅಟ್ಟಹಾಸಕ್ಕೆ, ಶಿಷ್ಟರ ಮೌನವೇ ಸಾಕು' ಎಂಬುದು ನೆನಪಿದೆಯಲ್ಲಾ!

ಸಿಲಿಕಾನ್ ನೆರಳು

ಡಿವೈಎಫ್ಐ ಮುಖಂಡನ ಕೊಲೆ ಯತ್ನ

ಆನೇಕಲ್‌ನ ಡಿವೈಎಫ್ಐ ಮುಖಂಡ ಸುರೇಶ್ ಮೇಲೆ ಇಲ್ಲಿನ ಬಿ.ಜೆ.ಪಿ. ಗೂಂಡಾಗಳು ಕೊಲೆ ಯತ್ನ ನಡೆಸಿದ್ದು ಇದನ್ನು ಖಂಡಿಸಿ ಡಿವೈಎಫ್ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾ ವರಿಷ್ಠಾಧಿಕಾರಿ ಕಛೇರಿ ಎದುರು ಏಪ್ರಿಲ್ 19 ರಂದು ಪ್ರತಿಭಟನೆ ನಡೆಸಲಾಯಿತು. ಆನೇಕಲ್ ಪಟ್ಟಣದ ನಾರಾಯಣಪುರ ಎಂಬಲ್ಲಿ ಘಟಕದ ಸಭೆ ಮುಗಿಸಿ ಮನೆಗೆ ತೆರಳುತ್ತಿರುವ ಸಂದರ್ಭದಲ್ಲಿ ಇಲ್ಲಿನ ಬಿಜೆಪಿ ಗೂಂಡಾಗಳು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಜನಪರ ಚಳುವಳಿ ಕಾರ್ಯಕ್ರಮಗಳನ್ನು ಸಹಿಸದ ಚಿಡ್ಡಿಗಳು ಡಿವೈಎಫ್ಐ ಮುಖಂಡನ ಕೊಲೆಗೆ ಯತ್ನ ನಡೆಸಿದ್ದಾರೆ. ಇಲ್ಲಿನ ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದರೂ ಕೂಡ ಆರೋಪಿಗಳ ವಿರುದ್ಧ ಕ್ರಮಗೊಂಡಿಲ್ಲ; ಮಾತ್ರವಲ್ಲ ಆರೋಪಿಗಳು ಸುರೇಶ್ ಚಿಕಿತ್ಸೆ ಪಡೆಯುತ್ತಿರುವ ಜಿಲ್ಲಾ ಆಸ್ಪತ್ರೆಗೆ ತೆರಳಿ ಬೆದರಿಕೆಯನ್ನು ಒಡ್ಡಿದ್ದಾರೆ. ಆದರೂ ಇಲ್ಲಿನ ಪೋಲೀಸ್ ಅಧಿಕಾರಿಗಳ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿನ್ನಲೆಯಲ್ಲಿ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ಹಾಗೂ ಆರೋಪಿಗಳ ಪರವಾಗಿ ಕೆಲಸಮಾಡುತ್ತಿರುವ ಎಸ್.ಐ. ರಾಜೇಶ್ ನನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿ ನಗರದ ಜಿಲ್ಲಾ ವರಿಷ್ಠಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಭರತ್‌ರಾಜ್, ಭಾಗವಹಿಸಿ ಆರೋಪಿಗಳನ್ನು ಕೂಡಲೇ ಬಂಧಿಸು ವಂತೆ ಆಗ್ರಹಿಸಿದರು. ಪ್ರತಿಭಟನೆ ಬೆಂಬಲಿಸಿ ಎಆರ್‌ಡಿಯು, ಜೆಎಂಎಸ್, ಕೆಪಿಆರ್‌ಎಸ್, ಎಸ್‌ಎಫ್‌ಐನ ಮುಖಂಡರು ಮಾತನಾಡಿದರು. ಡಿವೈಎಫ್ಐ ಮುಖಂಡರಾದ ನಾಗರಾಜ್, ವೆಂಕಟೇಶ್, ಮಂಜುನಾಥ ಅವರ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಜಿಲ್ಲಾ ವರಿಷ್ಠಾಧಿಕಾರಿ ಕೆ.ಶ್ರೀನಿವಾಸ್ ಮನವಿ ಸ್ವೀಕರಿಸಿ ತಕ್ಷಣ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ ಮೇಲೆ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು.

ವರದಿ: ಲಿಂಗರಾಜು

ಕಡಲತಡಿ

ಕಾಂಗ್ರೆಸ್ಸಿನ ಮಹಿಳಾ ಕಾರ್ಪೋರೇಟರ್ ಮೇಲೆ ಭಜರಂಗಿಗಳ ಹಲ್ಲೆ

ಬಾಯಿಮುಚ್ಚಿ ಜಾತ್ಯಾತೀತತೆ ಮೆರೆದ ಕಾಂಗ್ರೆಸ್

ದ.ಕ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸ್ಥಿತಿ ಹೇಳಲು ಅಸಾಧ್ಯವಾದ ಬೌದ್ಧಿಕ ದಾರಿದ್ರ್ಯತೆಗೆ ಇಳಿಯುತ್ತಿದೆ. ಅತ್ತ ಸಂಘ ಪರಿವಾರದ ಅರ್ಭಟ ಮತ್ತೆ ಮೆರೆ ಮೀರುತ್ತಿದೆ. ತುಘಲಕ್ ದರ್ಬಾರಿನ ಎಸ್.ಪಿ. ದಯಾನಂದ ಪ್ರಜಾಪ್ರಭುತ್ವದ ಹಕ್ಕುಗಳ ಮೇಲೆ ಹಲ್ಲೆ ನಡೆಸಿ ಮೆರವಣಿಗೆಯನ್ನು, ಚಳುವಳಿಯನ್ನು ಹತ್ತಿಕ್ಕಲು ನೀತಿ ನಿರೂಪಣೆಯನ್ನು ಹೇರಿ ತನ್ನ ಧಾಳಿಯನ್ನು ಮುಂದುವರಿಸಿದ್ದಾರೆ.

ಮಹಿಳಾ ಕಾರ್ಪೋರೇಟರ್ ಸೋನಿಯಾ ಡಿಸೋಜಾರ ಮೇಲೆ ಹಲ್ಲೆ : ಮಾರ್ಚ್ ತಿಂಗಳ ಕೊನೆಯ ವಾರದ ಪ್ರಥಮದಲ್ಲಿ ರಾತ್ರಿ ಮಂಗಳೂರಿನ ಕಂಕನಾಡಿ ಹೋಟೆಲೊಂದರಲ್ಲಿ ಕೆಲವು ಮುಸ್ಲಿಂ ವ್ಯಕ್ತಿಗಳೊಂದಿಗೆ ಊಟ ಮಾಡಿದ್ದಾರೆ ಎಂಬ ಕಾರಣಕ್ಕೆ ನಾಲ್ಕೈದು ಜನರಿದ್ದ ಭಜರಂಗದಳದ ಯುವಕರು ಕಾರ್ಪೊರೇಟರ್ ಸೇರಿದಂತೆ ಸಂಬಂಧಿತ ಎಲ್ಲರೂ ಹೋಟೇಲಿನಿಂದ ಹೊರಬರುತ್ತಿದ್ದಂತೆ ಮೇಲೆರಗಿ ಧಾಳಿ ನಡೆಸಿದ್ದಾರೆ. ಹಿಂದೂ ಯುವತಿಯರೊಂದಿಗೆ ಮುಸ್ಲಿಂ ಯುವಕರು ಮಾತುಕತೆಯಾಡುತ್ತಿದ್ದಾರೆಂಬ ಕಾರಣಕ್ಕೆ ಧಾಳಿ ನಡೆಸುತ್ತಿದ್ದ ಸಂಘ ಪರಿವಾರದ ಈ ಪುಂಡರುಗಳು ಸೋನಿಯಾರವರು ಕ್ರೈಸ್ತ ಮತದವರಾಗಿದ್ದರೂ ಹಲ್ಲೆ ನಡೆಸಿದ್ದಾರೆ. ಪೋಲೀಸರು ದೂರು ದಾಖಲಿಸಿ ಕೆಲವರನ್ನು ಕೋರ್ಟಿಗೆ ಶರಣಾಗುವಂತೆ ಅವಕಾಶ ಕಲ್ಪಿಸಿ ಎಲ್ಲವೂ ಮಾಮೂಲಿನಂತೆ ವ್ಯವಹಾರ


ಸೋನಿಯಾ ಡಿಸೋಜಾ

ಕುದುರಿಸಿದ್ದಾರೆ. ಉಸ್ತುವಾರಿ ಮಂತ್ರಿಯ ಕೃಪಾಕಟಾಕ್ಷ ಈ ಪ್ರಕರಣದ ಆರೋಪಿಗಳಿಗೆ ದೊರತು ಠಾಣೆಯಲ್ಲಿ ಅವರಿಗೆ ರಾಜಮರ್ಯಾದೆ ದೊರೆತಿದೆ. ಪರಿಸ್ಥಿತಿ ಈ ರೀತಿ ಇದ್ದರೆ ಇತ್ತ ಕಾಂಗ್ರೆಸ್ಸಿಗೆ ಕುಂಭಕರ್ಣ ನಿದ್ರೆಯಿಂದ ಹೊರಬರಲು ಸಾಧ್ಯವಾಗಿಲ್ಲ. ಕನಿಷ್ಟ ಈ ಘಟನೆಯನ್ನು ಅಧಿಕೃತವಾಗಿ ಕಾಂಗ್ರೆಸ್ಸು ಪಕ್ಷ ಖಂಡಿಸಿಲ್ಲ. ಪ್ರತಿಭಟನೆಯ ಮಾತು ಇಲ್ಲವೇ ಇಲ್ಲ. ತನ್ನ ಪಕ್ಷದ ಜನ ಪ್ರತಿನಿಧಿಯೋರ್ವರಿಗೆ ಮತೀಯ ಪ್ರೇರಿತ ಹಲ್ಲೆ ನಡೆಧಾಗ ಅದನ್ನು ಪ್ರತಿಭಟಿಸುವ, ಟೀಕಿಸುವ ಖಂಡಿಸುವ ಎಲ್ಲಾ ಮೌಲ್ಯಗಳನ್ನು ಕಳೆದುಕೊಂಡು ಕಾಂಗ್ರೆಸ್ಸು ಕೋಮುವಾದಿಗಳಿಗೆ ಸಂಪೂರ್ಣ ಶರಣು ಆಗಿದೆ. ವೈಯಕ್ತಿಕ ನೆಲೆಯಲ್ಲಿ ಸುರತ್ಕಲ್ ಕ್ಷೇತ್ರದ ಮಾಜಿ ಎಂ.ಎಲ್.ಎ.ವಿಜಯಕುಮಾರ್ ಶೆಟ್ಟಿ ಮಾತ್ರ ಖಂಡಿಸಿದ್ದಾರೆ. ಉಳಿದಂತೆ ಮಹಿಳೆಯರಿಗೆ ನ್ಯಾಯಯುತವಾಗಿ ದೊರಕಬೇಕಾದ ಮೇಯರ್‌ಗಿರಿ ದೊರೆತಿಲ್ಲ ಎಂದು ಹೇಳಿ ಕೋರ್ಟಿನ ಕಟ್ಟೆ ಹತ್ತಿ ಜಯಶಾಲಿಯಾದ ಹಾಲಿ ಮೇಯರ್ ಶ್ರೀಮತಿ ವಿಜಯ್ ಅರುಣ್‌ರವರಿಗೆ ತನ್ನದೇ ಸಹೋದ್ಯೋಗಿ ಸೋನಿಯಾ ಡಿಸೋಜಾರವರ ಮೇಲೆ ನಡೆದ ಹಲ್ಲೆ ಗೌಣವಾಗಿ ಖಂಡಿದೆ ಎಂತಹ ವಿಚಿತ್ರ!?

ನಾಗಮಂಡಲ ಬ್ರಹ್ಮ ಕಲಶೋತ್ಸವ, ಸಮಾಜೋತ್ಸವ, ಕಾರ್ಯಕ್ರಮಗಳಲ್ಲಿ ಸಂಘ ಪರಿವಾರಕ್ಕೆ ದೊರೆಯುತ್ತಿರುವ ಪ್ರಚಾರದ ಪಾಲನ್ನು ಕಸಿದುಕೊಳ್ಳಲು ಹವಣಿಸುತ್ತಿರುವ ಕಾಂಗ್ರೆಸ್ ಪಕ್ಷ ಮತ್ತು ನಾಯಕರಿಗೆ, ಕರಾವಳಿ ಅಲೆ ಪ್ರಕರಣವಂತೂ ಗೌಣವಾಗಿತ್ತು. ಕಾರ್ಪೋರೇಟರ್ ಮೇಲಿನ ಹಲ್ಲೆಯೂ ಗೌಣವಾಗಿದೆ.

ಇವೆಲ್ಲವುಗಳ ಮಧ್ಯೆ ಪ್ರತಿಭಟನೆ, ಚಳುವಳಿಯನ್ನು ದಮನ ಮಾಡಲು ಎಸ್.ಪಿ. ದಯಾನಂದರವರು ರೂಪಿಸಿರುವ ಕರಾಳ ನೀತಿಯೂ ಕಾಂಗ್ರೆಸಿನ ಗಮನ ಸೆಳೆದಿಲ್ಲ. ಎಲ್ಲಾ ರೀತಿಯ ರಾಜಕೀಯ ಚಟುವಟಿಕೆಗೆ ಕಡಿವಾಣ ಹಾಕಲಾಗಿದೆ. ಮೈಕ್ ಪರವಾನಗಿ ಕನಸಿನ ಮಾತಾಗಿದೆ ಅಥವಾ ಅದು ಭಿಕ್ಷೆಯಂತಾಗಿದೆ. ಹಾಲಿ ಪ್ರಸ್ತಾಪದ ಪ್ರಕಾರ ತಿಂಗಳಿಗೊಂದು ಪ್ರತಿಭಟನೆ ಅಸಾಧ್ಯವಾದುದಾಗಿದೆ. ಆದರೆ ಧಾರ್ಮಿಕ ಕಾರ್ಯಕ್ರಮಗಳು ಇದರಿಂದ ಹೊರತಾಗಿದೆ. ಅವುಗಳ ಮೆರವಣಿಗೆಗೆ, ಉದ್ರೇಕಕಾರಿ ಭಾಷಣಕ್ಕೆ ಅವಕಾಶವಿದೆ. ಶವಯಾತ್ರೆಗೆ ಉಜ್ವಲ ಮರ್ಯಾದೆ ಕಲ್ಪಿಸಲಾಗಿದೆ. ಒಟ್ಟಿನಲ್ಲಿ ಸಾಮಾನ್ಯರ ಅಮಾಯಕರ ಬದುಕು ಗಾಣಕ್ಕೆ ಸಿಕ್ಕಿದ ಕಬ್ಬಿನಂತಾಗಿದೆ. ಜನಪರ ಶಕ್ತಿಗಳು ಈ ಪರಿಸ್ಥಿತಿಯನ್ನು ಎದುರಿಸಿ ಸೆಣಸಬೇಕಿದೆ.

ವರದಿ : ಕೃಷ್ಣಪ್ಪ ಕೊಂಚಾಡಿ

ಮುಸ್ಲಿಂ ಮಹಿಳೆಯರು ಪ್ರಜ್ಞಾವಂತರಾಗಲು ಸಾರಾ ಅಬೂಬಕರ್ ಕರೆ

ಮುಸ್ಲಿಂ ಮಹಿಳೆಯರು ಸಾಕಷ್ಟು ವಿದ್ಯಾವಂತರಾಗಿ ಆರ್ಥಿಕ ಸ್ವಾವಲಂಬನೆ ಪಡೆದು ಪ್ರಜ್ಞಾವಂತರಾಗಿ ಸಂಘಟಿತ ಹೋರಾಟದಿಂದ ಮಹಿಳೆಯರಿಗಾಗುವ ಶೋಷಣೆಯಿಂದ ಮುಕ್ತರಾಗಬೇಕೆಂದು ಖ್ಯಾತ ಸಾಹಿತಿ ಸಾರಾ ಅಬೂಬಕರ್‌ರವರು ಕರೆ ನೀಡಿದರು. ಅವರು ಇತ್ತೀಚಿಗೆ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬೆಳ್ತಂಗಡಿಯಲ್ಲಿ ನಡೆದ ಮುಸ್ಲಿಂ ಮಹಿಳೆಯರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಖುರಾನ್ ಮತ್ತು ಪೈಗಂಬರರ ಬರಹಗಳು ಮುಸ್ಲಿಂ ಮಹಿಳೆಯರನ್ನು ಈಗ ಇರುವ ಪ್ರಮಾಣದಲ್ಲಿ ಶೋಷಣೆ ಮಾಡಲು ಅನುಮತಿ ನೀಡಲಿಲ್ಲ. ಈ ವಿಷಯವನ್ನು ಗುಪ್ತವಾಗಿಇಟ್ಟುಕೊಂಡು ಕೆಲವು ವ್ಯಕ್ತಿಗಳು ಬಹು ಪತ್ನಿತ್ವ ಮತ್ತು ತಲಾಕ್ ಮೂಲಕ ಮುಸ್ಲಿಂ ಮಹಿಳೆಯರ ಶೋಷಣೆಗೆ ಅನುವು ಮಾಡಿಕೊಡುತ್ತಿದ್ದಾರೆ ಎಂದು ತಿಳಿಸಿದರು. ರೈತ ಸಂಘ ಬಡಜನರ ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದಿಸಲು ಈ ರೀತಿ ಸಮಾವೇಶಗಳನ್ನು ಮಾಡುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ನ್ಯಾಯವಾದಿ ನೂರನ್ನೀಸ ಕಾನೂನು ಮಾಹಿತಿ ನೀಡಿ ಸಂಕಷ್ಟಕ್ಕೊಳಗಾದ ಮಹಿಳೆಯರಿಗೆ ಸಹಕರಿಸುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸುಕನ್ಯ ವಹಿಸಿದ್ದರು. ತಾಲ್ಲೂಕಿನ ಹಲವಾರು ಗ್ರಾಮಗಳಿಂದ ಬಂದ ಮಹಿಳೆಯರು ಅವರ ಸಂಕಷ್ಟಗಳನ್ನು ಸಮಾವೇಶದಲ್ಲಿ ಮುಂದಿಟ್ಟು ಚರ್ಚಿಸಿದರು. ಪರಿಮಳ ಕಾರ್ಯಕ್ರಮಕ್ಕೆ ಸ್ವಾಗತ ನೀಡಿ ಯಶೋಧ ಧನ್ಯವಾದ ನೀಡಿದರು.

ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಕೇಳಿ ಇತ್ಯರ್ಥಗೊಳಿಸಲು ಸ್ಥಾಯಿ ಸಮಿತಿ ರಚಿಸಲಾಯಿತು. ಸಮಿತಿ ಅಧ್ಯಕ್ಷೆಯಾಗಿ ನ್ಯಾಯವಾದಿ ನೂರುನ್ನೀಸಾ, ಮತ್ತು ಪದಾಧಿಕಾರಿಗಳಿಗಾಗಿ ಫಾತಿಮಾ, ಜುಲೈಖಾ, ಸಾರಮ್ಮ, ಅಸ್ಮತ್, ನೆಬೀಸಾ, ಸಬೀನಾ, ಆಯಿಷಾಬಿ, ಅತಿಜಮ್ಮಾ ಇವರನ್ನು ಆರಿಸಲಾಯಿತು. 40 ಜನರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ.

ಬಡವರಿಗೆ ಭೂಮಿ ನೀಡಿ ಅಂದರೆ ತಪ್ಪೇ?

ಹೈಟೆಕ್ ಸಿಟಿ ಬೆಂಗಳೂರಿನಲ್ಲಿ ಭೂಗಳ್ಳತನ ಮಾಮೂಲಿ. ಸರಕಾರಕ್ಕೆ ಸೇರಿದ ಕೋಟ್ಯಂತರ ರೂ. ಮೌಲ್ಯದ ಆಸ್ತಿ ಭೂಮಾಫಿಯಾ, ಕಳ್ಳಕಾಕರ ವಶದಲ್ಲಿದೆ. ಹಾಗಂತ ಹೇಳುತ್ತಿರುವುದು ಯಾವುದೇ ಸಂಘಟನೆಯಲ್ಲ. ಸ್ವತಃ ಸರ್ಕಾರವೇ ರಚಿಸಿದ ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ.

ಇಂತಹ ಅತಿಕ್ರಮಣದಾರರಿಂದ ಒತ್ತುವರಿಯನ್ನು ತೆರವುಗೊಳಿಸಿದ ಭೂಮಿಯನ್ನು ಭೂರಹಿತ ಬಡ ಕುಟುಂಬಗಳಿಗೆ ಹಂಚಬೇಕೆಂದು ಸಿಪಿಐ(ಎಂ) ಎಪ್ರಿಲ್ 25ರಂದು ಪ್ರತಿಭಟನೆ ನಡೆಸಿತು. ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ನೂರಾರು ಕಾರ್ಯಕರ್ತರನ್ನು ಬಂಧಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಮುಖಂಡರ ಸಹಿತ ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರನ್ನು ಥಳಿಸಿ ಎಳೆದಾಡಿ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ಶ್ರೀಮಂತರಿಗೆ ಭೂಮಿಯನ್ನು ಹರಾಜು ಮಾಡುವ ಬದಲು ಆಶ್ರಯ ಮನೆಗಳನ್ನು ನಿರ್ಮಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಇದರಲ್ಲಿ ತಪ್ಪೇನಿದೆ. ಈ ದೌರ್ಜನ್ಯವನ್ನೂ ಏ. 27 ರಂದು ಮತ್ತೆ ಪ್ರತಿಭಟಿಸಲಾಯಿತು. ಈ ಪ್ರತಿಭಟನೆಗಳ ನೇತೃತ್ವವನ್ನು ಕೆ. ಪ್ರಕಾಶ್, ಕೆ.ಎನ್. ಉಮೇಶ್, ಗೌರಮ್ಮ ಗೋಪಾಲಕೃಷ್ಣ ಮೊದಲಾದವರು ವಹಿಸಿದ್ದರು.





ಹರೆ ಕೃಷ್ಣಾ... ಹರೆ ರಾಮ.... ಎಂದು ಮೂರು ನಾಮ ಹಾಕಿಕೊಂಡು ದೇವರನ್ನು ಸ್ಮರಿಸುತ್ತೇವೆ ಎನ್ನುವ ಈ ಜನ ಈಗ ಬಡಮಕ್ಕಳ ಹೆಸರಿನಲ್ಲಿ ದೇಶ-ವಿದೇಶಗಳಲ್ಲಿ ಚಂದಾ ಎತ್ತಿ ಹಣ ಮುಕ್ಕತೊಡಗಿದ್ದಾರೆ. ಈ ಬಗ್ಗೆ ಇಲ್ಲಿ ಒಂದು ತನಿಖಾ ವರದಿ.

ಇಸ್ಕಾನ್ ಎಂದರೆ ರಾಮ-ಕೃಷ್ಣರ ಹೆಸರಲ್ಲಿ ಪಂಗನಾಮ....!?

ಕೆ. ಮಹಾಂತೇಶ್

ಹತ್ತಾರು ವರ್ಷಗಳ ಕಾಲ ಕೃಷ್ಣ ಪ್ರಜ್ಞೆ ಬೆಳೆಸುತ್ತೇವೆ ಎಂಬ ಸೋಗಿನಲ್ಲಿ ಸಹಸ್ರಾರು ಕೋಟಿ ವಿದೇಶಿ ಹಣವನ್ನು ಕಬಳಿಸಿದ 'ಇಸ್ಕಾನ್' ಎಂಬ ಧಾರ್ಮಿಕ ಸಂಸ್ಥೆ ಇದೀಗ 'ಅಕ್ಷಯ ಪಾತ್ರೆ ಹೆಸರಿನಲ್ಲಿ' ಭಾರತದ ಲಕ್ಷಾಂತರ ಹಸಿದ ಕಂದಮ್ಮಗಳ ಬಾಡಿದ ಮುಖವನ್ನು ತೋರಿಸಿ ಭಾರೀ ನಾಜೂಕಿನಿಂದ ದಾನಿಗಳನ್ನು ಮರುಳು ಮಾಡಿ ಕೋಟಿಗಟ್ಟಲೇ ಹಣ ಸಂಗ್ರಹಿಸುವ ದಂಧೆಯಲ್ಲಿ ನಿರತವಾಗಿದೆ.

ಕಂದಮ್ಮಗಳನ್ನು ಮರಳಿ ಶಾಲೆಗೆ ಕರೆದ 'ಬಿಸಿಯೂಟ'

ದೇಶದಲ್ಲಿ ಶಾಲೆಯಿಂದ ಹೊರಗಿರುವವರು ಕೋಟಿಗಟ್ಟಲೇ ಜನ ಮಕ್ಕಳು. ಮಧ್ಯಾಹ್ನ ಶಾಲೆಯಲ್ಲಿ ಬಿಸಿಊಟ ಕೊಡಬೇಕೆಂದು ಆಳುವ ಸರ್ಕಾರಗಳಿಗೆ ದೇಶದ ಸುಪ್ರೀಂಕೋರ್ಟ್ 2001 ರಲ್ಲಿ ತಾಕೀತು ಮಾಡಿದ ಮೇಲೆ ಈ ಯೋಜನೆ ರಾಷ್ಟ್ರವ್ಯಾಪಿ ಜಾರಿಗೆ ಬಂದಿದೆ.

'ಕರ್ನಾಟಕದಲ್ಲಿ ಅಕ್ಷರ ದಾಸೋಹ'

ಈ ಯೋಜನೆ ಭಾಗವಾಗಿ ರಾಜ್ಯದಲ್ಲಿ ಅಂದಿನ ಎಸ್.ಎಂ. ಕೃಷ್ಣ ಸರ್ಕಾರ. ಈ ಯೋಜನೆಯನ್ನು ಕರ್ನಾಟಕದ ಅತ್ಯಂತ ಹಿಂದುಳಿದ ತಾಲ್ಲೂಕಾದ ದೇವದುರ್ಗದ ಅರಕೇರಾ ಗ್ರಾಮದ ಶಾಲೆಯಲ್ಲಿ 2002 ರಲ್ಲಿ ವಿಧ್ಯುಕ್ತವಾಗಿ ಚಾಲನೆ ನೀಡಿತ್ತು. ನಂತರ 2003ರಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಯಿತು.

ಯೋಜನೆಯ ಆಶಯವೇನು?

ಹಸಿದ ಕಂದಮ್ಮಗಳಿಗೆ ಉತ್ತಮ ಪೌಷ್ಠಿಕ ಆಹಾರವನ್ನು ಒದಗಿಸಿ ಅವರನ್ನು ಮರಳಿ ಶಾಲೆಯತ್ತ ಕರೆತರುವುದು. ಅವರ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು. ಈ ಯೋಜನೆಯ ಘೋಷಿತ ಉದ್ದೇಶವಾದರೂ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ಅಸಮಾನತೆ ಮತ್ತು ಅಸ್ಪೃಶ್ಯತೆಗೆ ಏಟು ನೀಡುವ ಕೆಲಸ ಸಹ ಇದರಿಂದ ಆಗಿದೆ. ಏಕೆಂದರೆ ಬಿಸಿಯೂಟ ನೌಕರರಲ್ಲಿ ಅಸ್ಪೃಶ್ಯರೂ, ಶೂದ್ರರೂ, ಹಿಂದುಳಿದವರೂ, ವಿಧವೆಯರೂ ಇರುತ್ತಾರೆ. ಆರಂಭದಲ್ಲಿ ಹಲವಾರು ಶಾಲೆಗಳಲ್ಲಿ 'ಬಹಿಷ್ಕಾರ' ಇತ್ಯಾದಿಗಳು ನಡೆದರೂ ಅಂತಿಮವಾಗಿ ರಾಜ್ಯದ 43 ಸಾವಿರ ಶಾಲೆಗಳಲ್ಲಿ ಸರ್ಕಾರದ ಅಕ್ಷರ ದಾಸೋಹ ಯೋಜನೆ ಕಾರ್ಯ ನಿರ್ವಹಿಸುತ್ತಿದೆ. 60 ಲಕ್ಷ ಮಕ್ಕಳು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ ಮತ್ತು ವಿಶೇಷವಾಗಿ 1 ಲಕ್ಷಕ್ಕಿಂತ ಅಧಿಕ ಮಹಿಳೆಯರಿಗೆ ಇದರಲ್ಲಿ ಉದ್ಯೋಗಾವಕಾಶ ದೊರೆತಿದೆ. ಆದರೆ ಬಿಸಿಯೂಟ ಮಾಡುವ ಈ ಲಕ್ಷಾಂತರ ಮಹಿಳೆಯರು ತಮ್ಮ ಕನಿಷ್ಠ ಬೇಡಿಕೆಗಳಿಗಾಗಿ ಈಗ ಹೋರಾಟ ನಿರತರಾಗಿದ್ದಾರೆ. ಅದು ಬೇರೆಯ ಮಾತು.



'ವಕ್ಕರಿಸಿದ ಸ್ವಯಂಸೇವಾ ಮುಖವಾಡಗಳು'

ದೇಶದಲ್ಲಿ ಉದಾರೀಕರಣ ನೀತಿಗಳು ಜಾರಿಯಾದ ದಿನಗಳಿಂದಲೇ ಈ ಸ್ವಯಂ ಸೇವಾ ಸಂಸ್ಥೆಗಳೆಂಬ ನಾಯಿ ಕೊಡೆಗಳು ಲಕ್ಷಾಂತರ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಅದುವರೆಗೂ ವಿದೇಶಿ ಹಣವನ್ನು ನುಂಗಿ ಹಾಕಿದ್ದ ಈ ಸಂಸ್ಥೆಗಳು. 90ರ ನಂತರ ದೇಶದ ಹಣವನ್ನು ಸ್ವಾಹ ಮಾಡತೊಡಗಿದವು. ಅದಕ್ಕೆ ಪ್ರಮುಖ ಕಾರಣ. ಕೇಂದ್ರ ಸರ್ಕಾರದ ನೀತಿ. ಕೇಂದ್ರ ಸರ್ಕಾರ ಜಾರಿ ಮಾಡುವ ಪ್ರತಿಯೊಂದು ಯೋಜನೆಯ ಅನುಷ್ಠಾನಗಳು ಮತ್ತು ಸ್ವಯಂ ಸೇವಾ ಸಂಘಟನೆಗಳಿಲ್ಲದೆ ಜಾರಿ ಸಾಧ್ಯವಿಲ್ಲ ಎಂಬಂತಹ ಸ್ಥಿತಿ ನಿರ್ಮಿಸಲಾಗಿದೆ.

90ರಿಂದ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ಹಿಂದೆ ಸರಿಯುತ್ತಿರುವ ಸರ್ಕಾರ, ಸ್ವತಃ ಅದೇ ಎಲ್ಲಾ ಕೆಲಸಗಳಲ್ಲಿ ಸ್ವಯಂ ಸೇವಾ ಸಂಘಟನೆಗಳನ್ನು ಬಳಸಿಕೊಳ್ಳಲು ಫರ್ಮಾನು ಹೊರಡಿಸುತ್ತಿದೆ. ಹೀಗಾಗಿ ಈಗ ಸರ್ಕಾರದ ಯಾವುದೇ ಯೋಜನೆಗಳು ರೂಪುಗೊಂಡರು. ಅದರ ಅನುಷ್ಠಾನದ ಹೊಣೆ ಮಾತ್ರ ಈ ಸ್ವಯಂ ಸೇವಾ ಮುಖವಾಡದ ಸಂಸ್ಥೆಗಳಿಗೆ ಮಾತ್ರ ಇಲ್ಲಿ ಸರ್ಕಾರಿ ಆಡಳಿತ ಅಧಿಕಾರಿಗಳು ನೆಪಮಾತ್ರ.

ವಸೂಲಿ ಬಾಜಿ

ಆದರೆ ಧಾರ್ಮಿಕ ಮುಖವಾಡ, ಹೊತ್ತು ಕೆಲಸ ಮಾಡುವ ವಿಶ್ವದ ದೊಡ್ಡ ದೋಖಾ ಸಂಸ್ಥೆ ಇಸ್ಕಾನ್ ಹಲವಾರು ರಾಜ್ಯ ಸರ್ಕಾರಗಳನ್ನು ವಶೀಕರಣ ಮಾಡಿ. ನಿರ್ದಿಷ್ಟವಾಗಿ ಕೆಲವು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿ ಮಾಡುವ ಜವಾಬ್ದಾರಿ ಪಡೆದುಕೊಂಡಿತು. ಪಾಪಾ ನಮ್ಮ ಆಳುವವರು ನಾಮಧಾರಿಗಳು ಬೀಸಿದ ಬಲೆಗೆ ಬಿದ್ದು ಭಾರಿ ಪ್ರಚಾರದೊಂದಿಗೆ, ಈ ಯೋಜನೆಯ ಕೆಲವು ಜವಾಬ್ದಾರಿ ನೀಡಿದವು.


ಇಸ್ಕಾನ್, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ರಾಜಸ್ಥಾನ, ಒರಿಸ್ಸಾ ರಾಜ್ಯಗಳ ಒಟ್ಟು 5,67,662 ಲಕ್ಷ ಮಕ್ಕಳಿಗೆ ಈ ಬಿಸಿಯೂಟ ತಲುಪಿಸುವ ಜವಾಬ್ದಾರಿ ನಿರ್ವಹಿಸುತ್ತಿದೆ. ಇನ್ನೊಂದೆಡೆ ಬಿಜೆಪಿ ನಾಯಕ ಅನಂತಕುಮಾರ್ ಪತ್ನಿ ನಡೆಸುತ್ತಿರುವ ಅದಮ್ಯ ಚೇತನ ಟ್ರಸ್ಟ್ ಬೆಂಗಳೂರು ಸುತ್ತಮುತ್ತ 67 ಶಾಲೆಗಳ 13 ಸಾವಿರ ಮಕ್ಕಳಿಗೆ ಬಿಸಿಯೂಟ ನೀಡುತ್ತಿದೆ.

'ಹಗಲು ದರೋಡೆಯಲ್ಲಿ ಇಸ್ಕಾನ್'

ಇದುವರೆಗೂ ಸರ್ಕಾರದ ಈ ಬಿಸಿಯೂಟವನ್ನು 5 ಲಕ್ಷ ಮಕ್ಕಳಿಗೆ ಬಡಿಸುವುದಾಗಿ ಹೇಳಿಕೊಳ್ಳುತ್ತಿದ್ದ ಇಸ್ಕಾನ್‌ನ ಅಕ್ಷಯ ಪಾತ್ರೆಯ ಮುಖವಾಡ ಈಗ ಕಳಚಿ ಬಿದ್ದಿದೆ. ಅದು ಭಾರತದ ಹಸಿದ ಕಂದಮ್ಮಗಳ ಭಾವಚಿತ್ರವನ್ನು ತೋರಿಸಿ ವಿದೇಶದಲ್ಲಿ ಕೋಟ್ಯಾಂತರ ರೂಪಾಯಿ ವಸೂಲಿಗೆ ಇಳಿದಿರುವ ಸಂಗತಿ ಇದೀಗ ಜಗಜ್ಜಾಹಿರಾಗಿದೆ.

'ಅಕ್ಷಯ' ದಾನ ಸಂಗ್ರಹ

ಸುಪ್ರೀಕೋರ್ಟ್ ಆದೇಶದಂತೆ ಪ್ರತಿ ಮಗುವಿಗೆ 300 ಕ್ಯಾಲೋರಿ ಇರುವ ಆಹಾರವನ್ನು ಈ ಮಧ್ಯಾಹ್ನ ಊಟದಲ್ಲಿ ನೀಡಬೇಕು. ಇದಕ್ಕೆ ಇರುವ ವೇತನ ವೆಚ್ಚಗಳನ್ನು ಲೆಕ್ಕಹಾಕಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿ ಮಗುವಿಗೆ ರೂ.3.50 ಪೈಸೆ ನೀಡುತ್ತಿವೆ. ಮತ್ತು ಈಗಾಗಲೇ ಹಲವಾರು ರಾಜ್ಯಗಳಲ್ಲಿ ಸರ್ಕಾರಗಳೇ ಅವರ ಶಾಲೆಗಳಲ್ಲಿಯೇ ಈ ಕಾರ್ಯಕ್ರಮ ಜಾರಿಗೆ ತಂದಾಗಲೂ ಈ ಹಣವೇ ಸಾಕಾಗುತ್ತದೆ. ಆದರೆ ಇಸ್ಕಾನ್‌ನ ಅಕ್ಷಯ ಪಾತ್ರೆ ಮತ್ತು ಅದಮ್ಯ ಚೇತನ ದಂತಹ ಸಂಸ್ಥೆಗಳು ಬಿಸಿಯೂಟ ತಯಾರಿಕೆಗೆ ಮತ್ತು ಪೂರೈಸಲು ಬೇಕಾದ ವಾಹನ ಮತ್ತಿತರೆ ಸೌಕರ್ಯಗಳನ್ನು ಕಾರ್ಪೋರೇಟ್, ಖಾಸಗಿ ಸಂಸ್ಥೆಗಳಿಂದ ದಾನವಾಗಿ ಪಡೆದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ.



AKSHAYA PĀTRA

School Lunch Program for Underprivileged Children in India

Feed one child everyday for as little as $28 per year!

YES, I want to ensure that every child in India receives a nutritious meal and a good education. I'm enclosing a tax-deductible contribution of:

- $28 - feeds one child
- $140 - feeds 5 children
- $280 - feeds 10 children
- $420 - feeds 15 children
- $560 - feeds 20 children
- $700 - feeds 25 children
- $1400 - feeds 50 children
- Other Amount $______

TITLE (MR., MS., ETC.) FIRST NAME LAST NAME

ADDRESS

CITY STATE ZIP

EMAIL PHONE

Please make your check payable to: Akshaya Patra Foundation or fill in the following:
MC VISA AMEX DISCOVER

ACCOUNT # EXP DATE 3-4 DIGIT SECURITY CODE

NAME AS IT APPEARS ON YOUR CREDIT CARD (IF DIFFERENT FROM ABOVE)

BILLING ADDRESS (IF DIFFERENT FROM ABOVE)

SIGNATURE DATE

Have you donated to Akshaya Patra before? YES NO

I wish to make an anonymous donation.

Please mail this form to: Akshaya Patra Foundation, USA

Or Fax to: 781-481-9155

Thank you for your generosity. All contributions sent to the above address are tax-deductible.

DONATIONS CAN ALSO BE MADE ONLINE AT WWW.AKSHAYAPATRA.ORG

ಹಸಿದ ಮಕ್ಕಳ ಫೋಟೋ ತೋರಿಸಿ ವಿದೇಶಗಳಲ್ಲಿ ಡಾಲರ್ ವಸೂಲಿಗೆ ಹೊರಟಿರುವ 'ಅಕ್ಷಯ ಪಾತ್ರೆ' ವೀರರ ಅರ್ಜಿ

ಡಾಲರ್ ಕಮಾಯಿ

ಇಂತಹ ಯೋಜನೆಯನ್ನು ಜಾರಿಗೊಳಿಸಲು ಕೆಲವು ಸಹಾಯ ಪಡೆಯಲು ಯಾರು ವಿರೋಧಿಸಲಾರರು. ಆದರೆ ಇದನ್ನೇ ಬಂಡವಾಳ ಮಾಡಿಕೊಂಡ 'ಅಕ್ಷಯ ಪಾತ್ರೆ' ಫೌಂಡೇಷನ್ ತುಳಿದದ್ದು ಮಾತ್ರ ವಿದೇಶದಲ್ಲಿ ಡಾಲರ್ ಕಮಾಯಿಸುವ ಕೆಲಸಕ್ಕೆ.

ಈ ಅಕ್ಷಯ ಪಾತ್ರೆ ವಿದೇಶಿಯರಿಂದ ಹಣ ವಸೂಲಿಗೆ ಮಾಡಿದ ಮೋಡಿ ಹೇಗಿದೆ ನೋಡಿ. ಅದು ಇತ್ತೀಚಿನವರೆಗೂ ತನ್ನ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದ ವಿವಿಧ ಪ್ರಚಾರ ಸಾಮಗ್ರಿಗಳೇ ಸಾಕ್ಷಿ. ಅಕ್ಷಯ ಫೌಂಡೇಷನ್ ಅಂತರ್ಜಾಲದಲ್ಲಿ ಹಣ ವಸೂಲಿಗಾಗಿ ಬಿಡುಗಡೆ ಮಾಡಿರುವ ಅರ್ಜಿ ಫಾರಂಗಳನ್ನು ಗಮನಿಸಿ. ಅದರಿಂದ ಅದರ ನಿಜವಾದ ಮುಖವಾಡ ಕಳಚಿ ಬೀಳುತ್ತದೆ. ಅದರ ವಂಚಕ ಬುದ್ದಿಗೆ ಅವರದೇ ದಾಖಲೆಗಳೇ ಸಾಕ್ಷಿ ಹೇಳುತ್ತಿವೆ.

ಇಸ್ಕಾನ್ ಅಕ್ಷಯ ಫೌಂಡೇಷನ್ ಪ್ರಸ್ತುತ ದೇಶದಲ್ಲಿ ಪ್ರತಿದಿನ ತನ್ನ ಅಕ್ಷಯ ಪಾತ್ರೆಯ ಹೆಸರಿನಲ್ಲಿ 5,67,662 ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಪೂರೈಸುತ್ತಿದೆ.

ಪ್ರತಿ ವಿದ್ಯಾರ್ಥಿಗೆ ಕೇಂದ್ರ ರಾಜ್ಯ ಸರ್ಕಾರ ನೀಡುವ ರೂ.3.50 ಪೈಸೆಯಂತೆ ಪ್ರತಿ ವರ್ಷ ಸುಮಾರು 90 ಕೋಟಿ ಹಣವನ್ನು ಈ ಕೆಲಸಗಳಿಗೆ ಅಕ್ಷಯ ಪಾತ್ರೆ ಪಡೆಯುತ್ತಿದೆ. ಇದಲ್ಲದೆ ಕೆಲವು ಪ್ರಭಾವಿ ಐಟಿ ಕಂಪನಿಗಳ ಹಿರಿಯ ಅಧಿಕಾರಿಗಳು ಸೇರಿದಂತೆ ಹಲವರನ್ನು ಸೇರಿಸಿ ಇದಕ್ಕಾಗಿಯೇ ಟ್ರಸ್ಟ್‌ವೊಂದನ್ನು ರಚನೆ ಮಾಡಿಕೊಂಡಿದೆ. ಬೆಂಗಳೂರಿನ 137 ಶಾಲೆಗಳಲ್ಲಿ ಓದುತ್ತಿರುವ 25,000 ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡುವ ಒಪ್ಪಂದವನ್ನು ಬೆಂಗಳೂರು ಮಹಾನಗರ ಪಾಲಿಕೆ ಇಸ್ಕಾನ್‌ನವರಿಗೆ 2006 ರಲ್ಲಿ ಮಾಡಿಕೊಂಡು ಅದಕ್ಕಾಗಿ ಹಣ ನೀಡಿದೆ.

ಇದಲ್ಲದೆ, ಇನ್ಫೋಸಿಸ್‌ನ ಸುಧಾಮೂರ್ತಿ ಅಕ್ಷಯ ಪಾತ್ರೆಗೆ ಅಂದರೆ ಇಸ್ಕಾನ್‌ಗೆ ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಬಿಸಿಯೂಟ ನೀಡುವ ಸಲುವಾಗಿ 1 ಕೋಟಿ ನೀಡಿದ್ದಾರೆ. ಇದಲ್ಲದೆ, ರಾಜಸ್ಥಾನ, ಒರಿಸ್ಸಾ, ಆಂಧ್ರ ಹೀಗೆ ಸಿಕ್ಕ ಸರ್ಕಾರ ಮತ್ತು ಅಲ್ಲಿನ ಆಡಳಿತವನ್ನು ವಶೀಕರಿಸಿಕೊಂಡು ಇಸ್ಕಾನ್ ಬಿಸಿಯೂಟಕ್ಕಾಗಿಯೇ ಹಣ ಕೋಟ್ಯಾಂತರ ಕಿತ್ತಿದೆ.

ಆದರೆ ಭಾರತೀಯರು ಎಷ್ಟು ಕೊಟ್ಟಾರು...? ಅವರು ಕೊಟ್ಟರು ಕೇವಲ ರೂಪಾಯಿ ಲೆಕ್ಕದಲ್ಲಿ ಮಾತ್ರ. ಅದಕ್ಕಾಗಿಯೇ ಈ ಇಸ್ಕಾನ್ ಎನ್ನುವ ವಂಚಕ ಸಂಸ್ಥೆ ಎರಡು ತಂತ್ರಗಳನ್ನು ರೂಪಿಸಿತು.

'ಭಾರತೀಯರಿಗೆ ರೂಪಾಯಿ ವಿದೇಶಿಯರು ಡಾಲರ್'

ವಿದೇಶ ಸಂಸ್ಥೆಗಳಿಂದ ಲಕ್ಷಾಂತರ ಕೋಟ್ಯಾಂತರ ರೂಪಾಯಿ - ಡಾಲರ್ ಎತ್ತುವ ಇಸ್ಕಾನ್, ಕೊನೆಗೆ ತನ್ನ ಭಕ್ತರಿಗೂ ವಂಚಿಸಲು ಶುರು ಮಾಡಿತು. ಅದಕ್ಕಾಗಿ ಒಬ್ಬ ವಿದ್ಯಾರ್ಥಿಯ 1 ವರ್ಷದ ಊಟಕ್ಕೆ ಕೇವಲ 28 ಡಾಲರ್ ಮಾತ್ರ ನೀಡಿ ಧನ್ಯರಾಗಿ ಎಂದು ಪ್ರಚಾರ ಮಾಡಿತು. 5 ಜನರಿಗೆ ಇಷ್ಟು 10 - 20- 25 ಹೀಗೆ ಕೇವಲ ಲೆಕ್ಕದಲ್ಲೇ ಕನಿಷ್ಠ ಹಣ ನೀಡಿದರೆ ಭಾರತದಲ್ಲಿರುವ ಒಟ್ಟು ಬಡ ವಿದ್ಯಾರ್ಥಿಗಳಿಗೆ. ಶಿಕ್ಷಣ ಪೂರೈಸಲು ಸಹಾಯವಾಗುತ್ತದೆ. ಎಂಬಂತೆ ಪ್ರಚಾರ ಮಾಡುವ ಕೆಲಸದಲ್ಲಿ ಇಸ್ಕಾನ್ ನಿರತವಾಗಿದೆ. ಮತ್ತೊಂದೆಡೆ ಭಾರತೀಯರಿಗೂ ಟೋಪಿ ಹಾಕಲು ಬೇರೆಡೆ ಫಾರಂ ಸಿದ್ದಪಡಿಸಿದೆ. 1 ವಿದ್ಯಾರ್ಥಿಗೆ 1 ವರ್ಷಕ್ಕೆ ಕೇವಲ 1400 ರೂಪಾಯಿ ಎಂಬಂತೆ. ಭಾರತದಲ್ಲಿನ ಈ ಹಣ ಸಂಗ್ರಹಿಸುವ ಜವಾಬ್ದಾರಿಯನ್ನು ಸ್ವತಃ ಇಸ್ಕಾನ್ ಶಾಖೆಗಳೇ ವಹಿಸಿಕೊಂಡಿವೆ. ವಿದೇಶಗಳಲ್ಲಿ ಡಾಲರ್ ವಸೂಲಿಗೆ ಪ್ರತ್ಯೇಕ ಕೇಂದ್ರವನ್ನು ಅಮೇರಿಕಾದಲ್ಲಿ ತೆರೆದು ದಂಧೆ ನಡೆಸುತ್ತಿದೆ.

ಆದರೆ ಹೀಗೆ ಭಾರತದ ಹಸಿದ ಕಂದಮ್ಮಗಳ

ಪುಟ 12 ಕ್ಕೆ

ಸರ್ಕಾರಿ ಕಚೇರಿಗಳ ಮೇಲೆ ಬಿಜೆಪಿ ಬಾವುಟ!!

ಸ್ಥಳೀಯ ಸಂಸ್ಥೆಗಳ ಚುನಾವಣೆ ಮೇಲೆ ಕಣ್ಣಿಟ್ಟು; ಸುಳ್ಳು ಹೇಳಿಕೆಗಳನ್ನು ನೀಡುತ್ತಾ ಜನರನ್ನು ದಿಕ್ಕು ತಪ್ಪಿಸಲು ಹೊರಟಿರುವ ಬಿಜೆಪಿ 'ವಿಕಾಸಯಾತ್ರೆ' ನೆಪದಲ್ಲಿ ರಾಜ್ಯಾದ್ಯಂತ ಪರೋಕ್ಷವಾಗಿ ಚುನಾವಣಾ ಪ್ರಚಾರ ಮಾಡುತ್ತಿದೆ. ಅದರ ಭಾಗವಾಗಿ ಏಪ್ರಿಲ್ 18, 2007ರಂದು ಹಾಸನಕ್ಕೆ ಆಗಮಿಸುವ ಕಾರ್ಯಕ್ರಮ ಸಹಾ ಒಳಗೊಂಡಿದ್ದು, ಆ ವಿಕಾಸ ಯಾತ್ರೆಯ ಪ್ರಚಾರದ ಭಾಗವಾಗಿ ಬಿಜೆಪಿ, ಪೋಸ್ಟರ್, ಬ್ಯಾನರ್, ಫ್ಲೆಕ್ಸ್, ಬಾವುಟಗಳನ್ನು ನಗರದಾದ್ಯಂತ ಕಟ್ಟಿದ್ದು ಮುಖ್ಯವಾಗಿ ಸರ್ಕಾರಿ ಕಛೇರಿಗಳಾದ ಜಿಲ್ಲಾಧಿಕಾರಿ ಕಛೇರಿ, ಲೋಕೋಪಯೋಗಿ ಇಲಾಖಾ ಕಛೇರಿ, ವಾರ್ತಾಭವನ, ಪ್ರವಾಸಿ ಮಂದಿರ, ಜಿಲ್ಲಾ ಪಂಚಾಯತ್ ಕಛೇರಿ, ಜಿಲ್ಲಾಧಿಕಾರಿ ನಿವಾಸ ಸೇರಿದಂತೆ ಹಲವಾರು ಸರ್ಕಾರಿ ಅಧಿಕಾರಿಗಳ ನಿವಾಸದ ಮೇಲೂ ಬಿಜೆಪಿಯ ಬಾವುಟಗಳನ್ನು ಯಾತ್ರೆಯ ಮುನ್ನಾ ದಿನ ಹಾಕಿದ್ದರೂ ಜಿಲ್ಲಾಡಳಿತ ಯಾವುದೇ ಆಕ್ಷೇಪವನ್ನು ಎತ್ತದಿರುವುದು ಈ ದುರುಪಯೋಗವನ್ನು ಬೆಂಬಲಿಸಿದೆಯೇ ಎನ್ನುವ ಅನುಮಾನದೊಂದಿಗೆ ರಾತ್ರೋರಾತ್ರಿ ಜಿಲ್ಲಾಧಿಕಾರಿ ಮನೆಗೆ ತೆರಳಿದ ಹಾಸನ ಜಿಲ್ಲಾ ಡಿವೈಎಫ್ಐ ಯ ನಿಯೋಗವು, ಜಿಲ್ಲಾಡಳಿತವೇ ನಿಂತು ಈ ಕಾರ್ಯಕ್ರಮ ಮಾಡುತ್ತಿದೆಯೇ ಎಂದು ಪ್ರಶ್ನಿಸಿತು. ಅಲ್ಲದೆ ಕೂಡಲೇ ಸರ್ಕಾರಿ ಕಛೇರಿ, ನಿವಾಸಗಳ ಮೇಲಿರುವ ಬಾವುಟ, ಫ್ಲೆಕ್ಸ್, ಬ್ಯಾನರ್‌ಗಳನ್ನು ತೆಗೆಸಿ ಅವರ ಮೇಲೆ ಕ್ರಮ ಜಗುರಿಸಬೇಕೆಂದು ಜಿಲ್ಲಾಧಿಕಾರಿಯವರನ್ನು ಆಗ್ರಹಿಸಿತು.

ಡಿವೈಎಫ್ಐ ನ ಎಚ್ಚರಿಕೆಯ ಮನವಿಗೆ ಎಚ್ಚೆತ್ತ ಜಿಲ್ಲಾಡಳಿತ ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ಮಾಡಿ ಸರ್ಕಾರಿ ಕಛೇರಿ, ಸರ್ಕಾರಿ ಅಧಿಕಾರಿಗಳ ಅಧಿಕೃತ ನಿವಾಸದ ಮೇಲಿದ್ದ ಒಟ್ಟು ಸುಮಾರು 150 ಕ್ಕೂ ಮೀರಿದ ಬಾವುಟಗಳನ್ನು ಸಂಪೂರ್ಣವಾಗಿ ತೆರವು ಗೊಳಿಸಿತು. ಮುಂದಿನ ದಿನಗಳಲ್ಲಿ ಆಡಳಿತ ಪಕ್ಷಗಳು ಸರ್ಕಾರಿ ಯಂತ್ರವನ್ನು ದುರುಪಯೋಗ ಪಡಿಸಲು ಸಾಧ್ಯವಾಗದಂತೆ ಡಿವೈಎಫ್ಐಯ ಈ ದಿಢೀರ್ ಕಾರ್ಯಾಚರಣೆ ಸಹಕಾರಿಯಾಗಬಹುದು ಎಂದು ನಗರದ ನಾಗರಿಕರ ಮತ್ತು ಪತ್ರಿಕೆಗಳ ಅನಿಸಿಕೆ.

ವರದಿ: ಶಾವಲ್‌ಹಮೀದ್, ಹಾಸನ

ಕಂಬಾಲಪಲ್ಲಿ ಪ್ರಕರಣ ಮರು ವಿಚಾರಣೆ ಆಗಲಿ

ಏಳು ಜನ ದಲಿತರನ್ನು ಸಜೀವವಾಗಿ ದಹಿಸಿದ ಅಮಾನುಷ ಅಪರಾಧವಾದ ಕಂಬಾಲಪಲ್ಲಿ ಪ್ರಕರಣದಲ್ಲಿ ಮರು ವಿಚಾರಣೆಗೆ ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಸಂಘಟಿಸಿದ್ದ ಕಾಲ್ನಡಿಗೆ ಜಾಥಾವು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯಿಂದ ಹೊರಟು ನಂದಗುಡಿ, ಹೊಸಕೋಟೆ, ಕೆ.ಆರ್.ಪುರಂ, ಮಹಾತ್ಮಗಾಂಧಿ ಮಾರ್ಗವಾಗಿ ಕ್ರಮಿಸಿ ಏಪ್ರಿಲ್ 23 ರಂದು ನಡು ಹಗಲಿನಲ್ಲಿ ಮಹಾತ್ಮ ಗಾಂಧಿ ಪ್ರತಿಮೆ ಸ್ಥಳವನ್ನು ತಲುಪಿತು. ಆ ಸ್ಥಳದಲ್ಲಾಗಲೇ ನೂರಾರು ಕಾರ್ಯಕರ್ತರು ಜಮಾಯಿಸಿ ಜಾಥಾ ಸ್ವಾಗತಕ್ಕಾಗಿ ಕಾದು ಕುಳಿತಿದ್ದರು. ಮಹಾತ್ಮ ಗಾಂಧಿ ಪ್ರತಿಮೆಯ ಮುಂದೆ ನಡೆದ ಧರಣವನ್ನು ಖ್ಯಾತ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು.

ಸೂಕ್ತ ಸಾಕ್ಷ್ಯಗಳಿಲ್ಲವೆಂಬ ಕಾರಣಕ್ಕೆ ಪ್ರಕರಣದ ಆರೋಪಿಗಳನ್ನು ಆರೋಪಮುಕ್ತಗೊಳಿಸಿದ ನ್ಯಾಯಾಲಯದ ತೀರ್ಪಿನ ಕುರಿತು ಮಾತನಾಡಿದ ಬರಗೂರರು ಇದು ಕೇವಲ ನ್ಯಾಯಾಲಯದ ತೀರ್ಪಲ್ಲ, ದೇಶ ಯಾವಕಡೆಗೆ ಹೋಗುತ್ತಿದೆ ಎನ್ನುವುದರ ಸೂಚನೆಯಾಗಿದೆ. ಇದು ಸಮಾನತೆಯ ಸಜೀವ ದಹನ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್‌ರವರು ಈ ಸಂದರ್ಭದಲ್ಲಿ ಮಾತನಾಡಿ ಕಂಬಾಲಪಲ್ಲಿ ದಲಿತರ ಸಜೀವ ದಹನ ನಡೆದಾಗ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳ ನಾಯಕರೂ ಭೇಟಿ ನೀಡಿದ್ದರು. ಆದರೆ ನ್ಯಾಯಾಲಯದ ಇಂತಹ ತೀರ್ಪು ಹೊರಬಂದ ಮೇಲೂ ಬಹುತೇಕ ರಾಜಕೀಯ ಪಕ್ಷಗಳು ಬಾಯಿ ಮುಚ್ಚಿ ಕೊಂಡಿವೆ. ನ್ಯಾಯಾಲಯದಿಂದ ಇಂತಹ ತೀರ್ಪು ಹೊರಬಂದಿರುವುದು, ಹಾಗೂ ಇದೇ ಸಂದರ್ಭದಲ್ಲಿ ಬಿಜೆಪಿ ಪಕ್ಷವು ಅಧಿಕಾರದಲ್ಲಿರುವುದು ದಲಿತರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಸುವ ಪಾಳೇಗಾರಿ ಮೇಲ್ಜಾತಿ, ಮೇಲ್ವರ್ಗಗಳ ಜನರ ರೆಕ್ಕೆಗೆ ನೀರು ತಟ್ಟಿದ ರೀತಿ ಆಗಿದೆ ಎಂದರು.

ಸಮತಾ ಸೈನಿಕ ದಳದ ರಾಜ್ಯ ಅಧ್ಯಕ್ಷರಾದ ವೆಂಕಟಸ್ವಾಮಿ, ಹೊಸತು ಪತ್ರಿಕೆ ಸಂಪಾದಕ ಡಾ. ಜಿ. ರಾಮಕೃಷ್ಣ ಮಾತನಾಡಿದರು.



ವಿಧಾನ ಪರಿಷತ್ ಸದಸ್ಯ ದಲಿತ ಕವಿ ಎಲ್. ಹನುಮಂತಯ್ಯ ಮಾತನಾಡಿ ನ್ಯಾಯಾಲಯದ ತೀರ್ಪು ದಲಿತರಿಗೆ ಬೆಂಕಿ ಹಚ್ಚಿದಕ್ಕಿಂತ ಭೀಕರವಾಗಿದೆ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯ ದರ್ಶಿ ಮಂಡಳಿ ಸದಸ್ಯರಾದ ಕಾಂ. ಮಾರುತಿ ಮಾನ್ಪಡೆ ಮಾತನಾಡಿ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಸರ್ಕಾರದ ನೀತಿ ಪ್ರಕರಣವನ್ನು ಮುಚ್ಚಿ ಹಾಕುವ ಯತ್ನ ಎಂದರು. ಕಂಬಾಲಪಲ್ಲಿ ದೌರ್ಜನ್ಯದಲ್ಲಿ ಕಾಲು ಮುರಿದುಕೊಂಡ ದಲಿತೆ ಕದಿರಮ್ಮನವರಿಗೆ ಚಿಕಿತ್ಸೆ ಸಂದರ್ಭದಲ್ಲಿ ಹಾಕಿರುವ ಸಲಾಕೆ (ರಾಡ್) ಯನ್ನು ಇನ್ನೂ ತೆಗೆದಿಲ್ಲ. ಏಕೆಂದರೆ ಆಕೆಯಲ್ಲಿ ಹಣವಿಲ್ಲ. ಆಕೆಗೆ ಉತ್ತಮ ಚಿಕಿತ್ಸೆಯೂ ದೊರಕಲಿಲ್ಲ ಎಂದರು.

ಶಾಸಕರೂ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕಾಂ. ಜಿ.ವಿ. ಶ್ರೀರಾಮ ರೆಡ್ಡಿಯವರು ಮಾತನಾಡಿ ಪ್ರಕರಣದ ವಿಚಾರಣೆ ನಡೆಯುವಾಗಲೇ ಸರ್ಕಾರಕ್ಕೆ ಪ್ರಕರಣದ ಬೆಳವಣಿಗೆಗಳು ಗೊತ್ತಾಗುತ್ತಿತ್ತು. ಸಾಕ್ಷಿಗಳಿಗೆ ಸೂಕ್ತ ರಕ್ಷಣೆ ನೀಡಿದ್ದಲ್ಲಿ ತೀರ್ಪು ಈ ರೀತಿ ಬರುತ್ತಿರಲಿಲ್ಲ. ಪ್ರಕರಣವನ್ನು ಸರ್ಕಾರ ಸೂಕ್ತವಾಗಿ ನಿಬಾಯಿಸಲಿಲ್ಲ. ಈ ಪ್ರಕರಣದ ಮರು ವಿಚಾರಣೆ ನಡೆಯಲೇಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಧರಣಿ ಸ್ಥಳಕ್ಕೆ ಭೇಟಿ ನೀಡಿ, ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್ ಪೂರ್ತಿಯಾಗಿ ಜಾರಿಗೊಳಿಸುವ ಬಗೆ ಒಂದು ವಾರದೊಳಗೆ ಮರು ವಿಚಾರಣೆ ಸಂಬಂಧ ತೀರ್ಮಾನ ಕೈಗೊಳ್ಳಲು ಸಿಪಿಐ(ಎಂ) ಹಾಗೂ ದಲಿತ ಸಂಘಟನೆಗಳ ಪ್ರತಿನಿಧಿಗಳ ಸಂಬಂಧಿಸಿದವರ ಸಭೆಯನ್ನು 15 ದಿನದೊಳಗೆ ಕರೆಯುವುದಾಗಿ ಭರವಸೆ ನೀಡಿದರು. ಆರಂಭದಲ್ಲಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಪ್ರಕಾಶ್ ಪ್ರಾಸ್ತಾವಿಕ ಮಾತನಾಡಿದರು. ಕಾಂ. ಗಾಂಧಿನಗರ ನಾರಾಯಣಸ್ವಾಮಿ ಮನವಿ ಪತ್ರ ಓದಿದರು.

ದಲಿತ ಮುಖಂಡರಾದ ಆನಂದ್, ಜಗದೀಶ್ ಮುಂತಾದವರು ಮಾತನಾಡಿದರು. ಸಂತ್ರಸ್ತ ಕುಟುಂಬಕ್ಕೆ ಸೇರಿದ ಜಗದೀಶ್ ಮಾತನಾಡುತ್ತಾ, ಕಂಬಾಲಪಲ್ಲಿ ದಲಿತರಿಗೆ 7 ಕಿ.ಮಿ. ದೂರದಲ್ಲಿ ಹೊಲ ನೀಡಲಾಗಿದೆ. ತಲಾ ಒಂದೂಕಾಲು ಎಕರೆ ಭೂಮಿ ಮಾತ್ರ. ಎತ್ತಿನಗಾಡಿ ಕೂಡಲೇ ಇಲ್ಲ. ಯಾವುದೇ ಅಧಿಕಾರಿಗಳು ಬಂದು ನಮ್ಮ ಕಷ್ಟ ವಿಚಾರಿಸಲಿಲ್ಲ ಎಂದರು. ಹತ್ಯಾಕಾಂಡದಲ್ಲಿ ಹತರಾದವರ ಬಂಧುಗಳು ಹಲವರು ಧರಣಿಯಲ್ಲಿ ಪಾಲ್ಗೊಂಡಿದ್ದರು.

ದುಡಿಯುವ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಕಿರುಕುಳಗಳು

ಇತ್ತೀಚೆಗೆ ಗದಗ ಜಿಲ್ಲೆಯ ಶಿಕ್ಷಕಿ ಪ್ರೇಮಾ SDMC ಸಮಿತಿಯ ಸದಸ್ಯರ ಕಿರುಕುಳದ ಬಗ್ಗೆ ಮೇಲಾಧಿಕಾರಿಗಳಿಗೆ ದೂರು ಕೊಟ್ಟಾಗ ಅದರಿಂದ ಪ್ರಯೋಜನ ಅಗದೆ ಆತ್ಮಹತ್ಯೆಗೆ ಶರಣಾದದ್ದು. ಬಿಜೆಪಿ ಶಾಸಕ ರೇಣುಕಾಚಾರ್ಯ ನರ್ಸ್ ಆಗಿರುವ ಜಯಲಕ್ಷ್ಮಿ ಎಂಬುವವರಿಗೆ ಕಿರುಕುಳ ನೀಡಿದಾಗ ಬಹು ದೊಡ್ಡ ಅಧಿಕಾರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ದೂರು ಕೊಟ್ಟರೂ ಪ್ರಯೋಜನವಾಗದೆ ಹತಾಶರಾಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು. ಹಾಗೆಯೇ ಗುಬ್ಬಿ ತಾಲ್ಲೂಕಿನ ತಗೊಳ್ಳಿ ಗ್ರಾಮದ ಕಾರ್ಯಕರ್ತೆ ಸಬ್ಸಿಡಿ ಸಾಲ ಕೊಡಿಸಲು ಲಂಚ ತೆಗೆದುಕೊಂಡ ಅಧಿಕಾರಿಗಳೂ, ರಾಜಕಾರಣಿಗಳು ಲಂಚ ತೆಗೆದುಕೊಂಡಿಲ್ಲ, ನೀನೇ ಹಣ ತಿಂದು ಹಾಕಿದ್ದೀಯಾ ಎಂದು ಆರೋಪಿಸಿದಾಗ ಬೇರೆ ದಾರಿ ಕಾಣದೆ ಆತ್ಮಹತ್ಯೆಗೆ ಪ್ರಯತ್ನಿಸಿದ್ದು. ಇವು ಇತ್ತೀಚಿನ ಕೆಲವು ಪ್ರಕರಣಗಳು.

ಗ್ರಾಮೀಣ ಪ್ರದೇಶದಲ್ಲಿ 10-15 ಮಹಿಳೆಯರ ಸ್ತ್ರೀ ಶಕ್ತಿ ಗುಂಪುಗಳನ್ನು ರೂಪಿಸುವುದು, ಸಂಘದ ಚಟುವಟಿಕೆಗಳಿಗೆ, ಕಾರ್ಯನಿರ್ವಹಣೆಗೆ ಅಗತ್ಯವಾದ ಮಾರ್ಗದರ್ಶನ ಹಾಗೂ ಪೋಷಣೆಯ ಜವಾಬ್ದಾರಿಯನ್ನು ಅಂಗನವಾಡಿ ಕಾರ್ಯಕರ್ತೆಯರು ನಿರ್ವಹಿಸುತ್ತಲೇ ಬರುತ್ತಿದ್ದಾರೆ.

ಘಟನೆಯ ಹಿನ್ನೆಲೆ ಏನು?

ರಾಜ್ಯ ಮತ್ತು ಕೇಂದ್ರ ಸರ್ಕಾರ ಕಲ್ಯಾಣ ಕಾರ್ಯಕ್ರಮಗಳ ಭಾಗವಾಗಿ ಸ್ತ್ರೀಶಕ್ತಿ ಸಂಘಗಳಿಗೆ ಕೆಲವು ಮೌಲ್ಯಮಾಪನಗಳನ್ನು ನೀಡಿ ಸವಲತ್ತುಗಳನ್ನು ನೀಡುತ್ತವೆ. ಸ್ತ್ರೀಶಕ್ತಿ ಸಂಘಗಳಿಗೆ ಮೊದಲಿಗೆ ಪ್ರೋತ್ಸಾಹಿಸಲು ಪ್ರೋತ್ಸಾಹಧನ 5000 ರೂ ಗಳನ್ನು ನೀಡುವುದು, ಸಬ್ಸಿಡಿ ಸಾಲಗಳನ್ನು ಕೊಡುವುದು, ಕೆಲವು ಗುಂಪುಗಳಿಗೆ ಬಿಸಿಯೂಟ ತಯಾರಿ ಮಾಡುವ ಜವಾಬ್ದಾರಿ. ಕೆಲವು ಗುಂಪುಗಳಿಗೆ ಉಚಿತ ಗ್ಯಾಸ್, 2-3 ಲಕ್ಷಗಳ ಸಾಲ ಹೀಗೆ. ಆದರೆ ಈ ಸವಲತ್ತುಗಳನ್ನು ಪಡೆಯಲು ಮೌಲ್ಯ ಮಾಪನಗಳಿಗೆ ಆ ತಾಲ್ಲೂಕಿನ ರಾಜಕೀಯ ಪಕ್ಷದ ಶಾಸಕರು, ಆ



ಆಸ್ಪತ್ರೆಯಲ್ಲಿ ಮಲಗಿರುವ ಅಂಗನವಾಡಿ ಕಾರ್ಯಕರ್ತೆ ಪದ್ಮಾವತಿ

ಶಾಸಕರ ಹಿಂಬಾಲಕರ ಹೆಂಡತಿಯರು ಅಥವಾ ಜಾತಿಯವರು ಯಾವ ಗುಂಪಿನಲ್ಲಿ ಹೆಚ್ಚಾಗಿದ್ದಾರೆ, ಅಂತಹ ಗುಂಪುಗಳಿಗೆ ಹೆಚ್ಚಿನ ಸವಲತ್ತುಗಳು ನೀಡುತ್ತಿರುವುದು ಸಮಸ್ಯೆಗೆ ಕಾರಣವಾಗುತ್ತದೆ.

ಸರ್ಕಾರದ ಯಾವುದೇ ಸಬ್ಸಿಡಿ ಸಾಲ ಪಡೆಯಲು - ಲಂಚವಿಲ್ಲದೆ ಜನತಾ ಮನೆಗೂ ಸಾಲ ಸಿಗುವುದಿಲ್ಲ ಎಂಬುದು ಸರ್ವ ಸಾಮಾನ್ಯವಾಗಿದೆ. ಇಂತಹ ವ್ಯವಸ್ಥೆಯ ಮಧ್ಯೆದಲ್ಲಿಯೇ ಗುಬ್ಬಿ ತಾಲ್ಲೂಕಿನ ತಗೊಳ್ಳಿ ಕಾರ್ಯಕರ್ತೆ ಪದ್ಮಾವತಿ ಎಂಬುವವರು 5 ವರ್ಷಗಳಿಂದ ಕಾರ್ಯಕರ್ತೆಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಕಾರ್ಯಕರ್ತೆಯನ್ನು ಆ ಹುದ್ದೆಯಿಂದ ತೆಗೆಯಬೇಕೆಂದೂ ಅಲ್ಲಿಯ ಕೆಲವು ಊರಿನ ವ್ಯಕ್ತಿಗಳು ಪ್ರಮುಖವಾಗಿ ವೀರಣ್ಣ ಎಂಬುವವರು ನಿರಂತರ ಕಿರುಕುಳ ನೀಡುತ್ತಿದ್ದರು. ಹಲವಾರು ಬಾರಿ ಸಿಡಿಓ ಕಛೇರಿಗೆ ದೂರವಾಣಿ ಮೂಲಕ ಮೇಲಧಿಕಾರಿಗಳಿಗೆ ದೂರಿದ್ದನು. ಕಳೆದ ಪಂಚಾಯಿತಿ ಚುನಾವಣೆಯಲ್ಲಿ ಈತನೇ ಗೆದ್ದು ಇವರ ಹೆಂಡತಿಯ ಪಂಚಾಯ್ತಿ ಅಧ್ಯಕ್ಷಳಾದಳು. ಹೆಂಡತಿ ಅಧ್ಯಕ್ಷಳಾದ ಮೇಲೆ ವೀರಣ್ಣನ ಅಧಿಕಾರವು ಸೇರಿಕೊಂಡು ನಿರಂತರವಾಗಿ ಕಾರ್ಯಕರ್ತೆಯನ್ನು ಎತ್ತಂಗಡಿ ಮಾಡಿಸುವ ಪ್ರಯತ್ನವನ್ನು ಮುಂದುವರೆಸಿದ್ದ.

ತಾಲ್ಲೂಕು ಪಂಚಾಯ್ತಿಯಿಂದ ನೀಡುವ ಸ್ವರಾಜ್‌ಗಾರ್ ಯೋಜನೆಯಡಿ 1 ಲಕ್ಷ 20 ಸಾವಿರ ರೂಗಳ ಸಾಲವನ್ನು ಪಡೆಯಲು ತಗೊಳ್ಳಿ ಲಕ್ಷ್ಮಿ ಸ್ತ್ರೀ ಶಕ್ತಿ ಸಂಘದವರು ಪ್ರಯತ್ನ ಮಾಡಿದ್ದರು. ಈ ಪ್ರಯತ್ನದ ಭಾಗವಾಗಿ 7.8 ಸಾವಿರ ರೂ.ಗಳನ್ನು 'ಸಹಜ' ಎಂಬಂತೆ ಲಂಚವಾಗಿ ತಾಲ್ಲೂಕಿನ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ, ಕೆಲ ಜನಪ್ರತಿನಿಧಿಗಳಿಗೆ ಅಂಗನವಾಡಿ ಕಾರ್ಯಕರ್ತೆಯ ಮುಖಾಂತರ ನೀಡಿದ್ದರು.

ಈ ವಿಷಯ ತಿಳಿದ ವೀರಣ್ಣ ಕೂಡಲೇ ಸ್ತ್ರೀಶಕ್ತಿ ಸಂಘದ ಮಹಿಳೆಯರ ಬಳಿ ಹೋಗಿ "ಲಂಚವಿಲ್ಲದೆ ನಾನು ಲೋನ್ ಕೊಡಿಸುತ್ತೇನೆ, ಕಾರ್ಯಕರ್ತೆಯನ್ನು ಅಷ್ಟು ಹಣವನ್ನು ತಿಂದು ಹಾಕಿದ್ದಾಳೆ" ಎಂದು ಹೇಳಿ ಅವರನ್ನು ಪ್ರಚೋದಿಸಿದ. ಸಹಜವಾಗಿ ಪ್ರಚೋದನೆಗೊಳಗಾದ ಮಹಿಳೆಯರು ಕಾರ್ಯಕರ್ತೆಯನ್ನು "ನೀನು ಹಣ ತಿಂದು ಹಾಕಿದ್ದೀಯಾ" ಎಂದು ನಿಂದಿಸಿದಾಗ, ಕಾರ್ಯಕರ್ತೆ ನಾನು ಈ ಹಣವನ್ನು ಯಾರ್‍ಯಾರಿಗೆ ಕೊಟ್ಟಿದ್ದೇನೆ ಎನ್ನುವುದನ್ನು ಹೇಳಿಸುತ್ತೇನೆ ಎಂದು ಹೇಳಿ ಗುಬ್ಬಿಯ ಶಾಸಕರ ಹೆಂಡತಿಯ ಬಳಿ 'ನ್ಯಾಯ' ಕೇಳಲು ಹೋದರು. ಆ ಸಂದರ್ಭ ನಾನು ಇ.ಓ. ರವರಿಗೆ 5 ಸಾವಿರ ರೂ. ಕೊಟ್ಟಿದ್ದೇನೆ ಎಂದು ಹೇಳಿದಾಗ ಎಂಎಲ್ಎ ಯವರ ಶ್ರೀಮತಿಯವರು ಇಓ ರವರನ್ನು ವಿಚಾರಿಸಿದ್ದಾರೆ. ಆಗ ಇ.ಓ ರವರು "ನಾನು ಲಂಚ ತೆಗೆದುಕೊಂಡಿಲ್ಲ, ಕಾರ್ಯಕರ್ತೆ ನನ್ನ ಮೇಲೆ ಆರೋಪ ಹೊರೆಸಿದ್ದಾಳೆ. ಅವಳನ್ನು ಸುಮ್ಮನೆ ಬಿಡುವುದಿಲ್ಲ" ಎಂದು ಪಂಚಾಯ್ತಿಯವರು ಮೇಲ್ವಿಚಾರಕ ಹೆದರಿಸಿದ್ದರಿಂದ ಲಂಚ ತೆಗೆದುಕೊಂಡವರೇ ಲಂಚ ತೆಗೆದುಕೊಂಡಿಲ್ಲ ಹೇಳಿದ ಮೇಲೆ ಬೇರೆ ದಾರಿ ಕಾಣದೆ ಆತ್ಮಹತ್ಯೆಗೆ ಯತ್ನಿಸಿದ್ದಾಳೆ.


ಈ ಯತ್ನವನ್ನು ಒಂದು ವಾರ ಕಾಲ ಮುಚ್ಚಿಡಲಾಗಿತ್ತು. ನಂತರ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆಗೆ ತಿಳಿದ ಕೂಡಲೇ ತುಮಕೂರಿನ ಖಾಸಗಿ ನರ್ಸಿಂಗ್‌ನಲ್ಲಿ ದಾಖಲಾಗಿದ್ದ ಕಾರ್ಯಕರ್ತೆಯನ್ನು ಕಂಡು ಅವರ ತಂದೆ ತಾಯಿ, ಗಂಡ ಮಕ್ಕಳಿಗೆ ಸಾಂತ್ವನ ನೀಡಲಾಗಿದೆ. ಲಂಚಕೋರತನ ಹಾಗೂ ಇಂತಹ ಅನ್ಯಾಯದ ಕೃತ್ಯವನ್ನು ಸಂಘಟನೆ ತೀವ್ರವಾಗಿ ಖಂಡಿಸಿದೆ. ನ್ಯಾಯಾಕ್ಕಾಗಿ ಹೋರಾಡಲಿದೆ. ಇದೀಗ ಈ ಘಟನೆಗೆ ಬೇರೇನೋ ತಿರುವು ನೀಡುವ ಯತ್ನ ನಡೆದಿರುವುದು ಕಂಡುಬರುತ್ತಿದೆ.

■ ಎಸ್.ವರಲಕ್ಷ್ಮಿ

ಕೋಮುವಾದಿ ಪಕ್ಷ ಕಪಟತನದ ಪಕ್ಷವಾಗುತ್ತಿರುವುದು ಸಹಜ ತಾನೆ ?

ಬಾಬು ಭಾಯಿ ಕಟಾರ, ಬಿಜೆಪಿಯ ಸಂಸತ್ ಸದಸ್ಯ ಈಗ ಜೈಲಿನಲ್ಲಿದ್ದಾರೆ. ವಿಚಾರಣೆ ಎದುರಿಸುತ್ತಿದ್ದಾರೆ. ದಿಲ್ಲಿ ವಿಮಾನ ನಿಲ್ದಾಣದಲ್ಲಿ ಒಬ್ಬ ಹೆಂಗಸು ಮತ್ತು ಹುಡುಗನನ್ನು ತನ್ನ ಹೆಂಡತಿ ಮತ್ತು ಮಗನ ಪಾಸ್‌ಪೋರ್ಟ್‌ಗಳಲ್ಲಿ ಕಳ್ಳತನದಿಂದ ದೇಶದಿಂದ ಹೊರಸಾಗಿಸುವಾಗ ಸಿಕ್ಕಿಬಿದ್ದ ಆತನನ್ನು ಬಂಧಿಸಲಾಯಿತು. ಈ 'ಸನ್ಮಾನ್ಯ' ಬಿಜೆಪಿ ಸಂಸತ್ ಸದಸ್ಯ ಇಂತಹ 'ಉದ್ದಿಮೆ'ಯಲ್ಲಿ ತೊಡಗಿರುವುದು ಇದೇ ಮೊದಲಲ್ಲ ಎಂಬುದು ಪೊಲೀಸ್ ತನಿಖೆಗಳಿಂದ ತಿಳಿದುಬಂದಿದೆ. ಈ ಕಳ್ಳ ವ್ಯವಹಾರದಲ್ಲಿ ಹೊರಸಾಗಿಸುತ್ತಿದ್ದ ಪಂಜಾಬಿನ ಪರಮಜಿತ್ ಕೌರ್ 'ಇದು 30 ಲಕ್ಷಗಳ ವ್ಯವಹಾರ' ಎಂದಿದ್ದಾಳೆ. ಈ 'ಉದ್ದಿಮೆ'ಯಲ್ಲಿ ಇನ್ನೊಬ್ಬ ಬಿಜೆಪಿ ಸಂಸತ್ ಸದಸ್ಯನೂ ಸೇರಿದಂತೆ ಇನ್ನೂ ನಾಲ್ಕು ಎಂ.ಪಿ.ಗಳಿದ್ದಾರೆ.

ಒಂದು ವಾರದ ಅಂತರದಲ್ಲಿ ನಡೆದಿರುವ 2 ಘಟನೆಗಳು ಬಿಜೆಪಿಯ, ಅದರಲ್ಲೂ ಅದರ 'ಆದರ್ಶಪ್ರಾಯ' ಮುಖ್ಯ ಮಂತ್ರಿ ಮೋದಿಯ 'ಚಾಲ್-ಚಾರಿತ್ರ್ಯ-ಸುರಾಜ್'ನ್ನು ಬಯಲಿಗೆಳೆದಿವೆ. ಗುಜರಾತ್‌ನ ಒಬ್ಬ ಬಿಜೆಪಿ ಸಂಸದ ಮತ್ತು ಡಿಐಜಿ ಕಂಬಿ ಎಣಿಸುತ್ತಿದ್ದಾರೆ



ನಕಲಿ ಪತ್ನಿಯೊಂದಿಗೆ ಸಿಕ್ಕಿಬಿದ್ದ ಬಿಜೆಪಿ ಸಂಸದ ಕಟಾರಾ

ಬಾಬುಭಾಯಿ ಕಟಾರಾ ಗುಜರಾತಿನ ದಹೋಡ್ ಬುಡಕಟ್ಟು ಮೀಸಲು ಕ್ಷೇತ್ರದಿಂದ ಆರಿಸಿಬಂದ ಲೋಕಸಭಾ ಸದಸ್ಯ. ಈತ ಗುಜರಾತಿನಲ್ಲಿ ವಿಶ್ವಹಿಂದೂ ಪರಿಷತ್‌ನ ಪ್ರಮುಖರಲ್ಲಿ ಒಬ್ಬ ಎಂಬುದನ್ನು ಕೂಡಾ ಗಮನಿಸಿ. ಜತೆಗೆ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ನೆಚ್ಚಿನ ಬಂಟ ಕೂಡಾ. ಈಗೇನೋ ಆತನನ್ನು ಪಕ್ಷದಿಂದ ಅಮಾನತುಗೊಳಿಸಿ ತನ್ನ 'ನೈತಿಕತೆ'ಯನ್ನು ಎತ್ತಿತೋರಲು ಬಿಜೆಪಿ ಪ್ರಯತ್ನಿಸಿದರೂ ಈತ ಆಗಾಗ ಕೆನಡಾ ಮತ್ತು ಅಮೆರಿಕಾಕ್ಕೆ ಏಕೆ ಹೋಗುತ್ತಿದ್ದ ಎಂಬ ಬಗ್ಗೆ ಈ 'ಸಚ್ಚಾರಿತ್ರ್ಯ'ದ ಪಕ್ಷಕ್ಕೆ ಸಂದೇಹ ಬರಲಿಲ್ಲ ಎಂಬುದು ವಿಚಿತ್ರವಲ್ಲವೇ? ಈ ಮಾನವ ಕಳ್ಳ ಸಾಗಾಣಿಕೆಯಿಂದ ಬಂದಿರುವ 30 ಲಕ್ಷ ರೂ. ಬಿಜೆಪಿಯ ಖಜಾನೆಗೂ ಹೋಗಿರಬಹುದಲ್ಲವೇ?

ಈ ಕಟಾರಾ ಸಾಮಾನ್ಯನೇನಲ್ಲ. ತನ್ನ ಬುಡಕಟ್ಟು ಪ್ರದೇಶದಲ್ಲಿ ತನ್ನ ಭಾವನೊಂದಿಗೆ ತಾನೇತಾನಾಗಿ ಮೆರೆಯುತ್ತಿರುವಾತ. ಇವರು ಹೇಳಿದ್ದೇ ಕಾನೂನು. ಕೇಳಿದಷ್ಟನ್ನು ಕೊಡಲೇಬೇಕು. ಈತ ಬುಡಕಟ್ಟು ಮಕ್ಕಳಿಗಾಗಿ ನಡೆಸುತ್ತಿರುವ 'ಆಶ್ರಮ ಶಾಲೆಗಳು' ಕೂಡಾ ಭ್ರಷ್ಟಾಚಾರದ ಮೂಲಗಳು ಎನ್ನಲಾಗುತ್ತಿದೆ. ಕಟಾರಾನ ಪ್ರಭಾವದಿಂದ ಈ ಸಂಸ್ಥೆಗಳಿಗೆ ಸರ್ಕಾರೀ ಹಣ ದಂಡಿಯಾಗಿ ಹರಿಯುತ್ತಿದೆ, ಆದರೆ ಅಲ್ಲಿನ ಶಿಕ್ಷಕರಿಗೆ ಸರಿಯಾದ ಸಂಬಳವಿಲ್ಲ.

ಈತನ ವಿರುದ್ಧ ಗುಜರಾತ್ ಹೈಕೋರ್ಟ್‌ನಲ್ಲಿ ಒಂದು ಚುನಾವಣಾ ತಕರಾರು ಅರ್ಜಿ ಕೂಡಾ ವಿಚಾರಣೆಯಲ್ಲಿದೆ. 2004 ರ ಚುನಾವಣೆಗಳಲ್ಲಿ ಈತ ಗೆದ್ದದ್ದು ಕೇವಲ 361 ಮತಗಳಿಂದ. ಮತಗಟ್ಟೆ ಅಪಹರಣ, ಒಂದೇ ಕ್ಷೇತ್ರದ ಎರಡು ಸ್ಥಳಗಳಲ್ಲಿ ಮತದಾನ ಮಾಡಿದ ಆಪಾದನೆ ಆತನ ಮೇಲಿದೆ. ಅಲ್ಲದೆ 2004 ರ ಚುನಾವಣೆಗಳಲ್ಲಿ ನಾಮಪತ್ರ ಸಲ್ಲಸುವಾಗ ಆತ ತನ್ನ ಆಸ್ತಿಗಳ ಸರಿಯಾದ ಮೌಲ್ಯ ತಿಳಿಸಿಲ್ಲ ಎಂಬ ಆಪಾದನೆಯೂ ಇದೆ. 'ಸಚ್ಚಾರಿತ್ರ್ಯ'ದ ಪಕ್ಷಕ್ಕೆ ಇವೆಲ್ಲಾ ಗೊತ್ತಿರುವ ಸಂಗತಿಗಳೇ.

▲▲▲

ಏಪ್ರಿಲ್ 24 ರಂದು ಮುಂಬೈಯಲ್ಲಿ ಗುಜರಾತಿನ ಡಿಐಜಿ (ಗಡಿ ಪ್ರದೇಶ) ಡಿ.ಜಿ.ವಂಜಾರಾ, ಗುಪ್ತಚರ ಕಚೇರಿಯ ಎಸ್.ಪಿ. ಯಾಗಿರುವ ರಾಜಕುಮಾರ್ ಪಾಂಡ್ಯನ್ ಮತ್ತು ರಾಜಸ್ತಾನದ ಆಳ್ವಾರ್‌ನ ಎಸ್.ಪಿ.ಯಾಗಿರುವ ದಿನೇಶ್ ಕುಮಾರ್‌ರನ್ನು ಒಂದು ಸುಳ್ಳು 'ಎನ್‌ಕೌಂಟರ್' ನಡೆಸಿ ಮುಸ್ಲಿಂ ದಂಪತಿಗಳನ್ನು (ಸೊಹ್ರಾಬುದ್ದೀನ್ ಶೇಕ್ ಮತ್ತು ಕೌಸರ್ ಬಾನೊ) ಹಾಗೂ ಏಕೈಕ ಪ್ರತ್ಯಕ್ಷದರ್ಶಿ(ಮಲಸೀರಾಂ ....)ಯನ್ನು ಕೊಂದ ಆಪಾದನೆಯ ಮೇಲೆ ಬಂಧಿಸಲಾಗಿದೆ.


ಇವರು ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕೊಲ್ಲಲು ಬಂದಿದ್ದರು, ಎನ್‌ಕೌಂಟರ್‌ನಲ್ಲಿ ಸತ್ತಿದ್ದಾರೆ ಎಂದು ಆಗ ತಿಳಿಸಲಾಗಿತ್ತು.

ಸುಪ್ರೀಂಕೋರ್ಟ್‌ನಲ್ಲಿ ಇದನ್ನು ಪ್ರಶ್ನಿಸಿ ಸೊಹ್ರಾಬುದ್ದೀನ್ ಸೋದರ ರುಬಾಬುದ್ದೀನ್ ಶೇಖ್ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ನ್ಯಾಯಾಲಯ ಗುಜರಾತಿನ ಡಿಜಿಪಿಗೆ ಈ ಬಗ್ಗೆ ತನಿಖೆ ನಡೆಸಲು ಆದೇಶ ನೀಡಿತ್ತು. ಈ ತನಿಖೆಯ ನಂತರ ಗುಜರಾತ್ ಸರ್ಕಾರ ಈ 'ಮುಖಾಮುಖಿ' ಅಥವಾ ಎನ್‌ಕೌಂಟರ್ ಎಂಬುದು ಒಂದು ಮೋಸ ಎಂದು ಒಪ್ಪಿಕೊಂಡಿತು.

ಡಿಐಜಿ ವಂಜಾರಾ ಬಂಧನ ನರೇಂದ್ರ ಮೋದಿಗೊಂದು ದೊಡ್ಡ ಏಟು. ಏಕೆಂದರೆ ಆತ ಒಬ್ಬ ನೆಚ್ಚಿನ ಬಲಗೈ ಬಂಟ. ಒಂಭತ್ತು 'ಎನ್‌ಕೌಂಟರ್' ಗಳಲ್ಲಿ 15 ಜನರನ್ನು ಕೊಂದ ಪ್ರತಾಪ ಈತನದು. ಇವೆಲ್ಲಾ ಮೋಸದ ಎನ್‌ಕೌಂಟರ್‌ಗಳು ಎಂಬ ಆಪಾದನೆಯಿದೆ. ಮುಂಬೈಯ ಹುಡುಗಿ ಇಶ್ರತ್ ಜಹಾಂ ಮತ್ತು ಸಮೀರ್ ಖಾನ್ ಪಠಾಣ್ ಮೋದಿಯವರನ್ನು ಕೊಲ್ಲಲು ಬಂದಿದ್ದು, ಆ 'ಭಯೋತ್ಪಾದಕ'ರನ್ನು ಗುಂಡಿಕ್ಕಿ ಕೊಂದ ಘಟನೆಯೂ ಅವುಗಳಲ್ಲೊಂದು. ಮೋದಿ ಅಧಿಕಾರ ಪಡೆಯಲು ಮತ್ತು ಅದನ್ನು ಉಳಿಸಿಕೊಳ್ಳಲು ಸಮಾಜವನ್ನು ಮತೀಯ ಆಧಾರದಲ್ಲಿ ಒಡೆಯುವ ಗಲಭೆಗಳನ್ನು ನಡೆಸಿದಾಗಲೆಲ್ಲಾ ಇಂತಹ 'ಎನ್‌ಕೌಂಟರ್' ಗಳು ನಡೆದವು ಎಂಬುದು ಗಮನಾರ್ಹ. ಸಾಮಾನ್ಯವಾಗಿ ಈ ಎನ್‌ಕೌಂಟರ್‌ಗಳಲ್ಲಿ ಸತ್ತ 'ಭಯೋತ್ಪಾದಕರೆಲ್ಲಾ' ಮೋದಿಯವರನ್ನು 'ಕೊಲ್ಲಲು' ಬಂದಿದ್ದರು!

ಈ ಎನ್‌ಕೌಂಟರ್‌ಗಳು ಮುಖ್ಯಮಂತ್ರಿ ಮತ್ತು ಗೃಹಮಂತ್ರಿಯ ಅನುಮತಿಯಿಲ್ಲದೆ ನಡೆಯುವುದಿಲ್ಲ. ಹಾಗಿದ್ದರೆ ಈ ಮೋಸದಾಟದಲ್ಲಿ ನರೇಂದ್ರ ಮೋದಿಯ ಪಾತ್ರವೇನು, ಅದರಿಂದ ಆತನ 'ಸುರಾಜ್ಯ'ದ ನಿಜ ರೂಪವೇನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆಯಲ್ಲವೇ?


ಇವೆರಡೂ ಬಹುಸಂಖ್ಯಾತ ಕೋಮುವಾದದ ದುಷ್ಫಲಗಳು ಎಂದರೆ ತಪ್ಪಾಗುತ್ತದೆಯೇ? ಸಂಘ ಪರಿವಾರ ಪ್ರತಿಪಾದಿಸುವ ಆಕ್ರಮಣಕಾರಿ ಕೋಮುವಾದ ಎಲ್ಲಾ ರೀತಿಯ ಬೂಟಾಟಿಕೆಗಳಿಗೆ, ಹಣದಾಹ, ಲಂಚಕೋರತನವನ್ನು ಮರೆ ಮಾಡುತ್ತವೆ; ದಾಂಡಿಗರು, ಗಲಭೆಕೋರರು 'ಹಿಂದೂ ಸಂಸ್ಕೃತಿ ಮತ್ತು ನೈತಿಕತೆ' ಯ ರಕ್ಷಣೆಯ ಹೆಸರಿನಲ್ಲಿ ಕಾನೂನನ್ನು ಮುರಿಯಲು ಪ್ರೇರಣೆ ನೀಡುತ್ತದೆ. ತಮ್ಮ ವಿಕೃತ ಮೌಲ್ಯಗಳನ್ನು ಒಪ್ಪದ



ಕಲಾವಿದರನ್ನು, ಬುದ್ಧಿಜೀವಿಗಳನ್ನು, ಮುಸ್ಲಿಮರನ್ನು, ಕ್ರೈಸ್ತರನ್ನು, ಯುವತಿಯರನ್ನು ಬೆದರಿಸುವುದು ಅವರ ಚಟುವಟಿಕೆಗಳ ಮುಖ್ಯ ಲಕ್ಷಣವಾಗುತ್ತಿದೆ. ಇಂತಹ ಚಟುವಟಿಕೆಗಳಿಂದ ಕೇವಲ ಹಣಕ್ಕಾಗಿ ನಡೆಸುವ ಕೃತ್ಯಕಿಳಿಯಲು ಎಷ್ಟು ಸಮಯ ಬೇಕು? ಬಿಜೆಪಿಯ ಸ್ವರೂಪವೇ ಬಲಪಂಥೀಯವಾಗಿರುವುದರಿಂದ ಎಲ್ಲಾ ರೀತಿಯ ಹಣಗಳಿಕೆಯ ಚಟುವಟಿಕೆಗಳೊಂದಿಗೆ ನಂಟು ಸಹಜವಾಗಿಯೇ ಉಂಟಾಗುತ್ತದೆ. ಕನಿಷ್ಟ ಈ ಘಟನೆಯ ನಂತರವಾದರೂ ಕ್ವಟ್ರೋಚಿ ಬಗ್ಗೆ, ಬೋಫೋರ್ಸ್ ಹಗರಣದ ಬಗ್ಗೆ ಬಿಜೆಪಿಯ ಬೊಬ್ಬೆಯನ್ನು ಯಾರೂ ತಾನೇ ಗಂಭೀರವಾಗಿ ತಗೊಳ್ಳಲು ಸಾಧ್ಯ! ಬಿಜೆಪಿಗಂತೂ ಅದು ವಿರೋಧಿಗಳ ಮೇಲೆ ಎಸೆಯುವ ಒಂದು ರಾಜಕೀಯ ದಾಳ ಅಷ್ಟೆ.

ಕಟಾರಾ ಪ್ರಕರಣ ಬಿಜೆಪಿಯಲ್ಲಿ ಅವನತಿಯ ಲಕ್ಷಣ ಎಂಬುದನ್ನು ಎಲ್.ಕೆ.ಅಡ್ವಾಣಿಯವರು ಒಪ್ಪುವುದಿಲ್ಲವಂತೆ. ಎಲ್ಲರ ಕಣ್ಣಿಗೂ ಕಾಣಿಸುತ್ತಿರುವುದನ್ನು ಅವರು ನಿರಾಕರಿಸುತ್ತಿದ್ದಾರೆ. ಬಿಜೆಪಿ ಸಂಸದರಿಗೆ ಸಂಬಂಧಪಟ್ಟಂತೆ ಇದು ಇತ್ತೀಚಿನ ಹಗರಣವಷ್ಟೆ. ಸಂಸತ್ತಿನಲ್ಲಿ ಪ್ರಶ್ನೆ ಕೇಳುವುದಕ್ಕೆ ಲಂಚ ಕೇಳಿ, ಅದರಿಂದಾಗಿ ಸಂಸತ್ತಿನಿಂದ ಹೊರಹಾಕಲ್ಪಟ್ಟ ಆರು ಬಿಜೆಪಿ ಸಂಸದರ ಪ್ರಕರಣ ಬಹಳ ಹಳೆಯದೇನಲ್ಲ. ಬಿಜೆಪಿಯು ಲೋಕಸಭೆಯಿಂದ ಅವರನ್ನು ಹೊರಹಾಕುವುದನ್ನು ವಿರೋಧಿಸಿತ್ತು ಎಂಬುದನ್ನು ಭಾರತೀಯ ಜನತೆ ಮರೆತಿಲ್ಲ. ಅದೇ ರೀತಿ ಬಿಜೆಪಿಯ ಅಧ್ಯಕ್ಷರೇ ನೋಟುಗಳ ಕಂತೆಯನ್ನು ಪಡೆಯುತ್ತಿರುವ ಟೇಪನ್ನು ಯಾರು ತಾನೇ ಮರೆಯಲು ಸಾಧ್ಯ? ಅದೇ ರೀತಿ ವಾಜಪೇಯಿ ಸರ್ಕಾರದ ಮಂತ್ರಿಗಳ ಹಗರಣಗಳು, ತೆಹಲ್ಕಾ ಟೇಪುಗಳು ಇತ್ಯಾದಿ.


ಬಿಜೆಪಿ ಬೇರೆ ಬಂಡವಾಳಶಾಹಿ ಪಕ್ಷಗಳಿಗಿಂತ ಭಿನ್ನವಾಗಿರದಿದ್ದರೂ ತಾನು ಭಿನ್ನ ಎನ್ನುತ್ತಾ ಸದಾ 'ಚಾಲ್ - ಚಾರಿತ್ರ್ಯ - ಸುರಾಜ್' (ಸದ್ವರ್ತನೆ - ಸಚ್ಚಾರಿತ್ರ್ಯ-ಸುರಾಜ್ಯ) ಎಂದು ಬೊಗಳೆ ಹೊಡೆಯುತ್ತಲೇ ಇರುತ್ತದೆ. ಕಟಾರಾ ಘಟನೆಯ ನಂತರವಾದರೂ ಆತ್ಮವಿಮರ್ಶೆ ಮಾಡಿಕೊಳ್ಳಲಿ ಎಂದು ಜನ ನಿರೀಕ್ಷಿಸುತ್ತಾರೆ. ಇಲ್ಲವಾದರೆ ಕೋಮುವಾದದ ಪಕ್ಷ ಕಪಟತನದ್ದು ಎಂಬ ಅಪಖ್ಯಾತಿಗೂ ಗುರಿಯಾಗಬೇಕಾದೀತು.



... ಎನ್‌ಕೌಂಟರ್ ನಡೆಸಿ ಸಿಕ್ಕಿಬಿದ್ದ ಪೊಲೀಸ್ ಅಧಿಕಾರಿಗಳು

ಜೆಡಿಎಸ್ ಬಿಜೆಪಿಗೆ ಮುಖ್ಯಮಂತ್ರಿ ಸ್ಥಾನ ಒಪ್ಪಿಸುವುದೇ?





ಜಿ.ಎನ್.ನಾಗರಾಜ್

ಕುಮಾರಸ್ವಾಮಿ ಯಡಿಯೂರಪ್ಪ ನವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಒಪ್ಪಿಸುವರೇ? ಮುಖ್ಯಮಂತ್ರಿಯಾಗುವ ಯಡಿಯೂರಪ್ಪನವರ ಕನಸು ನನಸಾಗುವುದೇ? ಅಥವಾ ಕನಸಿಗೆ ದೇವೇಗೌಡರು ಡೈನಾಮೈಟ್ ಇಟ್ಟು ಅದನ್ನು ಭಗ್ನಗೊಳಿಸುವರೇ? ದೇವೇಗೌಡರು ಸೋನಿಯಾಗಾಂಧಿಯವರನ್ನು ಈಗಾಗಲೇ ಭೇಟಿಯಾಗಿದ್ದಾರೆಯೇ? ಅವರ ನಡುವೆ ಮತ್ತು ಕಾಂಗ್ರೆಸ್ ಜೆಡಿ(ಎಸ್) ಸರ್ಕಾರ ರಚಿಸುವ ಬಗ್ಗೆ ರಹಸ್ಯ ಒಪ್ಪಂದ ಏರ್ಪಟ್ಟಿದೆಯೇ? ಇದು ಒಂದು ಕಡೆ ಬಿಜೆಪಿಯಲ್ಲಿ ಮತ್ತೊಂದು ಕಡೆ ಕಾಂಗ್ರೆಸ್‌ನಲ್ಲಿ ಹುಟ್ಟಿಸಿರುವ ಅಲ್ಲೋಲ ಕಲ್ಲೋಲಗಳೇನು?

ಪ್ರಸಾರ ಹೆಚ್ಚಿಸುವ ಗಿಮಿಕ್‌ಗಳು

ಹೀಗೆ ಕನ್ನಡದ ವಾರಪತ್ರಿಕೆಗಳು, ಕೆಲವೊಮ್ಮೆ ದಿನಪತ್ರಿಕೆಗಳು ಈಗ್ಗೆ ಕೆಲವು ತಿಂಗಳುಗಳಿಂದ ಪುಂಖಾನುಪುಂಖವಾಗಿ ಪುಟಗಟ್ಟಲೇ ಲೇಖನಗಳನ್ನು ಪ್ರಕಟಿಸುತ್ತಿವೆ. ಪ್ರಶ್ನೆಗಳನ್ನು ಎತ್ತುತ್ತಿವೆ. ಗೊಂದಲಗಳನ್ನು ಮೂಡಿಸುತ್ತಿವೆ. ಆದರೆ ಈ ಲೇಖನಗಳೆಲ್ಲಾ ತಮ್ಮ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಿಕೊಳ್ಳುವ ಗಿಮಿಕ್‌ಗಳಾಗಿ ತೋರುತ್ತಿವೆ. ಜಾಹೀರಾತು ಗಳಿಕೆಯ ಲಾಭಕ್ಕಾಗಿ ಉದ್ದವಾಗಿ ಎಳೆಯಲ್ಪಡುವ ಸೀರಿಯಲ್‌ಗಳಂತೆ ಅಥವಾ ನೋಡುಗರನ್ನು ಸೆಳೆಯಲು ಟಿ.ವಿ.ವಾರ್ತೆಗಳು ಮಾಡುವ ಅಬ್ಬರದಂತೆ ಕಾಣುತ್ತಿವೆ.

ಮುಂದಿನ 20 ತಿಂಗಳ ಕಾಲ ಕರ್ನಾಟಕವನ್ನಾಳುವ ಸರ್ಕಾರ ಯಾವುದು? ಮುಖ್ಯಮಂತ್ರಿಯಾರು ? ಜೆಡಿ(ಎಸ್) ಬಿಜೆಪಿ ನಡುವಣ ಕೋ-ಜಾ ಮೈತ್ರಿ ವಿಶ್ಲೇಷಣೆ ಮಾಡಬೇಕಾದ ಪ್ರಶ್ನೆಗಳೇ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಎಳೆಯುವ ರೀತಿಯ ವಿಶ್ಲೇಷಣೆ ಬಗ್ಗೆ ವಿಚಾರವಂತರು ಪ್ರಶ್ನೆ ಎತ್ತಲೇಬೇಕಾಗಿದೆ.

ಅಧಿಕಾರ ಹಸ್ತಾಂತರದ ಬಗ್ಗೆ ಎತ್ತುತ್ತಿರುವ ಎಲ್ಲ ಪ್ರಶ್ನೆಗಳೂ ಕರ್ನಾಟಕ ರಾಜಕೀಯ ಚದುರಂಗದಾಟದ ಸುತ್ತತ್ತಲೇ ಸುತ್ತುತ್ತಿವೆ. ಆಕಾರಣದಿಂದಲೇ ದೇವೇಗೌಡರು ಏಕಕಾಲಕ್ಕೆ ಚದುರಂಗದಾಟದಲ್ಲಿ ಎಲ್ಲ ವಿರೋಧಿಗಳನ್ನು ಮಣ್ಣು ಮುಕ್ಕಿಸುವಂತೆ ದಾಳ ಗಳನ್ನುರುಳಿಸಬಲ್ಲ ನಿಪುಣನಂತೆಯೂ ಹಾಗೆಯೇ ಕರ್ನಾಟಕದ ರಾಜಕೀಯದ ಅತಿದೊಡ್ಡ ಖಳನಾಯಕನಂತೆ, ವಿದೂಷಕನಂತೆ ಚಿತ್ರಿಸಲ್ಪಡುತ್ತಿದ್ದಾರೆ.

ದೇಶದ ಜನರ ಹಿತದೃಷ್ಟಿಯೇ ಪ್ರಧಾನವಾಗಬೇಕು

ಇವೆಲ್ಲವುಗಳಿಗಾಗಿಯೇ ಪ್ರಮುಖವಾದುದು ಕರ್ನಾಟಕದ ಹಿತದೃಷ್ಟಿಯಿಂದ, ಭಾರತದ ಹಿತದೃಷ್ಟಿಯಿಂದ ಶ್ರೀಸಾಮಾನ್ಯನ ಹಿತದೃಷ್ಟಿಯಿಂದ ಕರ್ನಾಟಕ ಮುಂದಿನ ಸರ್ಕಾರ. ಸರ್ಕಾರದ ರಾಜಕೀಯ ಸ್ವರೂಪ ಯಾವುದಿರಬೇಕು ಎಂಬುದು ಈ ಪ್ರಶ್ನೆಯ ಭಾಗವಾಗಿ ಮುಖ್ಯಮಂತ್ರಿ ಸ್ಥಾನದ ಹಸ್ತಾಂತರದ ಪ್ರಶ್ನೆಯನ್ನು ನೋಡಬೇಕು. ಆದರೆ ಈ ವಿಷಯದ ಬಗ್ಗೆ ಬಂದಿರುವ ಪುಟಗಟ್ಟಲೆ ವರದಿ, ವಿಶ್ಲೇಷಣೆಗಳಲ್ಲಿ ಕರ್ನಾಟಕ, ಭಾರತ ಜನತೆಯ ವಿಷಯವೇ ಗೌಣವಾಗಿದೆ. ವಿಧಾನಸಭೆಯ ಮೊಗಸಾಲೆಗಳಲ್ಲಿ, ಶಾಸಕರ ಭವನದ ಅಡ್ಡೆಗಳಲ್ಲಿ ವಿಧಾನಸೌಧದ ಮಂತ್ರಿಮಾನ್ಯರ, ಐಎಎಸ್ ಅಧಿಕಾರಿವೃಂದದ ಗುಪ್ತ ಕೊಠಡಿಗಳ ರಹಸ್ಯ ಸಮಾಲೋಚನೆಗಳಲ್ಲಿ ಅಧಿಕಾರಾರೂಢರು ತಮ್ಮ ಪಾದಾರವಿಂದಗಳನ್ನು ಬೆಳೆಸುವ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಹರಟೆ, ಜೋಕ್‌ಗಳ ಮುಂದುವರಿದ ಭಾಗಗಳೆಂಬಂತೆ, ಬರವಣಿಗೆಯಲ್ಲಿ ತರಬಹುದಾದ ರೂಪಗಳೆಂಬಂತೆ ಕಾಣುತ್ತಿವೆ. ನಟಿಯೊಬ್ಬಳ ಅಶ್ಲೀಲ ನೃತ್ಯವನ್ನು ಬಾಯಲ್ಲಿ ನೀರೂರುವಂತೆ ಬಣ್ಣಿಸುವ ಲೋಲುಪತೆ ಈ ಲೇಖನಗಳಲ್ಲಿ ಕಣ್ಣಿಗೆ ರಾಚುವಂತೆ ಕಾಣುತ್ತಿದೆ.

ಕರ್ನಾಟಕವನ್ನು ಸುಡುತ್ತಿರುವ ಕೊಳ್ಳಿ - ಈ ಕೋ-ಜಾ ಸರ್ಕಾರ

ಜೆಡಿ(ಎಸ್) ಪಕ್ಷ ದೇವೇಗೌಡರ ಆಶೀರ್ವಾದದಿಂದಲೋ ಅನುಮತಿಯಿಲ್ಲದೆಯೋ ತಮ್ಮ ಇಲ್ಲಿಯವರೆಗಿನ ಜಾತ್ಯಾತೀತ ನಿಲುವನ್ನು ತ್ಯಜಿಸಿ ತತ್ವರಹಿತವಾಗಿ ಬಿಜೆಪಿಯೊಂದಿಗೆ ಮಾಡಿಕೊಂಡ ಹೊಂದಾಣಿಕೆ ಎಲ್ಲ ಜನಪರ, ಪ್ರಗತಿಪರ ಶಕ್ತಿ, ವ್ಯಕ್ತಿಗಳ, ಜಾತ್ಯಾತೀತ ರಾಜಕೀಯ ಪಕ್ಷಗಳ ಖಂಡನೆಗೆ, ಧಾಳಿಗೆ ಸಕಾರಣವಾಗಿಯೇ ತುತ್ತಾಯಿತು. ಕೋಮುವಾದಿ ಜಾತ್ಯಾತೀತ ಎಂಬ ಕೋ-ಜಾ ಸರ್ಕಾರದ ಅಸ್ತಿತ್ವವೇ ಕರ್ನಾಟಕವನ್ನು ಸುಡುತ್ತಿರುವ ಒಂದು ಕೊಳ್ಳಿ (ಸ್ಮಶಾನಗಳಲ್ಲಿ ಹೆಣವನ್ನು ಸುಡಲು ಬಳಸುವ ಉರಿಯುತ್ತಿರುವ ಕಟ್ಟಿಗೆ ಎಂಬುದಂತೂ ನಿಜ, ಈ ಸರ್ಕಾರದ 15 ತಿಂಗಳಿಗೂ ಮೀರಿದ ಆಡಳಿತದಲ್ಲಿ ಬಿಜೆಪಿ ಸರ್ಕಾರದ ಮೂಲಕವಾಗಿಯೂ ಸರ್ಕಾರಕ್ಕೆ ಹೊರತಾದ ರಾಜಕೀಯ ಚಟುವಟಿಕೆಯಿಂದಾಗಿಯೂ ಸಂಘಪರಿವಾರ ಸೃಷ್ಟಿಸಿದ ಕೋಮುದಂಗೆಗಳು, ಸಂಘಟಿಸಿದ ವಿರಾಟ್ ಹಿಂದೂ ಸಮಾವೇಶಗಳು, ಗೋಮೇಳ ಯಾತ್ರೆಗಳು ಇತ್ಯಾದಿಗಳ ಫಲವಾಗಿ ಹೆಚ್ಚು ಪ್ರತಿಫಲವನ್ನು ಪಡೆದಿದೆ ಎಂಬುದು ಎಲ್ಲರಿಗೂ ಕಾಣುತ್ತಿರುವ ಸತ್ಯ. ಆದ್ದರಿಂದ ಈ ಕೋಜಾ ಸರ್ಕಾರದ ಅಧಿಕಾರದಲ್ಲಿ ಮುಂದುವರೆಯಬಾರದು ಎಂಬುದು ಬಿಜೆಪಿ ಜೆಡಿ(ಎಸ್) ಮೈತ್ರಿ ಆದಷ್ಟು ಬೇಗನೇ ಮುರಿದುಬೀಳಲಿಎಂದು ಈ ಸರ್ಕಾರದ ರಚನೆಯನ್ನು ಖಂಡಿಸಿದವರೆಲ್ಲ ಬಯಸುವುದು ಸಕಾರಣ ಹಾಗೂ ತರ್ಕಬದ್ಧ. ಜೆಡಿ(ಎಸ್) ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡದಿರಬಹುದು ಈ ಸರ್ಕಾರ ಬೀಳಬಹುದು ಎಂಬುದು ಈ ಎಲ್ಲ ವ್ಯಕ್ತಿ, ಶಕ್ತಿಗಳು, ಪರ್ತಕರ್ತರು, ಜಾತ್ಯಾತೀತ ರಾಜಕೀಯ ಪಕ್ಷಗಳು ಸ್ವಾಗತಿಸಬೇಕಾದ ಅಂಶ. ಕೋಮುವಾದಿಗಳ ಬೆಳವಣಿಗೆಯನ್ನು ಬಯಸುವ ಬುದ್ಧಿ ಜೀವಿ, ಸಾಹಿತಿಗಳು ಪತ್ರಕರ್ತರು ಯಥೇಚ್ಛವಾಗಿದ್ದಾರೆ. ಅವರು ಬಿಜೆಪಿಗೆ ಅಧಿಕಾರ ಹಸ್ತಾಂತರವಾಗುವುದಿಲ್ಲ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುವುದಿಲ್ಲ ಎಂದು ಆತಂಕದಿಂದ ಹಲುಬಿದರೆ, ಕೃದ್ಧರಾಗಿ ತಮ್ಮ ಪತ್ರಿಕಾ ವರದಿಗಳಲ್ಲಿ ದೇವೇಗೌಡರನ್ನು ಟೀಕಿಸಿದರೆ ಅದರಲ್ಲಿ ಅರ್ಥವಿದೆ.


ದೇವೇಗೌಡರು ಕೋಜಾ ಸರ್ಕಾರವನ್ನು ಬೀಳಿಸುವುದು ಸ್ವಾಗತಾರ್ಹವಲ್ಲವೇ?

ಆದರೆ ಕೋಜಾ ಸರ್ಕಾರದ ರಚನೆಯನ್ನು ಟೀಕಿಸಿದವರೇ ಈಗ ದೇವೇಗೌಡರನ್ನು ಖಳನಾಯಕನಂತೆ ಚಿತ್ರಿಸುವುದರಲ್ಲಿ ಅರ್ಥವಿದೆಯೇ? ಹೀಗೆಂದು ಕೂಡಲೇ ಈ ಲೇಖಕನಾಗಲಿ, ಸಿಪಿಐ(ಎಂ) ಪಕ್ಷವಾಗಲಿ ದೇವೇಗೌಡರ ಪರ ಅಥವಾ ಬೆಂಬಲಿಗರೆಂದು ಅವರ ಸಂದರ್ಭ ಸಾಧಕತನವನ್ನು, ಕುಟುಂಬ ರಾಜಕಾರಣವನ್ನು ಬೆಂಬಲಿಸುತ್ತದೆಂದು ಅರ್ಥವಲ್ಲ. ದೇವೇಗೌಡರು, ಅವರ ಪರ ಬಿಜೆಪಿಯೊಂದಿಗೆ ಮೈತ್ರಿ ಬೆಳೆಸುವ ಸೂಚನೆ ಕಂಡ ಕೂಡಲೇ ಈ ಮೈತ್ರಿಯನ್ನು ತಪ್ಪಿಸಲು ಪ್ರಯತ್ನಿಸಿದವರು, ಅದನ್ನು ಖಂಡಿಸಿದರು, ರಾಜ್ಯಾದ್ಯಂತ ಅದನ್ನು ಪ್ರತಿಭಟಿಸಿದವರು ಸಿಪಿಐ(ಎಂ) ಪಕ್ಷದವರು. ಅದೇ ಸಮಯದಲ್ಲಿ ದೇವೇಗೌಡರ ಯಾವ ಸಂದರ್ಭ ಸಾಧಕತನ, ಅಧಿಕಾರದಾಹ ಬಿಜೆಪಿಯೊಂದಿಗಿನ ಮೈತ್ರಿಗೆ, ಕರ್ನಾಟಕದಲ್ಲಿ ಕೋಮುವಾದಿಗಳ ಕಾರು ಬಾರಿಗೆ ಮೊದಲ ಅವಕಾಶವನ್ನು ನೀಡಿತೋ ಅದೇ ಅವಕಾಶವಾದ ಬಿಜೆಪಿಯೊಂದಿಗಿನ ಮೈತ್ರಿ ಮುರಿದು ಬೀಳಲು, ಬಿಜೆಪಿಯ ನಾಯಕ ಮುಖ್ಯಮಂತ್ರಿಯಾಗಿ ಕರ್ನಾಟಕ ಸರ್ಕಾರ ಆರೆಸ್ಸೆಸ್ ಕೈಯಲ್ಲಿನ ಎ.ಕೆ.47 ಗನ್ನಾಗುವ ಸಾಧ್ಯತೆಯನ್ನು ತಪ್ಪಿಸಲು ಕಾರಣವಾದರೆ ಅದನ್ನು ಸ್ವಾಗತಿಸಬೇಕೇ? ವಿರೋಧಿಸಬೇಕೇ? ಟೀಕಿಸಬೇಕೇ? ಇದಕ್ಕೆ ಉತ್ತರಗಳೇ. ರಾಜಕಾರಣವನ್ನು ಒಂದು ಚದುರಂಗ ದಾಟದಂತೆ ಪರಿಗಣಿಸದೆ ವ್ಯಕ್ತಿಗಳನ್ನು ಅವರ ಪ್ರತಿಷ್ಠೆಗಳನ್ನು ಅಟ್ಟಕ್ಕೇರಿಸದೆ ಜನ ಸಮುದಾಯದ ಹಿತದೃಷ್ಟಿಯಿಂದ ರಾಜ್ಯ ದೇಶದ ಹಿತದೃಷ್ಟಿಯಿಂದ ರಾಜಕೀಯ ವಿಮರ್ಶಿಸುವ, ಜನಸಾಮಾನ್ಯರಿಗೆ ಸರಿಯಾದ ರಾಜಕೀಯ ಅರಿವನ್ನು ಮೂಡಿಸುವ ಕರ್ತವ್ಯ ಪ್ರಜ್ಞೆಯ ಒರೆಗಲ್ಲು. ಒರೆಗಲ್ಲಿಗೆ

ಪುಟ 14 ಕ್ಕೆ

'ಪ್ರಕಾಶ್ ಕಾರಟ್‌ರವರು ದೇವೇಗೌಡರನ್ನು ಸೋನಿಯಾಗಾಂಧಿಯ ಭೇಟಿ ಮಾಡಿಸಿದರಂತೆ'

ಇದ್ದಕ್ಕಿದಂತೆ ಜೆಡಿ(ಎಸ್) ಸಿಂಧ್ಯಾಬಣದ ರಾಜ್ಯ ಅಧ್ಯಕ್ಷರಾದ ಮಾಜಿ ಸಚಿವ ಏಕಾಂತಯ್ಯನವರು ನನಗೆ ಫೋನಾಯಿಸಿ ನಾಗರಾಜ್‌ರವರೇ ಮೊನ್ನೆ ದೇವೇಗೌಡರು ದೆಹಲಿಗೆ ಹೋಗಿದ್ದಾಗ ಸೋನಿಯಾಗಾಂಧಿಯವರನ್ನು ಭೇಟಿ ಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದ ಸುದ್ದಿಯನ್ನು ಓದಿದ್ದೀರಾ ಎಂದರು. ನಾನು ಓದಿದ್ದೇನೆ, ಭೇಟಿ ಮಾಡಿದ್ದಾರೆ ಎಂದು ಖಚಿತ ಕೆಲವು ಜೆಡಿ(ಎಸ್)ನ ಮೂಲಗಳು ಹೇಳುತ್ತಿವೆ' ಎಂದೆ. ಅವರು ಮುಂದುವರೆದು 'ನಿಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ರವರೇ ದೇವೇಗೌಡರನ್ನು ಸೋನಿಯಾಗಾಂಧೀ ಬಳಿಗೆ ಕರೆದೊಯ್ದರಂತೆ ನಿಜವೇ?' ಎಂದು ಪ್ರಶ್ನಿಸಿದರು. ಇದು ಶುದ್ಧ ಗಾಳಿ ಸುದ್ದಿ ಎಂದು ನನಗೆ ಗೊತ್ತಾದರೂ ಆಶ್ಚರ್ಯವಾಗಲಿಲ್ಲ. ಏಕೆಂದರೆ ಕೋಜಾ ಸರ್ಕಾರ ಅಸ್ತಿತ್ವಕ್ಕೆ ಬಂದ ಕೆಲವೇ ತಿಂಗಳಗಳಲ್ಲಿಯೇ ಕೆಲವು ರಾಜಕೀಯ ನಾಯಕರು ನಿಕಟವರ್ತಿಗಳು ನಮ್ಮನ್ನು ಸಂಪರ್ಕಿಸಿ ಕೆಲವು ನಾಯಕರು ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಲಿಚ್ಛಿಸಿದ್ದಾರೆ ಹೇಗಾದರೂ ಮಾಡಿ ಪ್ರಕಾಶ್ ಕಾರಟ್ ರವರ ಮೂಲಕ ಅವರನ್ನು ಭೇಟಿ ಮಾಡುವ ಅವಕಾಶ ಕಲ್ಪಿಸಿ ಕೊಡಿ ಎಂದು ಕೇಳಿದ್ದರು. ಇಂತಹ ವಿವಿಧ ಮೂಲೆಗಳಿಂದ ಪದೇ ಪದೇ ಇಂತಹ ಸಹಾಯವನ್ನು ಕೇಳಲಾಗುತ್ತಿತ್ತು. ಹೀಗಾಗಿ ಹಿಂದೆ ಕಾಂ:ಸುರ್‌ಜೀತ್ ಮತ್ತು ಅಂದಿನ ಪ್ರಧಾನಿ ದೇವೇಗೌಡರ ನಿಕಟಸಂಪರ್ಕದ ಬಗ್ಗೆ ಅನೇಕ ಗಾಳಿಸುದ್ದಿಗಳು ಹಬ್ಬಿದಂತೆ ಇಂದುಕೂಡ ಸೋನಿಯಾಗಾಂಧಿಯವರನ್ನು ಸಂಪರ್ಕಿಸಲು, ಅತ್ಯಂತ ನಂಬಿಕಾರ್ಹ ದಾರಿ ಸಿಪಿಐ(ಎಂ) ಮೂಲಕವೇ ಎಂಬ ನಂಬಿಕೆ ವ್ಯಾಪಕವಾಗಿವೆ. ಇಂತಹುದೇ ನಂಬಿಕೆಯ ಮೇಲೆ ಯಾರೋ ಹಾರಿಸಿರುವ ಗಾಳಿಪಟ ಇದು ಎಂದು ಊಹಿಸಲು ತಡವಾಗಲಿಲ್ಲ. ಆದ್ದರಿಂದ ನಾನು 'ಏಕಾಂತಯ್ಯನವರೇ ಇದು ಕೇವಲ ಗಾಳಿ ಸುದ್ದಿ. ನಮ್ಮ ಪಕ್ಷವಾಗಲಿ ಪ್ರಕಾಶ್ ಕಾರಟ್‌ರವರಾಗಲಿ ಅವರನ್ನು ಇವರನ್ನು ಭೇಟಿ ಮಾಡಿಸುವ, ಅವರ ರಾಜಿ ಸಂಧಾನಸೂತ್ರಗಳನ್ನು



ಏರ್ಪಡಿಸುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಮತ್ತು ಅಂತಹ ಯಾವುದೇ ಪ್ರಸಂಗಬಂದರೂ ನಮ್ಮ ಕೇಂದ್ರ ನಾಯಕತ್ವ ನಮ್ಮ ಗಮನಕ್ಕೆ ತರದೆ, ನಮ್ಮ ಅಭಿಪ್ರಾಯವನ್ನು ಪಡೆಯದೇ ಅಂತಹ ಕೆಲಸಕ್ಕೆ ಕೈಹಾಕುವುದಿಲ್ಲ' ಎಂದು ಉತ್ತರಿಸಿದೆ.

ಆದರೆ ವಿಧಾನಸೌಧದ ಮೊಗಸಾಲೆಗಳಲ್ಲಿ ಶಾಸಕರ ಭವನದಲ್ಲಿ ಪದೇ ಪದೇ ಈ ಮಾತು ಕೇಳಿ ಬರುತ್ತಲೇ ಇತ್ತು. ಆದರೆ ಇದು ಗಾಳಿಯಲ್ಲಿ ಹಾರಾಡುತ್ತಿದ್ದ ಮಾತಾಗಿತ್ತು ಕಪ್ಪುಬಿಳುಪಿಗೆ ಅಂದರೆ ದೇವೇಗೌಡ ಸೋನಿಯಾ ಭೇಟಿಯ ಬಗ್ಗೆ ಬರೆಯಲ್ಪಡುತ್ತಿದ್ದ ಲೇಖನಗಳಲ್ಲಿ ನಮೂದಾಗಿರಲಿಲ್ಲ. ಕೊನೆಗೊಮ್ಮೆ 'ಹಾಯ್' ಬೆಂಗಳೂರು ಪತ್ರಿಕೆಯಲ್ಲಿ ಅದೂ ಆಯಿತು.

ನಮ್ಮ ಪಕ್ಷದ ನಾಯಕರ ನಡುವಿನ ಮಾತುಕತೆಗಳಲ್ಲಿ ತಮಾಷೆಗಳಿಗೆ ಇದೊಂದು ಆಹಾರವಾಗಿತ್ತು. ಇತ್ತೀಚೆಗೆ ಕೇಂದ್ರ ಸಮಿತಿಯ ಸಭೆಯ ಸಂದರ್ಭದಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾಗ ಈ ವದಂತಿಯ ಬಗ್ಗೆ ಕಾಂ: ಪ್ರಕಾಶ್ ಕಾರಟ್‌ರವರ ಗಮನಕ್ಕೆ ತಂದೆ. ಅವರೊಮ್ಮೆ ಗಹಗಹಿಸಿ ನಕ್ಕು 'ದೇವೇಗೌಡರ ಬಗ್ಗೆ ಸೋನಿಯಾಗಾಂಧಿಯವರ ಬಳಿ ನಾನು ಕೊನೆಯ ಬಾರಿ ಮಾತನಾಡಿದ್ದು ಈಗ್ಗೆ ಒಂದು ವರ್ಷಕ್ಕೂ ಮೊದಲು ಕಾಂಗ್ರೆಸ್ ಜೆಡಿ(ಎಸ್) ಸರ್ಕಾರ ಉರುಳುವ ಸಂದರ್ಭದಲ್ಲಿ ಅದನ್ನು ತಡೆಯಬೇಕು ಎಂದು ಒತ್ತಾಯಿಸಿ. ದೇವೇಗೌಡರ ಬಳಿ ನಾನು ಮಾತನಾಡಿದ್ದು ಆಗಲೇ ಇಬ್ಬರೊಡನೆಯೂ ಫೋನಿನಲ್ಲಿ ಮಾತ್ರ. ಮುಖತಃ ಅವರನ್ನು ಭೇಟಿ ಮಾಡಿಸುವ ಕೆಲಸಕ್ಕೆ ಎಂದೂ ಕೈ ಹಾಕಿಲ್ಲ' ಎಂದರು. ಇದು ಈ ಗಾಳಿ ಸುದ್ದಿಗಳ ಹಿಂದಿನ ಕತೆ.



ಮೇ ದಿನ 2007

ಮೇ ದಿನವನ್ನು ಯಾವ ಉದ್ದೇಶದಿಂದ ಮೊದಲು ಆಚರಿಸಲಾಯಿತೋ ಅದನ್ನು ಮರೆತಂತೆ ಕಾಣುತ್ತದೆ. ಮೇ ದಿನಾಚರಣೆ ಕೂಡಾ ಯಾಂತ್ರಿಕ ಆಚರಣೆಯಾಗುವ ಹಾದಿಯಲ್ಲಿದೆ. ಇದನ್ನು ತಪ್ಪಿಸಬೇಕಾದರೆ ಕಾರ್ಮಿಕ ವರ್ಗ ಒಂದು ವಿಭಾಗದ, ಒಂದು ಗುಂಪಿನ ಚಟುವಟಿಕೆಗಳಲ್ಲಿ ತೊಡಗುವ ಬದಲು ಒಂದುಗೂಡಿ, ತಮ್ಮಲ್ಲಿನ ಭೇದಭಾವಗಳನ್ನೆಲ್ಲಾ ಕೊನೆಗೊಳಿಸಿ ಸಾರ್ವತ್ರಿಕ ಬೇಡಿಕೆಗಳಿಗಾಗಿ ಹೋರಾಡಬೇಕು.

ಮರು ಸಮರ್ಪಣೆಗೊಂದು ಕರೆ



ವಿ.ಜೆ.ಕೆ. ನಾಯರ್

ಒಂದು ವ್ಯಕ್ತಿಗೆ ಅಥವಾ ಉದ್ದೇಶಕ್ಕೆ ಒಂದು ದಿನವನ್ನು ಸಮರ್ಪಿಸುವುದು ಹಾಗೂ ಅದನ್ನು ಪ್ರತಿವರ್ಷ ಬಹಳ ಹಳೆಯ ಪದ್ಧತಿ. ಕೆಲವೊಮ್ಮೆ ಇದನ್ನು ಉತ್ಸವದಂತೆಯೂ ಆಚರಿಸಲಾಗುತ್ತದೆ. ಯುರೋಪಿನಲ್ಲಿ ಮೇ ದಿನವನ್ನು ಅನಾದಿ ಕಾಲದಿಂದ ವಸಂತ ಋತುವಿನ ಹಬ್ಬವಾಗಿ ಆಚರಿಸಲಾಗುತ್ತಿದೆ. ಒಂದು 'ಮೇ ಪೋಲ್' ಎಂಬ ಸ್ತಂಭದ ಸುತ್ತ ನೆರೆದು ಜನಗಳು ಹಾಡುತ್ತಾರೆ, ಕುಣಿಯುತ್ತಾರೆ. ತಮ್ಮಲ್ಲಿ ಒಬ್ಬರನ್ನು 'ಮೇ ದಿನದ ರಾಣಿ' ಎಂದು ಆರಿಸುತ್ತಾರೆ, ಇದು ಯುರೋಪಿನಲ್ಲಿ ಯೆಹೂದ್ಯ, ಕ್ರಿಶ್ಚಿಯನ್ ಧರ್ಮಗಳು ಕಾಣಸಿಕೊಳುವ ಮೊದಲಿದ್ದ ಪೇಗಾನ್ ಸಂಸ್ಕೃತಿಯಲ್ಲಿನ ಉತ್ಸವಗಳಲ್ಲಿ ಒಂದು. ಕ್ರೈಸ್ತ ಧರ್ಮ ಉದಯವಾದ ಮೇ - ಮೇ ದಿನದ ಪರಂಪರೆ ತನ್ನ ಆಕರ್ಷಣೆಯನ್ನು ಕಳಕೊಂಡಿತು. ಆದರೂ ಅದರ ಆಚರಣೆ ನಡೆಯುತ್ತಿತ್ತು. ಇಂಗ್ಲೀಷ್ ಸಾಹಿತ್ಯದಲ್ಲಿ ಇದರ ಪ್ರಸ್ತಾಪಗಳನ್ನು ಕಾಣಬಹುದು.

ಅಂತರ್ರಾಷ್ಟ್ರೀಯ ಕಾರ್ಮಿಕರ ದಿನವಾಗಿ ಮೇ ದಿನದ ಆಚರಣೆ 19ನೇ ಶತಮಾನದಲ್ಲಷ್ಟೇ ಯುರೋಪು ಮತ್ತು ಅಮೆರಿಕಾದಲ್ಲಿ ಆರಂಭವಾಯಿತು. 20ನೇ ಶತಮಾನದಾದ್ಯಂತ ಕಾರ್ಮಿಕ ಆಂದೋಲನದ ಬಲ ಹೆಚ್ಚಿದಂತೆಲ್ಲಾ ವಿಶ್ವಾದ್ಯಂತ ಇದನ್ನು ಅನುಸರಿಸಲಾಯಿತು. ಕಾರ್ಮಿಕ ವರ್ಗಕ್ಕೆ ಸಮರ್ಪಿತವಾದ ಒಂದು ದಿನವೆಂಬ ಹೆಚ್ಚೆಚ್ಚು ಜನಗಳು ದೇಶ ಅದನ್ನು ಆಚರಿಸುತ್ತಿದ್ದಾರೆ. ಆದರೆ ಯಾವ ಉದ್ದೇಶದಿಂದ ಅದನ್ನು ಮೊದಲು ಆಚರಿಸಲಾಯಿತೋ ಅದರ ನಿಜ ಗುರಿಯನ್ನು ಪ್ರತಿಯೊಂದೆಡೆ ಕಾರ್ಮಿಕ ವರ್ಗದ ಗುರಿ ಸಾಧನೆಯನ್ನು ಮರೆತಂತೆ ಕಾಣುತ್ತದೆ. ಮೇ ದಿನ ಕೂಡಾ ಒಂದು ಯಾಂತ್ರಿಕ ಆಚರಣೆಯಾಗುವ ಹಾದಿಯಲ್ಲಿದೆ. ಕಾರ್ಮಿಕ ವರ್ಗದ ಆಂದೋಲನಗಳು ಅದರಿಂದ ಮೇ ದಿನವನ್ನು ರಕ್ಷಿಸದಿದ್ದರೆ ಆ ಹಾದಿಯಲ್ಲೇ ಸಾಗಬಹುದು. ಏಕೆ ಮತ್ತು ಹೇಗೆ ನಾವು ಮೇ ದಿನವನ್ನು ಅದರ ಆಶಯಗಳ ಈಡೇರಿಕೆಗಾಗಿ ಉಳಿಸಿಕೊಳ್ಳಬೇಕಾಗಿದೆ ಎಂಬುದನ್ನು ಮುಂದೆ ಸಂಕ್ಷಿಪ್ತವಾಗಿ ಪರಿಶೀಲಿಸೋಣ.

ಕೆಂಬಾವುಟದ ಕಥೆಯಲ್ಲ

ಭಾರತದಲ್ಲಿ ಪ್ರತಿಯೊಂದು ಆಚರಣೆಗೂ ಸಂಬಂಧಪಟ್ಟಂತೆ ಒಂದು ಕಥೆಯಿರುತ್ತದೆ. ನಮ್ಮ ನಡುವೆ ಹರಡಿರುವ ಮೇ ದಿನಗಳ ಕಥೆಯೆಂದರೆ ಕೆಂಬಾವುಟ ಈ ದಿನದಂದು ಚಿಕಾಗೋದ ರಕ್ತಸಿಕ್ತ ಬೀದಿಗಳಲ್ಲಿ ಹುಟ್ಟಿತು ಎಂಬುದು. ಇದು ನಿಜವಲ್ಲ, ಚಿಕಾಗೋ ಬೀದಿಗಳಲ್ಲಿ ಕೈಯಲ್ಲಿ ಕೆಂಬಾವುಟ ಹಿಡಿದ ನೂರಾರು ಪ್ರತಿಭಟನಾಕಾರರ ಕಂಠಗಳಿಂದ ಎಂಟು ಗಂಟೆ ಕೆಲಸದ ಘೋಷಣೆಗಳು ಅಂದು ಮೊಳಗಿದವು. ಆದರೆ ಕೆಂಬಾವುಟ ಅಂದು ಅಲ್ಲಿ ಹುಟ್ಟಿದ್ದಲ್ಲ. 1871 ರಲ್ಲಿ ಪ್ಯಾರಿಸ್ ಕಮ್ಯೂನ್‌ನಲ್ಲಿ ಭಾಗವಹಿಸಿದ್ದವರು ಹಾರಿಸಿದ್ದು ಕೆಂಬಾವುಟವನ್ನೇ. ಮಾರ್ಕ್ಸ್ ಮತ್ತು ಎಂಗೆಲ್ಸ್ ಯಾವ ಕಮ್ಯೂನಿಸ್ಟ್ ಲೀಗ್‌ಗಾಗಿ 1848 ರಲ್ಲಿ ಕಮ್ಯೂನಿಸ್ಟ್ ಪ್ರಣಾಳಿಕೆ ಬರೆದರೋ ಅದರ ಬಾವುಟವೂ ಕೆಂಬಣ್ಣದ್ದು. ಬಣ್ಣಕ್ಕೆ ಸಂಬಂಧಪಟ್ಟಂತೆ ಸಂಕೇತಗಳು ಇವೆ. ಬಿಳಿಯೆಂದರೆ ಶಾಂತಿ / ಶರಣಾಗತಿ, ಕಪ್ಪು ಎಂದರೆ ಶೋಕ, ಹಸಿರು ಎಂದರೆ ಸಮೃದ್ಧಿ ಹಾಗೂ ಕೆಂಪು ಎಂದರೆ ಪ್ರತಿಭಟನೆ. 'ಕ್ರಾಂತಿಕಾರಿ'ಗಳು ಸದಾ ಕೆಂಬಣ್ಣವನ್ನು ಬಳಸಿದಂತೆ, ಅದು 1856 ರಂದು ಮೇ ದಿನದಂದು ಚಿಕಾಗೋದಲ್ಲಿ ಹುಟ್ಟಿದ್ದೇನಲ್ಲ.

ಅಂತಿಮವಾಗಿ ಏಳು ಮುಖಂಡರನ್ನು ನವೆಂಬರ್ 4, 1887 ರಂದು ಗಲ್ಲಿಗೇರಿಸಲಾಯಿತು. ಅವರು ಆಲ್ಬರ್ಟ್ ಪಾರ್ಸನ್ಸ್, ಆಗಸ್ಟ್ ಸ್ಪೈಸ್, ಜಾರ್ಜ್ ಎಂಗೆಲ್ ಮತ್ತು ಅಡಾಲ್ಫ್ ಫಿಶರ್. "ನಮ್ಮ ಮೌನವೇ ನಮ್ಮ ಮಾತುಗಳಿಗಿಂತ ಹೆಚ್ಚು ಧ್ವನಿ ಮಾಡುವ ಸಮಯ ಬರಲಿದೆ" ಎಂಬ ಸ್ಪೈಸ್‌ನ ಮಾತು ಭವಿಷ್ಯವಾಣಿಯೇ ಆಯಿತು. ಮೇ ದಿನ ಅಂತರ್ರಾಷ್ಟ್ರೀಯ ಸ್ವರೂಪ ನಡೆಯಿತು. ಅದರ ದನಿ ಎಲ್ಲೆಲ್ಲೂ ಮೊಳಗಿತು. ಭಾಗಶಃ ಈ ಚಿಕಾಗೋ ಹುತಾತ್ಮರ ಸ್ಮರಣಾರ್ಥ ಪ್ಯಾರಿಸಿನಲ್ಲಿ ಫ್ರೆಂಚ್ ಕ್ರಾಂತಿಯ ಶತಮಾನೋತ್ಸವ ಸಂದರ್ಭದಲ್ಲಿ ಪ್ಯಾರಿಸಿನಲ್ಲಿ 1889 ರಲ್ಲಿ ನಡೆದ ಎರಡನೇ ಅಂತರ್ರಾಷ್ಟ್ರೀಯ ಮೊದಲ ಸಮ್ಮೇಳನದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು.

ಮೇ ದಿನದ ಕಡೆಯ ಉದ್ದೇಶ

ಈ ಕರೆಯನ್ನು ಯಾವ ಉದ್ದೇಶದಿಂದ ನೀಡಲಾಯಿತು ಎಂಬುದನ್ನು ನಿಜವಾಗಿ ನಾವು ಫ್ರೆಡರಿಕ್ ಎಂಗೆಲ್ಸ್‌ರ ಲೇಖನಗಳಲ್ಲಿ ಕಾಣಬಹುದು. ವಿಶ್ವಾದ್ಯಂತ ಕಾರ್ಮಿಕ ವರ್ಗಕ್ಕೆ ಒಂದು ದೇಶವೆಂಬುದಿಲ್ಲ ಎಂಬುದನ್ನು ತೋರಿಸುವುದು ಎಂಟು ಗಂಟೆಯ ದುಡಿಮೆಯ ದಿನದ ಬೇಡಿಕೆಯನ್ನು ಮುಂದುವರೆಸುವುದು ಮುಂತಾದ ಸಾರ್ವತ್ರಿಕ ಬೇಡಿಕೆಗಳನ್ನು ಹಾಗೂ ಸಮಾಜವಾದದ ಬೇಡಿಕೆಯನ್ನು ವಿಶ್ವಾದ್ಯಂತ ಒಂದೇ ದಿನದಂದು ಮುಂದಿಡುವುದು ಇದರ ಉದ್ದೇಶ. ಕಾರ್ಮಿಕ ವರ್ಗ ವಿಶ್ವದೆಲ್ಲೆಡೆ ಒಂದೇ ಸಮಯದಲ್ಲಿ ಒಂದಾಗಿ ಕಾರ್ಯಾಚರಣೆ ನಡೆಸಬೇಕು, ತಾವೆಲ್ಲೇ ಇದ್ದರೂ ತಮ್ಮದೇ ದೇಶಗಳ ಸರ್ಕಾರಗಳೆದುರು ಸಾರ್ವತ್ರಿಕ ಬೇಡಿಕೆಗಳನ್ನು ಇಡಬೇಕು ಎಂಬುದು ಮಾರ್ಕ್ಸ್‌ರ ತಿಳುವಳಿಕೆಯಾಗಿತ್ತು. ದುಡಿಮೆಯ ದಿನಕ್ಕೆ ಕಾನೂನು ಪ್ರಕಾರ ಮಿತಿ ಹಾಕಬೇಕು ಎಂಬ ಬೇಡಿಕೆಯ ಮೇಲೆ ಮೊದಲ ಕಾರ್ಯಾಚರಣೆ ನಡೆಯಬೇಕು ಎಂದು ಅವರು ಸೂಚಿಸಿದ್ದರು. ಎಂಟು ಗಂಟೆಗಳ ದುಡಿಮೆಯ ದಿನದ ಬೇಡಿಕೆ ಜನಿಸಿದ್ದು ಹೀಗೆ. ಅಮೆರಿಕಾ, ಅದರಲ್ಲೂ ಕೈಗಾರೀಕೃತ ಉತ್ತರ ಭಾಗ ಈ ಬೇಡಿಕೆಯನ್ನು ಶ್ರದ್ಧೆಯಿಂದ ಕೈಗೆತ್ತಿಕೊಂಡಿತು.

ಚಿಕಾಗೋ ಇಂತಹ ಕಾರ್ಯಾಚರಣೆಗಳ ಕೇಂದ್ರವಾಯಿತು. ದುಡಿಮೆಯ ದಿನವನ್ನು ವಿಸ್ತರಿಸುವುದನ್ನು ತಡೆಯಲು ದುಡಿಮೆಯ ದಿನದ ಮೇಲೆ ಕಾನೂನಿನ ಪ್ರಕಾರ ಮಿತಿ ಹಾಕಿ ಅಮೂರ್ತ ಶೋಷಣೆಯನ್ನು ಕೊನೆಗೊಳಿಸುವುದು ಇದರ ಇದರ ಉದ್ದೇಶ.

ಎರಡನೇ ಅಂತರ್ರಾಷ್ಟ್ರೀಯ ನೀಡಿದ ಮೇ ದಿನದ ಕರೆಯನ್ನು 1890 ರಲ್ಲಿ ಅಟ್ಲಾಂಟಿಕ್ ಸಾಗರದ ಎರಡೂ ಕಡೆ ಅಂದರೆ ಯುರೋಪ್ ಮತ್ತು ಅಮೆರಿಕಾಗಳಲ್ಲಿ ಆಚರಿಸಲಾಯಿತು. ನಂತರ ಅದು ಮುಂದುವರೆಯಿತು. ಒಂದು ದೇಶದಲ್ಲಿ ಕ್ರಾಂತಿಯ ತನ್ನ ಪರಿಕಲ್ಪನೆಗೆ ಇದನ್ನು ಮೊದಲ ಬಾರಿಗೆ ಅಂಗೀಕರಿಸಿದ್ದು ಲೆನಿನ್‌ರವರು. ಇದು ಒಂದೇ ಬಾರಿ ಮಾತ್ರ. 19ನೇ ಶತಮಾನದ ಅಂತ್ಯದ ವೇಳೆಗೆ ಲೆನಿನ್‌ರ ಕ್ರಾಂತಿಕಾರಿ ಚಟುವಟಿಕೆಗಳು ರೊಸೋಕ್ ನಗರದಲ್ಲಿ ಮೇ ದಿನದ ಆಚರಣೆಯೊಂದಿಗೆ ಆರಂಭವಾದವು. ಲೆನಿನ್ ಎಲ್ಲಾ ಕಾರ್ಮಿಕರನ್ನು ಒಟ್ಟು ಸೇರಿಸಿ ಅವರ ಸರ್ವಸಾಮಾನ್ಯ ಬೇಡಿಕೆಗಳನ್ನು ಪಟ್ಟಿ ಮಾಡಿದರು, ಈ ಬೇಡಿಕೆಗಳ ಮೇಲೆ ಮೇ ದಿನದಂದು ಒಂದು ಮುಷ್ಕರ ನಡೆಯುವಂತೆ ಮಾಡಿದರು. ಮಾಲಕರು ವಜಾ ಮತ್ತು ದಮನಗಳ ಮೂಲಕ ಪ್ರತ್ಯುತ್ತರ ನೀಡಿದರು. ಲೆನಿನ್ ಇತರ ಕಾರ್ಮಿಕರ ಸೌಹಾರ್ದವನ್ನು ಸಂಘಟಿಸಿದರು. ಮುಷ್ಕರ ಹರಡಿತು, ಪ್ರಾಥಮಿಕ ಹಕ್ಕುಗಳಿಗಾಗಿ ಒಂದುಗೂಡಿದ ಕಾರ್ಮಿಕರನ್ನು ರಾಜಕೀಯ ಹೋರಾಟಕ್ಕೆ ತರಬೇತುಗೊಳಿಸಲಾಯಿತು. ಮೇ ದಿನದಗಳು ಕಳೆದಂತೆ ಅವರ ಪ್ರಜ್ಞೆ ಮತ್ತು ಸಂಘಟನೆಗಳೂ ವಿಸ್ತರಿಸುತ್ತಾ ಹೋದವು. ಸೈಂಟ್ ಪೀಟರ್ಸ್‌ಬರ್ಗ್‌ನಲ್ಲಿ 'ಕಾರ್ಮಿಕ ವರ್ಗದ ಉದ್ಧಾರದ ಲೀಗ್' ಲೆನಿನ್ ಸ್ಥಾಪಿಸಿದರು. ಇದೇ ರೀತಿ ರಶ್ಯಾದ ಉಳಿದೆರೆಡುಗಳಲ್ಲೂ ಕಾರ್ಮಿಕ ವರ್ಗದ ರಾಜಕೀಯ ಸಂಘಟನೆ ನಡೆದು ಅಂತಿಮವಾಗಿ ಮಹಾನ್ ಅಕ್ಟೋಬರ್ ಕ್ರಾಂತಿಗೆ ಹಾದಿ ಮಾಡಿಕೊಟ್ಟಿತು.

ವಿಶ್ವಾದ್ಯಂತ ಆಚರಣೆ

ಅಕ್ಟೋಬರ್ ಕ್ರಾಂತಿಯ ನಂತರ 1918 ರಲ್ಲಿ ಮಾಸ್ಕೋದಲ್ಲಿ ಮೊದಲ ಮೇ ದಿನವನ್ನು ಆಚರಿಸಲಾಯಿತು. ನಂತರ ಪ್ರತಿವರ್ಷ ಅದನ್ನು ಆಚರಿಸಲಾಗುತ್ತಿತ್ತು. ಈ ದಿನಾಚರಣೆಗಳಲ್ಲಿ ಸಮಾಜವಾದಿ ಸರ್ಕಾರಗಳು ತಮ್ಮ ಸಾಧನೆಗಳ ಪ್ರದರ್ಶನ ನಡೆಸುತ್ತಿದ್ದವು. ಈ ಸ್ವರೂಪದಲ್ಲಿ ಇಂದೂ ಕೂಡಾ, ಚೀನಾ ಜನತಾ ಗಣತಂತ್ರ, ವಿಯೆಟ್ನಾಂ, ಉತ್ತರ ಕೊರಿಯಾ ಮತ್ತು ಕ್ಯೂಬಾದಲ್ಲಿ ಮೇ ದಿನಾಚರಣೆ ನಡೆಯುತ್ತಿದೆ. ವಿಶ್ವಾದ್ಯಂತ ಇತರ ಎಡಪಂಥೀಯ ಆಚರಣೆಗಳೂ ಪ್ರತಿವರ್ಷ ಮೇ ದಿನಾಚರಣೆ ನಡೆಸುತ್ತಿವೆ.

ಭಾರತದಲ್ಲಿ.....

ವಿಶ್ವಾದ್ಯಂತ ಮೇ ದಿನಾಚರಣೆ ನಡೆಯುತ್ತದೆ. ಅಮೆರಿಕಾದಲ್ಲಿ ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಮೊದಲ ಸೋಮವಾರ 'ಲೇಬರ್ ಡೇ' (ಶ್ರಮದಿನ) ಎಂದು ಆಚರಿಸಲಾಗುತ್ತದೆ. ಆದರೂ ಅಲ್ಲಿಯೂ ಈಗಲೂ ಮೇ ದಿನಾಚರಣೆ ನಡೆಯುತ್ತಿದೆ. ಯುರೋಪ್ತ, ಏಶ್ಯಾ, ಆಸ್ಟ್ರೇಲಿಯಾದಲ್ಲೂ ಪ್ರತಿವರ್ಷ ಮೇ ದಿನಾಚರಣೆ ನಡೆಯುತ್ತಿದೆ. ಭಾರತದಲ್ಲಿ 1923 ರಲ್ಲಿ ಮದ್ರಾಸಿನ ಮರಿನಾ ಬೀಚ್‌ನಲ್ಲಿ ಎಐಟಿಯುಸಿ ಮುಖಂಡ ಚಕ್ಕರಾಮ್ ಚೆಟ್ಟಿಯಾರ್ ಮೇ ದಿನ ಸಂಘಟಿಸಿದರು. ಈಗ ಅದು ದೇಶದೆಲ್ಲೆಡೆ ಪಸರಿಸಿದೆ. ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರ ಆಳ್ವಿಕೆಯಲ್ಲಿ ಅದನ್ನು ರಜಾ ದಿನವಾಗಿ ಮಾಡಲಾಯಿತು. ಹೀಗೆ ಆ ದಿನ ಒಂದು ಅಂತರ್ರಾಷ್ಟ್ರೀಯ ದುಡಿಯುವ ಜನಗಳ ದಿನವಾಗಿ ವಿಶ್ವಾದ್ಯಂತ ಆಚರಿಸಲ್ಪಡುತ್ತಿದೆ.

ಮೇ ದಿನ 1945 ಫ್ಯಾಸಿಸ್ಟ್ ಆಳ್ವಿಕೆಯ ಅಂತ್ಯವನ್ನು ಕಂಡು ವಿಶೇಷ ಮಹತ್ವ ಗಳಿಸಿತು. ಅದು ಜೆವಿ ಸ್ಟಾಲಿನ್‌ರ ನೇತೃತ್ವದಲ್ಲಿ ಕೆಲವು ಸೇನಾ ನಾಜಿಗಳ ಮೇಲೆ ವಿಜಯ ಸಾಧಿಸಿ, ಬರ್ಲಿನ್‌ನ ರೈಖ್‌ಸ್ಟಾಗ್ ಮೇಲೆ ಕೆಂಬಾವುಟ ಹಾರಿಸಿತು. ಹೀಗೆ ಮೇ ದಿನ 1945 ರ ನಂತರ ಫ್ಯಾಸಿಸಂ - ವಿರೋಧಿ ದಿನ ಸ್ವರೂಪವನ್ನೂ ಪಡೆಯಿತು.

ನಂತರ ಮೇ ದಿನ 1975 ರಂದು ವಿಯೆಟ್ನಾಂ ಸಂಪೂರ್ಣ ವಿಮೋಚನೆಗೊಂಡಿತು. ಅಮೆರಿಕಾ ಸಂಯುಕ್ತ ಸಂಸ್ಥಾನಗಳ, ವಿಶ್ವದ ಅತ್ಯಂತ ದೊಡ್ಡ ಯುದ್ಧಯಂತ್ರದ ವಿರುದ್ಧ ಮೂರು ದಶಕಗಳ ಯುದ್ಧದ ನಂತರ ವಿಯೆಟ್ನಾಮೀ ಜನತೆ ಅಂದು ಸಂಪೂರ್ಣವಾಗಿ ಸೋಲಿಸಿತು.


ಮರು ಸಮರ್ಪಣೆಯ ಅಗತ್ಯ

2007ನೇ ನಾವು ಭಾರತೀಯರಿಗೆ ಬಹಳ ಮಹತ್ವದ ವರ್ಷ. ಅರವತ್ತು ವರ್ಷಗಳ ಹಿಂದೆ 1947 ರಲ್ಲಿ ನಾವು ಬ್ರಿಟಿಷರಿಂದ 'ಸ್ವಾತಂತ್ರ್ಯ' ಪಡೆದೆವು. 1857 ರಲ್ಲಿ ಪ್ರಥಮ ಸ್ವಾತಂತ್ರ್ಯಯುದ್ಧದ ನಂತರ ಭಾರತ ಬ್ರಿಟಿಶ್ ಸಾಮ್ರಾಜ್ಯಕ್ಕೆ ಒಳಪಟ್ಟಿತು. 90 ವರ್ಷಗಳ ನಂತರ ಭಾರತ ಸ್ವತಂತ್ರವಾಯಿತು. ಬೆಂಗಳೂರಿನಲ್ಲಿ ಕೈಯಲ್ಲಿ ಭೂಗೋಳ ಹಿಡಿದ ವಿಕ್ಟೋರಿಯಾ ರಾಣಿಯ ಪ್ರತಿಮೆಯನ್ನು ಈಗಲೂ ಕಬ್ಬನ್ ಪಾರ್ಕಿನಲ್ಲಿ ಕಾಣುತ್ತೇವೆ. ಅದರ ಎದುರಿನಲ್ಲೇ ಮಹಾತ್ಮಗಾಂಧಿ ಎಂದು ಜನಪ್ರಿಯರಾಗಿರುವ ಮೋಹನ ದಾಸ್ ಕರಮಚಂದ್ ಗಾಂಧಿ ಎಂಬ ಹೆಸರಿನಲ ಅರೆನಗ್ನ ಫಕೀರನ ಕೈಯಲ್ಲಿ ಊರುಗೋಲು ಹಿಡಿದ ಪ್ರತಿಮೆಯೂ ಇದೆ. ನಮ್ಮ ಜನಗಳಲ್ಲಿ ಅತ್ಯಂತ ಸಮೃದ್ಧರು, ಸಿರಿವಂತರು ತಮ್ಮನ್ನು ಭಾರತೀಯರು ಎಂದು ಕರೆಸಿಕೊಂಡರೂ ಯುರೋಪಿಯನ್ನರು ಇಲ್ಲಿ ಸ್ಥಾಪಿಸಿದ ಮೌಲ್ಯಗಳನ್ನೆಲ್ಲಾ ಆಚರಿಸುವವರು ಭಾರತವನ್ನು ಬ್ರಿಟಿಶ್ ಸಾಮ್ರಾಜ್ಯಕ್ಕೆ ಒಳಪಡಿಸಿದ ವಿಕ್ಟೋರಿಯಾ ಮಹಾರಾಣಿ ಜತೆಗೆ ನಿಲ್ಲುತ್ತಾರೆ, ಆದರೆ ಬಹಿರಂಗವಾಗಿ ಮಾತ್ರ ಆ ಪ್ರತಿಮೆಯನ್ನು ಇನ್ನೊಂದು ಕಡೆ ಅಂದರೆ ಮಹಾತ್ಮ ಗಾಂಧಿ ಕಡೆ ಇದ್ದೇವೆ ಎನ್ನುತ್ತಾರೆ. ಆ ಮಹಾತ್ಮ ತನ್ನ ಜೀವನದಲ್ಲಿ ಯಾವ ಮೌಲ್ಯಗಳನ್ನು ಪ್ರತಿನಿಧಿಸಿದರು ಎಂಬುದೂ ಅವರಿಗೆ ಗೊತ್ತಿಲ್ಲ. ಅವರು ಈ ರೀತಿಯ ಕೈಗಾರಿಕೀಕರಣಕ್ಕೆ, ಸಿರಿವಂತಿಕೆಯ ಪ್ರದರ್ಶನಕ್ಕೆ, ಕೆಲವರ ಕೈಯಲ್ಲೇ ಸಂಪತ್ತಿಗೆ ವಿರುದ್ಧವಾಗಿದ್ದರು, ಎಲ್ಲಕ್ಕೂ ಮಿಗಿಲಾಗಿ ಕೋಮು ವಿಭಜನೆಗೆ ಮತ್ತು ದಮನಿತ ವರ್ಗಗಳ ದಮನಕ್ಕೆ ವಿರುದ್ಧವಾಗಿದ್ದರು

ಪುಟ 12 ನೋಡಿ

'ಹೆ ಮಾರ್ಕೆಟ್ ಹುತಾತ್ಮರು'

ರಿಯೋ ಡಿ ಜಾನೆರೋದ ಪತ್ರಿಕೆ 'ಒ ಕೊಸ್ಮೋಪೊಲಿಟಾ' ಪತ್ರಿಕೆ ಮೇ 1, 1918 ರಂದು ಪ್ರಕಟಿಸಿದ ಒಂದು ಪೈಂಟಿಂಗ್



ಜನಶಕ್ತಿ ಕನ್ನಡ ವಾರಪತ್ರಿಕೆ ಮೇ 01, 2007

ಅರಿವಿನ ದೀಪ ಹೊತ್ತಿದರೆ...?

ಜನಸಾಗರವೆಂಬ ಪಣತೆಯಲ್ಲಿ ಅರಿವಿನ ದೀಪ ಹೊತ್ತಿಸದೆ ಚಳುವಳಿಯ ಬೆಳಕು ಹಬ್ಬುವುದು ಹೇಗೆ?

ರಾತ್ರಿ ಹತ್ತುವರೆ ಸರಿದು ಹೋಗಿದೆ. ನಾನಿರುವ ಟ್ರೈನಿನ ಬೋಗಿಯ ಜನ ಒಬ್ಬೊಬ್ಬರಾಗಿ ನಿದ್ದೆಯ ಅಂಚಿಗೆ ಬರುತ್ತಿದ್ದಾರೆ. ಭೈರಪ್ಪ ತನ್ನೆದೆಯ ವಿಷ ಕಕ್ಕಿದ ಕೋಮುವಾದಿ ಕಾದಂಬರಿಯ ಕಡೆಯ ಪುಟ ಮುಗಿಸಿ ಮಗ್ಗಲು ಹೊರಳಿದೆ. ಕಪ್ಪು ಆಕಾಶದಂಗಳದಲ್ಲಿ ಮಿಣುಕಿ ಮಿಂಚಿನ ನಕ್ಷತ್ರಗಳು. ಆರೆಸ್ಸೆಸ್ ಪುಣೀತ ವಿಚಾರಧಾರೆಗಳನ್ನು ಹರಡಲು ಪಾತ್ರಗಳನ್ನು ಸೃಷ್ಟಿಸಿ ಬರೆದ 'ಆವರಣ' ಭೈರಪ್ಪನ ಮಲೀನ ಮನಸಿನ ಪ್ರತೀಕವೆಂಬುದು ಮೊದಲ ಅಧ್ಯಾಯದಲ್ಲಿಯೇ ಅನಾವರಣಗೊಂಡಿದೆ. ಮುಸ್ಲಿಂ, ಕ್ರಿಶ್ಚನ್, ದಲಿತ, ಲಿಂಗಾಯತ ಹೀಗೆ ಎಲ್ಲ ಜಾತಿ ಧರ್ಮದ ದುಡಿವ ಜನ ಸೇರಿ ಉದ್ಯೋಗ ಖಾತ್ರಿ ಕಾಯ್ದೆ ಅರಿವು ಜಾಗೃತಿ ಕಾರ್ಯಕ್ರಮ ಥಟ್ಟನೆ ನೆನಪಿಗೆ ಬಂದು ಅಲ್ಲಿಯವರೆಗೆ ಖಿನ್ನವಾದ ಮನಸ್ಸು ತಿಳಿಯಾಗಿ ಹರಿದಾಡುವ ತಣ್ಣನೆಯ ಗಾಳಿಯಲಿ ಬೆರೆತು ಪಯಣ ಹೊರಟಿತು.

ಇನ್ನೂ ಎಲ್ಲಿದ್ದೀರಿ...?

ಹೌದು, ಏಪ್ರಿಲ್ 21, 22 ರಂದು ಬೀದರ್ ಜಿಲ್ಲೆಯ ಕಾಡವಾದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆಯ್ದ ಇನ್ನೂರು ಜನ ಮಹಿಳೆಯರಿಗೆ ಉದ್ಯೋಗ ಖಾತ್ರಿ ಕಾಯ್ದೆ ಅರಿವು ಕಾರ್ಯಾಗಾರ ನಡೆಸಲಾಯಿತು. ನಾವು ಗುಲಬರ್ಗಾದಿಂದ ಹತ್ತಿದ ಬಸ್ಸು 'ವೇಗ ನಿಯಂತ್ರಣ' ದ ಬರಹ ಹೊತ್ತು ಕುಂಟುತ್ತ ಸಾಗುವಾಗಲೇ ಪ್ರತಿ ಹತ್ತು ನಿಮಿಷಕ್ಕೊಮ್ಮೆ ಸಂಗಾತಿಯ ಫೋನು 'ಇನ್ನೂ ಎಲ್ಲಿದ್ದೀರಿ...?' ಎಂದು ಬೆದರಿಸುತ್ತಲೇ ಬರುತ್ತಿತ್ತು. ನಾನು ಫೋನು ಕಿವಿಗಿಟ್ಟು. ಕಣ್ಣುದಿಟ್ಟಿ ಹೊರ ಚೆಲ್ಲಿ' ಯಾವ ಊರು ಅಂತ ಪತ್ತೆ ಹಚ್ಚಿ ಹೇಳುತ್ತಿದ್ದೆ. ಅಂತೂ ವರ್ಲ್ಡ್ ಬ್ಯಾಂಕಿನ ಸಾಲದಿಂದ ನುಣುಪಾದ ರಾಜ್ಯ ಹೆದ್ದಾರಿಯ ಮೇಲಿಂದ ತೆರಳಿದ ನಮ್ಮ ಬಸ್ಸು ಮನ್ನಾ ಎಚ್ಚೆಳ್ಳಿ ತಲುಪಿತು. ಒಂದು ನಿಟ್ಟುಸಿರೇನೋ ಬಿಟ್ಟಿದ್ದಾಯ್ತು. ಆದರೆ 42^0 ಉರಿಬಿಸಿಲು ಎಡಬಿಡದೆ ರಾಚ ತೊಡಗಿತು. ಬಂಗಾರ ಬಣ್ಣದ ಬಿಸಿಲು ಚೂಪಾದ ಅಲಗು ಝಳಪಿಸುತಿತ್ತು. ಬಿಸಿಲ ತಾಂಡವ ಭೇದಿಸುತ್ತಲೇ ಬಿರ ಬಿರನೇ ಹೊರಟು ಕಾರ್ಯಕ್ರಮದಂಗಳ ತಲುಪಿದೆವು.

ವೇದಿಕೆಯ ಮೇಲೆ ಗ್ರಾಮ ಪಂಚಾಯತ್ ಕಾರ್ಯದರ್ಶಿ, ಅಧ್ಯಕ್ಷೆ, ಸದಸ್ಯರು, ಕಿರಿಯ ಅಭಿಯಂತರರು, ಜನವಾದಿಯ ಮುಖಂಡರು ಆಸೀನರಾಗಿದ್ದರು. ಜನವಾದಿ ಗೆಳತಿಯರ ಗುಂಪೊಂದು ಹೇಳುವ ಹಾಡಿಗೆ ಮೈಯೆಲ್ಲ ಕಿವಿಯಾಗಿ ಕುಳಿತ ಜನ ಸಮೂಹ. ಅಷ್ಟು ದೂರದಿಂದಲೇ ಕಿವಿಗಪ್ಪಳಿಸಿದ ಹಾಡು ಎದೆಗಿಳಿದು ಉಲ್ಲಾಸದ ತರಂಗವೆಬ್ಬಿಸಿತು.

ತೂರಬೇಡಿ ಗಾಳಿಗೆ
ಉದ್ಯೋಗ ಖಾತ್ರಿ ಕಾಯ್ದೆಯ
ಕೆಲಸ ಕೊಡುವ ಕಾಯ್ದೆ ಇದು
ಕಡಿಮೆ ಯಾರಿಗೆ ...?
ನಾಚಬೇಡಿ ಕೆಲಸಕ್ಕೆ
ತಲೆಯೆತ್ತಿ ನಡೆಯಿರಿ
ನಾಚಬೇಕು ತುಳಿದವರು
ಕೂಲಿಕೊಡದೆ ಹೋದವರು ॥ ತೂರಬೇಡಿ॥

ಮೂಲದಲ್ಲಿ ವಿಜಯಾ ದಬ್ಬೆಯವರದಾಗಿದ್ದರೂ ಕಾಯಕ ಜೀವಿಗಳ ಕೈಗೆ ಸಿಕ್ಕು ಹೊಸ ಶಬ್ದಗಳಿಂದ ಹೊಸ ಹುರುಪಿನಿಂದ ಹೊಸ ರಾಗವಾಗಿ ಹೊಮ್ಮಿದೆ.


ವೇದಿಕೆಯ ಮಗ್ಗುಲಲ್ಲಿ ಅಕ್ಕಮ್ಮ ತಲೆತುಂಬ ಸೆರಗ್ಹೊದ್ದು ಕುಂತವಳು ಪಟ್ಟಂತ ಎದ್ದು, 'ನಮಸ್ಕಾರ್ರಿ ಮೇಡಮ್ನೋರೆ' ಅಂದು ನನ್ನ ಕೈ ಹಿಡಿದುಕೊಂಡು ಪಕ್ಕ ಕುರ್ಚಿಯ ಮೇಲೆ ಕೂಡಿಸಿದಳು.

ಹೌದು. ಅದೇ ಅಕ್ಕಮ್ಮ ಎರಡು ತಿಂಗಳ ಹಿಂದೆ ಪಂಚಾಯ್ತಿ ಸಭೆ ನಡೆದಾಗ ಘೇರಾವ್ ಸಂದರ್ಭದಲ್ಲಿ ಥರಥರ ನಡುಗುತ್ತ ಬಂದಿದ್ದ ಇದೇ ಅಕ್ಕಮ್ಮ ಆದರೀಗ ಅವಳು ಬದಲಾದ ಪರಿಗೆ ಬೆರಗಾಗುವ ಪಾಳಿ ನನ್ನದಾಗಿತ್ತು.

ಉದ್ಯೋಗದ ಒತ್ತಾಯ

ಪ್ರತಿ ಮನೆಗೆ ನೂರು ದಿವಸಗಳ ಉದ್ಯೋಗ ಒದಗಿಸುವ ಈ ಕಾಯ್ದೆ ತರುವಲ್ಲಿ ಎಡಪಕ್ಷಗಳು ಅದರಲ್ಲಿಯೂ ಸಿಪಿಐ(ಎಂ) ಪಕ್ಷವು ಹೈರಾಣಾದಷ್ಟೇ, ಕಠಿಣವಾಗಿದೆ. ಇದನ್ನು ಕೆಳಹಂತದಿಂದ ಜಾರಿ ಮಾಡುವುದು ಅಮೇರಿಕನ್ ಸಾಮ್ರಾಜ್ಯಶಾಹಿಯು ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ನಿರುದ್ಯೋಗ ಸೃಷ್ಟಿ ಮಾಡುವ ಸಂಚು ಹೂಡಿದರೆ, ದುಡಿವ ಜನತೆಯ ಪ್ರತಿನಿಧಿಯಾದ ಸಿಪಿಐ(ಎಂ) ಪಕ್ಷವು ಉದ್ಯೋಗ ಖಾತ್ರಿ ಕಾಯ್ದೆ ಜಾರಿ ಮಾಡಿಸುವ ಮೂಲಕ ಸಾಮ್ರಾಜ್ಯಶಾಹಿಯ ಕುತಂತ್ರವನ್ನು ಒಂದಿಷ್ಟಾದರೂ ಹಿಮ್ಮೆಟ್ಟಿಸಿದೆ. ಕಾಯ್ದೆ ಜಾರಿ ಮಾಡಿಸಲು ಹಳ್ಳಿಯ ಜನರನ್ನು ಸಂಘಟಿಸಬೇಕು. ಜಾಬ್ ಕಾರ್ಡ್ ದೊರಕಿಸಬೇಕು. ಬ್ಯಾಂಕಿನಲ್ಲಿ ಖಾತೆ ತೆರೆಯಬೇಕು. ಅನಂತರ ಇಂಥ ತಾರೀಖಿನಿಂದ ಉದ್ಯೋಗ ಕೊಡಿ ಎಂದು ಫಾರಂ 3 ಅರ್ಜಿ ಕೊಟ್ಟು ಇನ್ನೊಂದು ಪ್ರತಿಯ ಮೇಲೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯ ಸಹಿ ಪಡೆಯಬೇಕು. ಕೆಲಸ ಮಾಡಲು ಸಿದ್ದವಿದ್ದಾಗಲೂ ಪಂಚಾಯ್ತಿಯು ಹದಿನೈದು ದಿವಸದೊಳಗಾಗಿ ಕೆಲಸ ಒದಗಿಸದೆ ಹೋದಲ್ಲಿ ಶೇ.25ರಷ್ಟು (ಕಾಲು ಭಾಗ) ಕೂಲಿಯನ್ನು ನಿರುದ್ಯೋಗಿಗೆ ಭತ್ಯೆ ರೂಪದಲ್ಲಿ ಕೊಡಬೇಕೆಂದು ಕಾನೂನು ಹೇಳುತ್ತದೆ. ಆದರೆ ಕೆಲಸ ಕೇಳಿ ಗ್ರಾಮಪಂಚಾಯ್ತಿಗೆ ಹೋದ ಕೂಲಿಕಾರರನ್ನು ಸುಳ್ಳು ನೆವ ಹೇಳಿ ವಾಪಸ್ಸು ಕಳಿಸಿದ್ದಕ್ಕೆ ಲೆಕ್ಕವಿರಲಿಲ್ಲ.

ಮನ್ಯಾಗ ಚಾರಾಣೆ ಇಲ್ಲ



ಕೆ. ನೀಲಾ

ಇದೆಂಥ ದೇಶ. ಕೆಲಸ ಕೊಡಲೇಬೇಕೆಂಬ ಕಾಯ್ದೆ ಬಂದರೂ ಅದಕ್ಕಾಗಿ ಹಣ ಇದ್ದರೂ ಕೆಲಸ ತಪ್ಪಿಸುವುದೆಂದರೇನು? ಆವತ್ತು ನಮಗೆ ಸತ್ಯವಾಗಲೂ ಸಿಟ್ಟು ಬಂದು ಗ್ರಾಮದ ಜನಕ್ಕೆಲ್ಲ ಒಂದೆಡೆ ಕರೆದೆವು. ಆಚಾನಕ್ಕಾಗಿ ಅವತ್ತೇ ಗ್ರಾಮ ಪಂಚಾಯಿತಿ ಸಭೆ ನಿಗದಿಯಾಗಿತ್ತು. ಯಾರೆಲ್ಲ ಬಂದರೂ ಸಭೆಗೆ ಗೊತ್ತೇನು, 'ಕಡಿಮನಿ ಕಲ್ಲಯ್ಯಕ್ಕ ಒಲಿಮ್ಯಾಲ ಕುದಿಲಾಕ ಇಟ್ಟು ಬ್ಯಾಳಿ ಹೊತ್ತಿ ಕರಕಾಗಿದ್ದಕ್ಕ ಹಸದ ಹೊಟ್ಯಾಗ ಮತ್ತೀಟು ಬೆಂಕಿ ಬಿದ್ದಂಗಾಗಿ, ಪಾಕೀಟ್ ಪರಮಾತ್ಮಗ ಬಲಿಯಾದ ಗಂಡ ರೋಡಿಗೆ ನಿಂತು 'ನಿನ್ನವ್ನ ಉಣ್ಣಾಕ ಕುಡು', ಅಂತ ಗಲಗಲ ಬಾಯಿ ಮಾಡಿದ್ದಕ್ಕ ರೋಸಿ ಹೋಗಿ ಒಲ್ಯಾನ ಕಟಿಗೆ ಹೊರಗೆಳೆದು ಒಂದ್ ಚಿರಗಿ ನೀರ ಬರಕಿ ಲಿಗಿ ಲಿಗಿ ಉರ್‍ಯಾ ಉರಿಗೆ ಥಣ್ಣಾಗ ಮಾಡಿ, 'ನಿನ್ ಬಾಯ್ಯಾಗ ಕಲ್ಲ ಹಾಕಿ ವಿಷ ತಗೋಲಾಕನೂ ಮನ್ಯಾಗ ಚಾರಾಣೆ ಇಲ್ಲ. ಕುಡದ ಬ್ಯಾರೆ ಬಂದಿದಿ. ದುಡ್ಯಾದಿಲ್ಲ ದುಕ್ಕ ಪಡಾದಿಲ್ಲ...' ಅಂತ ಬೈದು ಬರಾಬರಾ ಬಂದು ನಮ್ಮ ಸಭೆಯೊಳಗೆ ಶಾಮೀಲಾದಳು.

ಊರೊಳಗಿನ ಹೊಲದ ಮಾಲಿಕ ಕರೆದರೂ ಹೋಗದ ರಾಜೆಯಾಬೀ 'ಮುಂಜಾನಿಲಿಂದ ಸಂಜೀತನಕ ದುಡದ್ರು ಹತ್ತ ರೂಪಾಯಿ ಕುಡಲಾಕ ಅಳ್ತಿ... ಸರಕಾರದಾಗ ಕೆಲ್ಸಿಲ್ಲಂದ್ರ ನಿನ್ ಹೊಲಕ 'ಬರ್ತೀನಿ' ಅಂದು ಛಾಲೆಂಜ್ ಮಾಡಿ ಬಂದು ಜನವಾದಿ ಬಾವುಟ ಎತ್ತಿ ಹಿಡಿದು 'ನಡ್ರೀ ಕೇಳಾಣಾ, ಕೆಲ್ಸ ಕುಡಾಲ ಅಂಬಾಂವ್ ಯಾರು? ನಾವೇನ ಓಟ್ ಕೊಟ್ಟಿಲ್ಲ...? ಕೇಳಿದಳು.

'ಈಗೆಲ್ಲ ಹೆಂಗ್ಸೂರ್ದು ಕಾಲಾ ಬಂದದ. ನೀವ್ ಪೈಲಾ ಕೆಲ್ಸ ತಗೋರಿ.. ಆಮ್ಯಾಲ ನಾವನೂ ಗಣಸ ಮಕ್ಕಳು ಬರ್ತೀವಿ' ಅಂತ ಗುರಪ್ಪಣ್ಣಾ ತನ್ನ ಹೆಂಡತಿಯನ್ನು ನಮ ಜೋಡಿ ಕಳಿಸಿದ.

ಸಿಕ್ಕ ಸಂದರ್ಭ ಬಿಡಬಾರದು

ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಕೊಡವ್ರು, ಯೋಜನೆ ಮಾಡವ್ರು. ಅರ್ಜಿ ತಗೊಳ್ಳವ್ರು ಎಲ್ಲರೂ ಹೀಗೆ ಏಕಕಾಲಕ್ಕೆ ಸಿಕ್ಕ ಸುಸಂದರ್ಭ ಜಾರಿ ಹೋಗಲು ಬೀಡಬಾರದೆಂಬ ಛಲ ಹೊತ್ತ ನಮ್ಮ ಮೆರವಣಿಗೆ ಕಲ್ಲು ಮಣ್ಣು, ಒಡ್ಡು, ತಗ್ಗು, ಕಂಚಿ ಕಣಿವೆಯ ದಾರಿ ಸೀಳುತ ಗ್ರಾಮ ಪಂಚಾಯ್ತಿ ಕಡೆಗೆ ನುಗ್ಗಿಯೇ ಬಿಟ್ಟಿತು. 'ಏನವ್ವಾ ತಂಗೇ, ನೀವೆಲ್ಲ ಸರಕಾರಿ ಕೂಲಿಗೆ ಹೊಂಟ್ರ. ನಮ್ಮ ಹೊಲಕ್ಕ ಯಾರ್ ಬರಬೇಕು?' ಅಂತ ಮೀಸಿ ತುದಿ ಹುರಿ ಮಾಡುತ ಕೇಳಿದ ಬಂಡೆಪ್ಪ ಸಾಮುಕಾರರ ಪ್ರಶ್ನೆಗೆ ಹೆಣಮಕ್ಕಳು ಗಾಬರಿಯಾಗಲಿಲ್ಲ. 'ಯಾಕ ಅಂಜ್ತೋ ಸಾವಕಾರಾ, ನೀನೂ ಜರಾ ಕೂಲಿ ಹೆಚ್ಚು ಮಾಡು. ಸರಕಾರಿ ಕೆಲ್ಸ ಬ್ಯಾಸಿಗಿದಾಗ ಇರ್ತದ, ಅಟೇ' ರೋಜಮ್ಮ ಉತ್ತರಿಸಿದ ರೀತಿಗೆನೇ ಬಂಡೆಪ್ಪ ಸಾವಕಾರರು ಧೋತರ ಚುಂಗು ಗಟ್ಟಿ ಹಿಡಕೊಂಡು ಜಾಗಾ ಖಾಲಿ ಮಾಡಿದರು. ಅಂತೂ ಇವ್ರಿಗೆ ಒಂದಿಷ್ಟು ಕಾನೂನು ಕಾಯ್ದೆ ತಲಿಗಿ ಹತ್ತಿದೆ ಅನ್ನಿಸಿತು.

ಇದ್ದಕ್ಕಿದಂತೆ ಗ್ರಾಮ ಪಂಚಾಯ್ತಿಯ ಹೊರಗಿನ ಬಯಲು ಭರ್ತಿಯಾಗಿ 'ದುಡಿವ ಕೈಗೆ ಕೆಲಸ ಕೊಡಿ' ಎಂಬ ಘೋಷಣೆ ಮೊಳಗಿದ್ದಕ್ಕೆ ಒಳಗೆ ಸಭೆ ನಡೆಸುವವರು ವಿಚಲಿತರಾದರೇನೋ. ಕಾರ್ಯದರ್ಶಿ ಹೊರಬಂದು ಸಮಜಾಯಿಸಿ ಕೊಡಲು ಮುಂದಾದರು. ನಮ್ಮ ಮಹಿಳಾ ಮುಖಂಡರು,' ಮೊದಲು ನಮಗ ಎಂದಿನಿಂದ ಕೆಲಸ ಕೊಡತಿರಿ ಅಂಬಾದು ತೀರ್ಮಾನ ಮಾಡ್ರಿ ನಡ್ರಿ.... ನಾವನೂ ಅಧ್ಯಕ್ಷರಿಗೆ ಮೆಂಬರ್‌ಗಳಿಗೆ ಹೇಳ್ತಿವಿ' ಅಂದಿದ್ದೇ ಒಂದಿಬ್ಬರು ಸಭೆಯೊಳಗೆ ಬಿರುಗಾಳಿಯಂತೆ ನುಗ್ಗಿಯೇ ಬಿಟ್ಟರು.

ನಿನ್ನ ಹೆಣ್ತಿ ಗೆದ್ದಾಳ್, ನೀ ಮೀಟಿಂಗಿಗೆ ಬಂದಿ...?

ಸಭೆಯಲ್ಲಿ ಎಲ್ಲರೂ ಗಂಡಸರೇ, ಅವರಲ್ಲಿ ಒಬ್ಬ ಎದ್ದು ನಿಂತು 'ಏಯ್ ನೀವ್ಯಾರು? ನಿಮಗೆ ಇಲ್ಲಿ ಬರಲಾಕ ಪರವಾನಿಗಿ ಯಾರು ಕೊಟ್ರು? ಅಂತ ತೊಳೇರಿಸಿ ಗುರಾಯಿಸಿದನು. ಏ ಎಣ್ಣಾ, ನಮ್ಮ ಪರವಾನಿಗಿ ಆಮ್ಯಾಲ ಕೇಳು. ನೀ ಯಾಕ ಬಂದಿದಿ ಹೇಳು? ನಿನ್ನ ಹೆಣ್ತೆ ಎಲೆಕ್ಷನ್ನಾಗ ಗೆದ್ದಾಳ. ನೀ ಮಿಟಿಂಗಿಗಿ ಬಂದಿದಿ.... ಇಲ್ಲೇ ಕೂಡ್ರಿ... ಬಾಗಲ ಮುಚ್ಚಿ ಜಡದು ಕೀಲಿ ಹಾಕಿ ಮ್ಯಾಲಿನ ಆಫೀಸರದ ಕೇಳ್ತೇವು... ಹೆಣ ಮಕ್ಕಳ ಜಾಗಾದಾಗ ಗಣಸರಿಗಿ ಮೀಟಿಂಗ್ ನಡಸಲಾಕ ಯಾವ ಕಾನೂನುದಾಗ ಪರವಾನಿಗಿ ಅದಾ? ಅಂತ...' ನಮ್ಮ ಹೆಣ್ಣಮಕ್ಕಳು ಇಷ್ಟು ಹೇಳಿದ್ದೇ ತಡ, ಸಭೆಯಲ್ಲಿ ಕುಳಿತ ನಾಲ್ಕು ಜನ ಗಂಡಸರು ಕ್ಷಣಾರ್ಧದಲ್ಲಿಯೇ ಧಾವಿಸಿ ಹೊರಗೋಡಿ ಬಂದರು. ಒಂದಿಬ್ಬರು ದ್ವಿಚಕ್ರ ವಾಹನ ಹತ್ತಿ ಓಡಿಯೇ ಬಿಟ್ಟರು. ಇನ್ನಿಬ್ಬರು ದಾಪುಗಾಲಿನಿಂದ ನೋಡ ನೋಡುತ್ತಲೇ ಕಣ್ಮರೆಯಾದರು. ನಮಗರಿವಿಲ್ಲದೆ ನಮ್ಮ ಹೋರಾಟವು ಕೆಲಸದ ಹಕ್ಕು ಕೇಳಲು ಹೋಗಿ ರಾಜಕೀಯ ಹಕ್ಕಿನಿಂದ ವಂಚಿತರನ್ನಾಗಿ ಮಾಡಿದವರನ್ನು ಫಜೀತಿ ಮಾಡುವತ್ತ ಬೆಳೆದುಬಿಟ್ಟಿತ್ತು. ಮೂರು ಹಳ್ಳಿಗೆಲ್ಲ ತಾನೇ ಸರದಾರನಂತೆ ಮಿರ ಮಿರ ಮಿಂಚುವ ಉಪಾಧ್ಯಕ್ಷನು ಠಾಕು ಠೀಕಾಗಿ ನಿಂತು ಉಪದೇಶ ಮಾಡಲು ಮುಂದಾದ. ನೂರಾರು ಸಂಖ್ಯೆಯಲ್ಲಿ ನೆರೆದ ಮಹಿಳೆಯರ ದಂಡು ಒಂದು ಏರಿನಲ್ಲಿ ಕೆಲಸ ಕೇಳಿ ಬೈದರೆ, ಮತ್ತೊಂದು ಸುತ್ತು 'ಹೆಣ್ ಮಕ್ಕಳ ಸೀಟಿನ ಮ್ಯಾಲ ಬಂದ್ ಕುಂತಿರೆಲ್ಲ. ನಾಚಿಕೆಲ್ಲೇನು? ಪಂಚಾಯ್ತಿ ಸೀಟ್ ಅಂದ್ರ ಕೆಂಪ ಬಸ್ಸಿನಾಗ ಸೀಟ್ ಮಾಡೀರ್‍ಯಾ ಹೆಂಗ?... ಜೋರು ಜೋರಾಗಿ ಸಾಂವಿಧಾನಿಕ ಹಕ್ಕು ಜತಾಯಿಸತೊಡಗಿದರು.

ಒಟ್ಟು ದೃಶ್ಯವೇ ಚಳುವಳಿಯ ಸಾಧ್ಯತೆಗಳ ನಾನಾ ಸ್ವರೂಪಕ್ಕೆ ಸಾಕ್ಷಿಯಂತಿತ್ತು. ಕಾರ್ಯದರ್ಶಿ ದಿಕ್‌ತೋಚದೆ ಘ್ಯಾಘ್ಯಾಗುಟ್ಟುತ್ತಿದ್ದ. 'ಕಾನೂನು ಗೊತ್ತಿಲ್ಲದಂವ ನೌಕರಿ ಹ್ಯಾಂಗ ಮಾಡ್ತಿ'? ಅಂತ ಅಕ್ಷರದ ಮುಖ ನೋಡದ ಅಮೀನಕ್ಕಳಿಂದ ಬೈಸಿಕೊಂಡಿದ್ದ.

ಅಷ್ಟರಲ್ಲಿಯೇ ಒಂದಿಬ್ಬರು ಮಹಿಳಾ ಸದಸ್ಯಣಿಯರು ತಲೆತುಂಬ ಸೆರಗ್ಹೊದ್ದು, ಎಡಗೈಯಿಂದ ಸೆರಗ ತುದಿ ಜಗ್ಗಿ ಹಿಡಿದು, ಜಮಾಯಿಸಿದ ಜನ ನೋಡಿ ಭಯ ಬಿದ್ದು ಥರಗುಟ್ಟುತ ನಡೆದು ಬಂದರು. ಅವರಲ್ಲೊಬ್ಬಳು ಅಕ್ಕಮ್ಮ

'ಯಾಕ್ ಅಂಜತೀರಿ? ನಿಮಗ ಓಟ್ ನಾವ್ ಕೊಟ್ಟೇವಿ. ಇಲ್ಲಿ ಬಂದು ನಮ್ಮಕೆಲಸ ಮಾಡ್ರೀ. ನಿಮ ಗಂಡಸರಿಗೆ ಯಾಕ್ ಕಳಸ್ತೀರಿ? ನೀವು ಹೆಣ್ ಮಕ್ಕಳಾಗಿ ಹೆಣಮಕ್ಕಳ ಕಷ್ಟ ಅರತಿಲ್ಲಂದ್ರ ಹ್ಯಾಂಗ...?

ಅಂತ ಭಾರತಿಬಾಯಿ ನೀಟಾಗಿ ಪ್ರಬುದ್ಧಳಂತೆ, ಗೆದ್ದ ಹೆಣ್ಣು ಮಕ್ಕಳನ್ನು ವಿಶ್ವಾಸಕ್ಕೆ ತಗೊಳ್ಳುತ್ತಲೇ ಪರಿಸ್ಥಿತಿ ನಿಭಾಯಿಸಿದ ಪರಿಗೆ ಯಾರಾದರೂ ವ್ಹಾರೇ ವ್ಹಾ ಮಗಳೇ ಶಬ್ಬಾಶ್ ಅನ್ನಲೇಬೇಕಲ್ಲ...?

ಅಕ್ಕಮ್ಮಗ್ರೆ ಏನನ್ನಿಸಿತೋ, ಕಣ್ಣ ಅಂಚಿನಿಂದ ಫಳ್ಳಂತ ನೀರ ಹನಿಯೊಂದು ಹಾರಿತು. 'ನಿಮುಗ ಕೈ ಮುಗಿತಿನಿ, ನಮಲಿಂದನೂ ತಪ್ಪಾಗ್ಯಾದ. ಇನ್ ಮ್ಯಾಲ ನಮ್ಮ ಮೀಟಿಂಕಿಗಿ ನಾವ್ ಬರ್ತೇವು ಮೂರ ದಿನದಾಗ ನಿಮಗ, ಕೆಲಸ ಕೂಡಸೇ ಕೊಡಿಸ್ತೀನಿ' ಅಂತ ವಾಯದಾ ಮಾಡೇ ಬಿಟ್ಟಳು.

ಮಾತಾಡಿ ಬಿಡಲಿಲ್ಲ

ಅಷ್ಟೇ ಮಾತಾಡಿ ಬಿಡಲಿಲ್ಲ ಅಕ್ಕಮ್ಮ ಉಳಿದ ಸದಸ್ಯರಿಗನೂ ಜೊತೆಗೆ ತಗೊಂಡು ಇಡೀ ದಿನ ಕೂತು ಸಭೆ ನಡೆಸಿ ಗ್ರಾಮದ ಪಕ್ಕದ ಕೆರೆಯ ಕೆಲಸ ಶುರು ಮಾಡಿಸಲು ನಿರ್ಣಯ ಮಾಡಿಯೇ ಬಿಟ್ಟಳು.

ನಾನು ಮತ್ತೊಮ್ಮೆ ಹಳ್ಳಿಯ ಭೇಟಿಗೆ ಹೋದಾಗ ಎರಡೂನೂರಕ್ಕೂ ಹೆಚ್ಚು ಹೆಣ ಮಕ್ಕಳು ಕೆರೆಯ ಕೆಲಸಕ್ಕೆ ತೊಡಗಿದ್ದರು. ಸೀರೆಯ ಸೆರಗು ಅಡ್ಡಿಯಾಗುವುದೆಂದು ತಮ್ಮ ಮನೆಯ ಗಂಡಸರ ಹಳೆಯ ಪ್ಯಾಂಟು ಶರ್ಟು ಧರಿಸಿ ಮಣ್ಣೆತ್ತುವ ಕಾಯಕದಲ್ಲಿ ತೊಡಗಿದ್ದು ನೋಡುವುದೇ ಸಂಭ್ರಮ.

• • •

....ಈಗ ಅದೇ ಅಕ್ಕಮ್ಮ ಕೇವಲ ನಾಲ್ಕು ಗೋಡೆಯ ನಡುವಿನ ಸಭೆಯಲ್ಲ, ಬಹಿರಂಗ ಸಭೆಯ ವೇದಿಕೆಯ ಮೇಲೆ ಠೀವಿಯಿಂದ ತಲೆ ಎತ್ತಿ ಕುಳಿತಿದ್ದಾಳೆ. ಜನವಾದಿ ಗೆಳತಿಯರು ಹೇಳುತ್ತಿದ್ದರು, ಅಕ್ಕಮ್ಮ ಭಾಷಣವೂ ಮಾಡುತ್ತಿರುವಳು ಎಂದು... ಸಂಘಟಿತ ಶ್ರಮದ ಪ್ರತಿಫಲ ಈ ಸಭೆ.

ದುಡಿಮೆಯ ಹಕ್ಕು ಪಡೆಯುತ್ತೇವಾ...

'ಹೌದು ಜನ ಸಾಗರವೆಂಬ ಪಣತೆಯಲ್ಲಿ ಅರಿವಿನ ದೀಪ ಹೊತ್ತಿಸದೆ ಚಳುವಳಿಯ ಬೆಳಕ ಹಬ್ಬುವುದು ಹೇಗೆ...?


ಅಕ್ಕಮ್ಮನ ವಿಶ್ವಾಸದ ಮುಗಳ್ನಗು, ಕಲ್ಲಮ್ಮಕ್ಕನ ಛಲ, ಆಕಾಶದ ತುಂಬ ಅಡರಿಕೊಂಡಿತು. ಟ್ರೇನು ತನ್ನ ಪಾಡಿಗೆ ತಾನು ಲಯಬದ್ಧ ಆವಾಜು ಹೊರಡಿಸುತ ಬೆಂಗಳೂರು ನಗರದತ್ತ ಧಾವಿಸುತ್ತಿದೆ. ದೂರದಿಂದ ಹಾಡೊಂದು ಗಾಳಿಯಲ್ಲಿ ತೇಲಾಡುತ್ತ ಬಂದು ಮನದ ತಂತಿ ಮೀಟತೊಡಗಿತು....

ಕ್ರಾಂತಿ ಕೆಂಡದ ಕುಂಡ ಹೊತ್ತು ನಾವು
ಮುಳ್ಳ ತುಳಿಯುತ್ತೇವ.
ನಮ್ಮ ಪಾಲಿನ ದುಡಿಮೆ ಹಕ್ಕನು
ಪಡೆದೇ ಪಡೆಯುತ್ತೇವ.

○

ಬಿಸಿಯೇರುತ್ತಿರುವ ಭೂಮಿಯ ತಾಪಮಾನವೂ ಮತ್ತು ಅಮೇರಿಕಾದ - ಪರಿಸರ ವಿರೋಧಿ ನೀತಿಯೂ

ಭೂಮಿಯ ಬಿಸಿ ದಿನೇ ದಿನೇ ಏರುತ್ತಲೇ ಇದೆ. ಅಮೆರಿಕಾದ್ದ ಇದರಲ್ಲಿ ಬಹುದೊಡ್ಡ ಕೊಡುಗೆ ಇದೆ.



ವಿಶ್ವದಾದ್ಯಂತ ತನ್ನ ಹಿತಾಸಕ್ತಿಗಾಗಿ ಬಂಡುಕೋರರಿಗೆ, ಭಯೋತ್ಪಾದಕರಿಗೆ ಒಂದಿಲ್ಲೊಂದು ಹಂತದಲ್ಲಿ ಬೆಂಬಲ ನೀಡುತ್ತಿರುವ ಹಾಗೂ ಜಾಗತಿಕ ಬಂಡವಾಳಶಾಹಿಗಳಿಗೆ ವಿಶ್ವ ನಾಯಕತ್ವ ನೀಡುತ್ತಿರುವ ಅಮೇರಿಕಾವು ಮಾಲಿನ್ಯಕೋರ ಖಾಸಗಿ ಕಂಪನಿಗಳಿಗೂ ಅಂತಹುದೇ ಪರಿಸರ-ವಿರೋಧಿ ನಾಯಕತ್ವವನ್ನು ನೀಡುತ್ತಿದೆ.


ಏರುತ್ತಿರುವ ಜಾಗತಿಕ ತಾಪಮಾನ:

ಭೂಮಿಯ ತಾಪಮಾನವು ಜಾಗತಿಕ ಮಟ್ಟದಲ್ಲಿ ಸತತವಾಗಿ ಏರುತ್ತಲೇ ಇದೆ. ಕೈಗಾರಿಕಾ ಚಟುವಟಿಕೆಗಳಿಂದ ಬಿಡುಗಡೆಯಾಗುವ ಮಲಿನಕಾರಕ ಅನಿಲಗಳು ವಾತಾವರಣದೊಳಗೆ ಸೇರಿ ಭೂಮಿಯ ವಾತಾವರಣವನ್ನು ರಕ್ಷಿಸುತ್ತಿರುವ ಓಜೋನ್ ಪದರವನ್ನು ನಾಶಪಡಿಸುತ್ತಿವೆ. ಇದರಿಂದಾಗಿ ಸೂರ್ಯನಿಂದ ಬಿಡುಗಡೆಯಾಗುವ ಅತಿನೇರಳೆ ಕಿರಣಗಳು ಭೂಮಿಯನ್ನು ತಲುಪಿ ಭೂಮಿಯ ಮೇಲ್ಮೈನ ವಾತಾವರಣದಲ್ಲೇ ಉಳಿದು ಭೂಮಿಯ ತಾಪಮಾನವನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ಕಳೆದ ಶತಮಾನವೊಂದರಲ್ಲಿಯೇ 1 ಡಿಗ್ರಿ ಫ್ಯಾರನ್‌ಹೀಟ್‌ನಷ್ಟು ಹೆಚ್ಚಿರುವ ಉಷ್ಣಾಂಶವು ಮುಂಬರುವ ವರ್ಷಗಳಲ್ಲಿ ಕ್ಷಿಪ್ರಗತಿಯಲ್ಲಿ ಏರುತ್ತದೆ. ಕೆಲವು ಭೂಭಾಗಗಳಲ್ಲಿ 3ರಿಂದ 4 ಡಿಗ್ರಿ ಫ್ಯಾರನ್‌ಹೀಟ್‌ನಷ್ಟು ಉಷ್ಣಾಂಶ ದಾಖಲಾಗಿದೆ. ಹೆಚ್ಚುತ್ತಿರುವ ಉಷ್ಣಾಂಶದಿಂದಾಗಿ ಮಂಜುಗಡ್ಡೆಗಳು ಕರಗಿ ನೀರಾಗಿ ಹರಿಯುತ್ತಿವೆ. ಕೆಲವೇ ವರ್ಷಗಳಲ್ಲಿ ಹಿಮಪರ್ವತಗಳು ನೀರಾಗಿ ಹರಿಯತೊಡಗುತ್ತವೆ. ಕಡಲ ತೀರಗಳಲ್ಲಿ ಭೂಭಾಗವನ್ನು ಹೆಚ್ಚುತ್ತಿರುವ ಸಮುದ್ರ ನೀರಿನ ಮಟ್ಟವು ಆಕ್ರಮಿಸಿಕೊಳ್ಳ ತೊಡಗುತ್ತಿದೆ. 1999-2002 ದಲ್ಲಿ ದಾಖಲಾಗಿರುವ ಬರವು ಇಡೀ 40 ವರ್ಷಗಳಲ್ಲೇ ತೀವ್ರತರಹದ್ದಾಗಿದೆ. 2002 ರಲ್ಲಿ ಪಶ್ಚಿಮ ಅಮೇರಿಕಾದಲ್ಲಿ ಜರುಗಿದ ಕಾಳ್ಗಿಚ್ಚು 70 ಲಕ್ಷ ಎಕರೆಯನ್ನು ಭಸ್ಮಗೊಳಿಸಿದ್ದು ಕಳೆದ 50 ವರ್ಷಗಳಲ್ಲೇ ಎರಡನೇ ಅತಿದೊಡ್ಡ ನೈಸರ್ಗಿಕ ವಿಕೋಪವೆನಿಸಿದೆ. ಆಗಾಗ್ಗೆ ಮಾರಣಾಂತಿಕವಾಗಿ ಬೀಸುವ ಬಿಸಿಗಾಳಿಯಿಂದಾಗಿ 2003ನೇ ವರ್ಷವೊಂದರಲ್ಲಿ, ಯೂರೋಪ್‌ನಲ್ಲಿ 20,000 ಮಂದಿ ಸಾವನ್ನಪ್ಪಿದ್ದರೆ, ಭಾರತದಲ್ಲಿ 1,500 ಮಂದಿ ಸಾವನ್ನಪ್ಪಿದ್ದಾರೆ. ಡೆಂಗೆ ಮತ್ತು ಮಲೇರಿಯಾದಂಥಹ ಕಾಯಿಲೆ ಹರಡುವ ಸೊಳ್ಳೆಗಳು ಈ ಮೊದಲು ಸಮುದ್ರ ಮಟ್ಟದಿಂದ 3,200 ಅಡಿ ಎತ್ತರದ ಪ್ರದೇಶಗಳಿಗಷ್ಟೇ ಸೀಮಿತವಿದ್ದವು. ಆದರೀಗ ಉಷ್ಣಾಂಶದ ಹೆಚ್ಚಳದಿಂದಾಗಿ ಇಂಡೋನೇಷ್ಯಾ ಮತ್ತು ಕೊಲಂಬಿಯಾದ ಆಂಡೀಸ್ ಪರ್ವತಗಳಂಥಹ 7,200 ಅಡಿ ಎತ್ತರದ ಪ್ರದೇಶಗಳಿಗೂ ಪ್ರವೇಶಿಸಿ ಸೊಳ್ಳೆಗಳು ಬದುಕುವ ಶಕ್ತಿಹೊಂದಿವೆ. ಬದಲಾಗುವ ಹವಾಮಾನ ವೈಪರೀತ್ಯಕ್ಕೆ ಹೊಂದಿಕೊಳ್ಳಲಾಗದೆ ಅಪಾರ ಜೀವ ವೈವಿಧ್ಯವು ವಿನಾಶದ ಅಂಚನ್ನು ತಲುಪುತ್ತವೆ.

ವಿಶ್ವದ ಅನಿಲ ವಿಸರ್ಜನೆಯ ಪಾಲುದಾರರು

ಇಂಗಾಲದ ಡೈ ಆಕ್ಸೈಡ್ ಅನಿಲವನ್ನು ವಿಸರ್ಜಿಸುವ ವಿಶ್ವದ ಮೂರು ದೊಡ್ಡ ರಾಷ್ಟ್ರಗಳು/ ಒಕ್ಕೂಟಗಳು (ಶೇಕಡಾವಾರು)

	ಯು.ಎಸ್.ಎ	ಯೂರೋಪ್ ರಾಷ್ಟ್ರಗಳು	ಚೀನಾ	ಒಟ್ಟು
ವಿಶ್ವದ ಜನಸಂಖ್ಯೆಯಲ್ಲಿನ ಪಾಲು	4.6	6.3	21	31.9
ವಿಶ್ವದ ಆರ್ಥಿಕತೆಯಲ್ಲಿನ ಪಾಲು	30	23	3.2	56.2
ಇಂಗಾಲದ ಡೈ ಆಕ್ಸೈಡ್ ವಿಸರ್ಜನೆ	24	14	13	51



ಕ್ಯೋಟೋ ಒಪ್ಪಂದ:

ಕ್ಯೋಟೋ ಒಪ್ಪಂದದ ಪ್ರಕಾರ 2010ರ ವೇಳೆಗೆ ಕೈಗಾರಿಕಾ ರಾಷ್ಟ್ರಗಳು 1990ರ ಮಟ್ಟದಲ್ಲಿ ಶೇ. 8ರಷ್ಟು ಅನಿಲ ವಿಸರ್ಜನೆಯನ್ನು ಕಡಿತಗೊಳಿಸುವಂತೆ ನಿಬಂಧನೆಗೆ ಒಳಪಡಬೇಕಾಗುತ್ತದೆ. ಇಂತಹ ವಿಷಪೂರಿತ ಅನಿಲಗಳ ವಿಸರ್ಜನೆಯನ್ನು ಕಡಿತಗೊಳಿಸುವಂತೆ ಕ್ಯೋಟೋ ಒಪ್ಪಂದಕ್ಕೆ ಯೂರೋಪ್ ರಾಷ್ಟ್ರಗಳಾದಿಯಾಗಿ ವಿಶ್ವದ ಬಹುತೇಕ ಎಲ್ಲ ಕೈಗಾರಿಕೀಕೃತ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು (ಅಂದಾಜು 160 ರಾಷ್ಟ್ರಗಳು) ಮುಂದಾಗಿ ಸಹಿ ಹಾಕಿವೆ. ಆದರೆ ಅಮೇರಿಕಾದ ಬಂಡವಾಳಿಗರ ದೊರೆಯೂ ವಿಶ್ವದ ನಂ.1 ಮಲಿನಕೋರ ರಾಷ್ಟ್ರದ ಅಧ್ಯಕ್ಷರೂ ಆದ ಬುಶ್ ಮಾತ್ರ ಇಡೀ ವಿಶ್ವದ ಪ್ರಶ್ನಾತೀತ ನಾಯಕನಾದ ತಾನು ಇಂಥಹ ನಿಬಂಧನೆ ವಿಧಿಸುವ ಒಪ್ಪಂದಗಳಿಗೆಲ್ಲ ಸಹಿ ಹಾಕಿ ತನ್ನ ದೇಶೀಯ ಎಕ್ಸಾನ್, ಮೊಬಿಲ್ ನಂಥಹ ತೈಲ ಉತ್ಪಾದಿಸುವ ಮಲಿನಕೋರ ದೈತ್ಯ ಕಂಪನಿಗಳಿಗೆ ಕಡಿವಾಣ ಹಾಕುವುದಿಲ್ಲವೆಂದು ಅಹಂಕಾರದಿಂದ ವರ್ತಿಸುತ್ತಿದ್ದಾರೆ.

ಅಮೇರಿಕಾವೊಂದು ಅತಿದೊಡ್ಡ ಬಹುರಾಷ್ಟ್ರೀಯ ಕಂಪನಿ?

ಪರಿಸರ ಸಂರಕ್ಷಣೆಗೆ ಅವಶ್ಯವಾದ ಬಂಡವಾಳ ಹೂಡಿಕೆ ಮಾಡಬೇಕಾಗಿರುವುದರಿಂದ, ತಾವೇ ಉಗುಳುವ ಮಲಿಕಾರಕ ಅನಿಲಗಳನ್ನು ಶುದ್ದಿಗೊಳಿಸಲು ತಗಲುವ ವೆಚ್ಚವನ್ನು ಭರಿಸಲು ಲಾಭದಾಸೆಗಾಗಿ ಈ ದೈತ್ಯ ಕಂಪನಿಗಳು ಇಚ್ಚಿಸುವುದಿಲ್ಲ. ಹಾಗೆಯೇ ಕೊಳ್ಳುಬಾಕ ಪ್ರವೃತ್ತಿಯಿಂದಾಗಿ ಕೈಗಾರೀಕಾ ರಾಷ್ಟ್ರಗಳಲ್ಲಿರುವ ಶೇ. 20ರಷ್ಟು ವಿಶ್ವದ ಜನತೆಯು ಶೇ. 80ರಷ್ಟು ಸಂಪನ್ಮೂಲಗಳನ್ನು ಬಳಸಿ ಬಿಸಾಡುತ್ತಿದ್ದು ಅತೀವ ಮಾಲಿನ್ಯಕ್ಕೆ ಕಾರಣರಾಗಿದ್ದರೆ, ಹಿಂದುಳಿದ ರಾಷ್ಟ್ರಗಳಲ್ಲಿರುವ ಶೇ. 80ರಷ್ಟು ವಿಶ್ವದ ಜನತೆಯು ಬರೇ ಶೇ. 20ರಷ್ಟು ಸಂಪನ್ಮೂಲಗಳನ್ನಷ್ಟೆ ಬಳಸುತ್ತಿದ್ದಾರೆ. ಜೊತೆಗೆ ಅಮೇರಿಕಾದ ಯುದ್ದ-ಸಂಬಂಧಿತ ಶಸ್ತ್ರಾಸ್ತ್ರ, ತೈಲ ಮತ್ತು ವಿಮಾನ ತಯಾರಿಕಾ ಕಾರ್ಖಾನೆಗಳಿಂದ ಹೆಚ್ಚಿನ ಮಾಲಿನ್ಯವುಂಟಾಗುತ್ತಿದೆ ಮತ್ತು ಈ ಕೈಗಾರಿಕಾ ಲಾಬಿಗೆ ಬುಷ್ ಸಹಜವಾಗಿಯೇ ಮಣಿದಿದ್ದಾರೆ. ಆಟೋಮೊಬೈಲ್, ತೈಲ, ಅನಿಲ, ಕಲ್ಲಿದ್ದಲು ಮತ್ತು ನ್ಯೂಕ್ಲಿಯರ್ ಕಂಪನಿಗಳು ಬುಷ್ ರವರ ಬೆನ್ನೆಲುಬಾಗಿದ್ದು ಚುನಾವಣಾ ಸಮಯದಲ್ಲಿ 5 ಕೋಟಿ ಡಾಲರ್‌ಗೂ ಹೆಚ್ಚಿನ ನಿಧಿಯನ್ನು ಅವರಿಗೆ ನೀಡಿವೆ. ಚುನಾವಣೆಯಲ್ಲಿ ಗೆದ್ದು ಬಂದಾಕ್ಷಣವೇ ಕ್ಯೋಟೋ ಒಪ್ಪಂದಕ್ಕೆ ತಾವು ಸಹಿ ಹಾಕುವುದಿಲ್ಲವೆಂದು ಘೋಷಿಸಿದ ಬುಷ್, 'ನಮಗೆ ನಮ್ಮ ಆರ್ಥಿಕತೆ ಮುಖ್ಯವೇ ಹೊರತು, ಅಮೇರಿಕಾದಲ್ಲಿ ವಾಸಿಸುವ ಜನ ಮುಖ್ಯವೇ ಹೊರತು ಮತ್ತಿನ್ನೇನಲ್ಲ' ಎಂದಿದ್ದರು. ಅಮೇರಿಕಾವೊಂದು ರಾಷ್ಟ್ರವೇ ಅಥವಾ ಅದೊಂದು ಬಹುರಾಷ್ಟ್ರೀಯ ಕಂಪನಿಯೇ ಎಂದು ಸಂಶಯಪಡುವಂತಾಗಿದೆ.

ಕೋಷ್ಟಕದಲ್ಲಿ ಕಾಣುವಂತೆ ಯೂರೋಪ್ ರಾಷ್ಟ್ರಗಳು ಮತ್ತು ಚೀನಾ ದೇಶವು ಅಮೇರಿಕಾಗಿಂತ ಕಡಿಮೆ ಅನಿಲ ವಿಸರ್ಜನೆ ಮಾಡುತ್ತಿರುವುದಲ್ಲದೆ, ಚೀನಾವು 1990ರ ದಶಕದಿಂದೀಚೆಗೆ ಶೇ. 17 ರಷ್ಟು ಅನಿಲ ವಿಸರ್ಜನೆಯನ್ನು ಕಡಿತಗೊಳಿಸಿದೆ. ಇವೆರಡೂ ಉಪಖಂಡಗಳಿಗಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಅಮೇರಿಕಾ ಮಾತ್ರ ಹೆಚ್ಚೆಚ್ಚು ವಿಷಾನಿಲಗಳನ್ನು ರಾಸಾಯನಿಕಗಳನ್ನು ವಾತಾವರಣಕ್ಕೆ ಸೇರಿಸುತ್ತಿದೆ. ಪರಿಸರ ಸಂರಕ್ಷಣೆಗೆ ಮಾತ್ರ ಕಿಂಚಿತ್ತೂ ಗಮನಹರಿಸಿಲ್ಲ. ವಿಶ್ವದ ಜನಸಂಖ್ಯೆಯಲ್ಲಿ ಕೇವಲ ಶೇ.4ರಷ್ಟು ಜನಸಂಖ್ಯೆಯನ್ನು ಹೊಂದಿರುವ ಅಮೇರಿಕಾ ಶೇ. 25ರಷ್ಟು ಮಲಿನಕಾರಕ ಅನಿಲಗಳನ್ನು ವಿಸರ್ಜಿಸುತ್ತಿದೆ. ಇಂಗ್ಲೆಂಡ್ ಶೇ.3 ರಷ್ಟು ಅನಿಲ ವಿಸರ್ಜಿಸಿದರೆ, ಇಂಗ್ಲೆಂಡ್‌ಗಿಂತ 15 ಪಟ್ಟು ಹೆಚ್ಚಿನ ಜನಸಂಖ್ಯೆ ಹೊಂದಿರುವ ಭಾರತ ಸರಿಸುಮಾರು ಇಂಗ್ಲೆಂಡ್‌ನಷ್ಟೆ ಅನಿಲ ವಿಸರ್ಜಿಸುತ್ತಿದೆ.

ಪರಿಸರ ಸಂರಕ್ಷಣೆಯಾಧಾರಿತ ಕೈಗಾರಿಕಾಭಿವೃದ್ಧಿ ನೀತಿಯನ್ನು ಅಳವಡಿಸಕೊಳ್ಳದಿದ್ದಲ್ಲಿ ಮುಂಬರುವ ದಿನಗಳು ಇನ್ನಷ್ಟು ಬರ, ಕ್ಷಾಮ, ಕಾಳ್ಗಿಚ್ಚು, ಚಂಡಮಾರುತಗಳಂಥಹ ನೈಸರ್ಗಿಕ ವಿಕೋಪಗಳು ನಿಯಂತ್ರಣಕ್ಕೆ ಸಿಗದ ಪೆಡಂಭೂತಗಳಾಗುತ್ತವಷ್ಟೆ.

■ ಜಯ

ಕೋಮುವಾದದ ನೆರಳಲ್ಲಿ....

ಪುಟ 2 ರಿಂದ

ಪ್ರಣಾಲಿಗಳನ್ನು ಈ ಮಣ್ಣಿನಲ್ಲಿ ಬಿತ್ತಿವೆ. ಆಸ್ತಿಕತೆಯಂತೆ ನಾಸ್ತಿಕ್ಯವೂ, ದೇವಾಲಯದ ನಿರ್ಮಾಣದ ಉತ್ಸಾಹದಂತೆ, ದೇವಾಲಯ ನಿರಾಕರಣೆಯ ಧ್ವನಿಗಳೂ ಈ ದೇಶದ ಚರಿತ್ರೆಯ ಒಂದು ಭಾಗವಾಗಿವೆ. ಇದರ ಜತೆ ವಿವಿಧ ಪ್ರಾಂತೀಯ ಉಪಸಂಸ್ಕೃತಿಗಳು; ಅವುಗಳು ಈ ದೇಶದ ಪ್ರಧಾನ ಧಾರೆಗೆ ಮುಖಾಮುಖಿಯಾಗಿ, ತಮ್ಮ ಪ್ರತಿಕ್ರಿಯೆಗಳನ್ನು ಅಭಿವ್ಯಕ್ತಿಸಿದ ಕ್ರಮಗಳೂ ವಿವಿಧ ಪ್ರಾದೇಶಿಕ ಭಾಷಾ ಸಾಹಿತ್ಯಗಳಲ್ಲಿ ವ್ಯಕ್ತ ಪಡೆದುಕೊಂಡಿವೆ. ಈ ಎಲ್ಲವುಗಳ ಮೊತ್ತವೂ ಬಹು ಸಂಕೀರ್ಣವೂ ಆಗಿರುವ ಭಾರತೀಯ ಸಂಸ್ಕೃತಿಯ ಬಹುಮುಖತ್ವವನ್ನು ಅರ್ಥಮಾಡಿಕೊಳ್ಳದೆ, ಇಂಡಿಯಾದಲ್ಲಿರುವುದೇನಿದ್ದರೂ ಮೂಲತಃ ಹಿಂದೂ ಸಂಸ್ಕೃತಿ ಎಂದೂ, ಅದೊಂದೆ ಸರ್ವಶ್ರೇಷ್ಠ ಎಂದೂ, ಉಳಿದವೆಲ್ಲ ಹೊರಗಿನವರುಗಳೆಂದೂ ಪ್ರತಿಪಾದಿಸುವುದು ಅವೈಚಾರಿಕ ಮಾತ್ರವಲ್ಲ, ಅಪಾಯಕಾರಿಯಾದದ್ದು ಕೂಡ. ಆದಕಾರಣ ಭಾರತೀಯ ಸಂಸ್ಕೃತಿಯ ಈ ಬಹುಮುಖತ್ವವನ್ನು ನಿರಾಕರಿಸುತ್ತ, ಏಕಮುಖೀ ಸಂಸ್ಕೃತಿಯನ್ನು ಪ್ರತಿಪಾದಿಸುವ ನಿಲುವುಗಳನ್ನು ನಾವು ತೀವ್ರವಾಗಿ ವಿರೋಧಿಸುವುದು ಅಗತ್ಯವಾಗಿದೆ.

ಒಬ್ಬ ಬರಹಗಾರನಾಗಿ ನನಗೆ ಅನ್ನಿಸುವುದೇನೆಂದರೆ, ದೇವರಾಗಲೀ, ದೇವಾಲಯಗಳಾಗಲೀ, ಮತ-ಧರ್ಮಗಳಾಗಲೀ, ಈ ಹೊತ್ತಿನ ಮನುಷ್ಯನ ಮೊದಲ ಅಗತ್ಯಗಳಲ್ಲ. ಅಗತ್ಯವಾದುದೆಂದರೆ, ಈ ಮನುಷ್ಯನ ಮತ್ತು ಅವನನ್ನು ಒಳಗೊಂಡ ಸಮಾಜದ ಸ್ವಾಸ್ಥ್ಯವನ್ನು ಇನ್ನಷ್ಟು ಕೆಡಿಸದ ಹಾಗೆ ಉಳಿಸುವುದು ಹೇಗೆ - ಎನ್ನುವುದು. ಮನುಷ್ಯನ ಅಧ್ಯಾತ್ಮಿಕ ಅವಶ್ಯಕತೆಗಳಾಗಿದ್ದ ಹಾಗೂ ಅವರೆಲ್ಲರನ್ನು ಹಿಡಿದು ಕೂಡಿಸುತ್ತಿದ್ದ ಧರ್ಮ-ದೇವರು-ದೇವಾಲಯುಗಳೇ, ಈ ಮನುಷ್ಯರನ್ನು ಒಡೆಯುವ ಸ್ಫೋಟಕ ಸಾಮಗ್ರಿಗಳಾಗಿ ಬಳಕೆಯಾಗುತ್ತಿರುವ ಈ ಹೊತ್ತಿನಲ್ಲಿ, ಇವುಗಳನ್ನು ನಿರಾಕರಿಸಿ ನಿಲ್ಲಬಲ್ಲಂಥ ಮತ್ತು ನಮ್ಮ ರಾಷ್ಟ್ರದ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಬಲ್ಲಂಥ ಮನಃಸ್ಥಿತಿಯೊಂದು ನಿರ್ಮಾಣವಾದೀತೇ - ಎಂದು ನಾನು ಕಾದಿದ್ದೇನೆ. ○

ನಿಮ್ಮ ಆರೋಗ್ಯ

■ ಡಾ. ಪ್ರಕಾಶ್ ಸಿ. ರಾವ್

ನೂಲಿನಂತೆ ಸೀರೆ, ತಾಯಿಯಂತೆ ಮಗಳು ಎನ್ನುತ್ತಾರೆ. ಮನುಷ್ಯನ ಗುಣ ಸ್ವಭಾವಗಳು, ಸಾಮರ್ಥ್ಯ ಪ್ರತಿಭೆಗಳು ತಂದೆ ತಾಯಿಗಳಿಂದ ಮಕ್ಕಳಿಗೆ ಬರುತ್ತವೆಯೇ?

ಇಲ್ಲ. ಸಿಟ್ಟು, ಕೋಪ, ತಾಳ್ಮೆ, ಬುದ್ಧಿವಂತಿಕೆ, ಪ್ರತಿಭೆ, ನೆನಪಿನ ಶಕ್ತಿ, ಒಳ್ಳೆಯ ಅಥವಾ ಕೆಟ್ಟ ಗುಣ ಯಾವುದೂ ಮಕ್ಕಳಿಗೆ ತಂದೆ ತಾಯಿಗಳಿಂದ ಬರುವುದಿಲ್ಲ. ಆದರೆ ತಂದೆ ತಾಯಿಯಿಂದ ಅನೇಕ ಆರೋಗ್ಯ ಸಮಸ್ಯೆಗಳು , ದೈಹಿಕ ಗುಣಲಕ್ಷಣಗಳು ಮಕ್ಕಳಲ್ಲಿ ಕಂಡು ಬರಲು ಸಾಧ್ಯ. ಮನುಷ್ಯನ ವ್ಯಕ್ತಿತ್ವ, ಗುಣಗಳು ಅನುವಂಶಿಕವಾಗಿ ಬರದೇ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿದ್ದ ನಿರಂತರ ಸಂಪರ್ಕ, ಪ್ರಭಾವ ಹಾಗೂ ಅನುಕರಣೆಯಿಂದ ಬರುತ್ತದೆ. ತಂದೆ ತಾಯಿಗಳ ಬದಲು ಶಿಕ್ಷಕರು, ತಮ್ಮ ಪ್ರೀತಿ ಪಾತ್ರರು, ಬೇರೆ ಯಾರನ್ನೂ ಮಕ್ಕಳು ಅನುಕರಣೆ ಮಾಡಲು ಸಾಧ್ಯ, ಆಗ ಅವರ ಗುಣಗಳು ಮಕ್ಕಳಲ್ಲಿ ಕಂಡು ಬರುತ್ತವೆ. ಸಾಮರ್ಥ್ಯ, ಪ್ರತಿಭೆಗಳು ಅನುವಂಶಿಕವಾಗಿ ಬರದೇ ವ್ಯಕ್ತಿಯ ಪ್ರಯತ್ನವನ್ನು ಅವಲಂಬಿಸಿರುತ್ತವೆ. ಸಿನಿಮಾ, ಸಾಹಿತ್ಯಗಳ ಪಾತ್ರಗಳು ಚರಿತ್ರೆ, ಪುರಾಣ ಇತ್ಯಾದಿ ಅಂಶಗಳೂ ಮಕ್ಕಳ ಮೇಲೆ ಪ್ರಭಾವ ಬೀರಲು ಸಾಧ್ಯವಿದೆ. ○

ಮರು ಸಮರ್ಪಣೆಗೊಂದು ಕರೆ.....

ಪುಟ 1 ರಿಂದ

ಎಂಬುದೂ ಅವರಿಗೆ ಗೊತ್ತಿರಲಿಕ್ಕಿಲ್ಲ.

ಸಿರಿವಂತರ ವಾಹನಗಳು

ದುಡಿಯುವ ಜನರ ಬಸ್ಸುಗಳು

ಅಷ್ಟೊಂದು ಸಮೃದ್ಧರಲ್ಲದವರು, ಬಡವರು, ದಲಿತರು ಮತ್ತು ಜಾಗತೀಕರಣ, ಉದಾರೀಕರಣ ಹಾಗೂ ಕೋಮುವಾದೀಕರಣದ ದುಷ್ಪರಿಣಾಮಗಳ ಬಗ್ಗೆ ಆತಂಕಗೊಂಡವರೆಲ್ಲಾ ಮಹಾತ್ಮರ ಬಳಿ ಬಹಿರಂಗವಾಗಿ ಟೆಂಟ್ ಹಾಕಿಕೊಂಡು ಧರಣಿ, ಪ್ರತಿಭಟನೆಗಳನ್ನು ನಡೆಸುತ್ತಾ ತಮ್ಮ ಶಂಖ ಊದುತ್ತಾರೆ. ಎದುರಿಗೇ ಅತ್ಯಂತ ಸಮೃದ್ಧವಾದ, ಸಿರಿವಂತರ ವಾಹನಗಳ ಅನಂತ ಸಂಚಾರ ಇವು ಯಾವುದರ ಪರಿವೆಯೂ ಇಲ್ಲದೆ ನಡೆದೇ ಇರುತ್ತದೆ. ದುಡಿಯುವ ಜನಗಳನ್ನು ಹೊತ್ತ ಬಸ್ಸುಗಳ ಸಂಚಾರವೂ ಈ ಎರಡು ಕ್ಯಾಂಪುಗಳು ಯಾವ ಪ್ರಶ್ನೆಗಳ ಮೇಲೆ ಪರಸ್ಪರ ವಿರುದ್ಧವಾಗಿವೆ ಎಂಬ ಬಗ್ಗೆ ಯಾವ ಕಾಳಜಿಯೂ ಇಲ್ಲದೆ ಸಾಗುತ್ತಲೇ ಇರುತ್ತದೆ. ಪಾಶ್ಚಿಮಾತ್ಯರು ಹರಡಿರುವ, ಈಗಲೂ ಹರಡುತ್ತಿರುವ ಪರಸ್ಪರ ವಿರೋಧಿ ವಿಚಾರಗಳನ್ನು ಪರಿಶೀಲಿಸುವಾಗ, ಅದೇ ವೇಳೆಗೆ ನಮ್ಮ ಆಳರಸಲು ಸ್ವಾತಂತ್ರ್ಯದ ಆರಂಭದಲ್ಲಿ ಅಂಗೀಕರಿಸಿದರೆನ್ನಲಾದ ಗಾಂಧಿವಾದಿ ದೃಷ್ಟಿಯ ವಿರೋಧವನ್ನು ಪರಿಗಣಿಸಿದಾಗ ನಮ್ಮ ಆಳುವ ಪಕ್ಷಗಳಲ್ಲಿ ಮತ್ತು ಆಳುವ ವರ್ಗಗಳಲ್ಲಿ ಒಂದು ರೀತಿಯ ದ್ವಂದ್ವ ಇರುವುದನ್ನು ಕಾಣುತ್ತೇವೆ.

ಆಳುವ ವರ್ಗಗಳ ದ್ವಂದ್ವ

ದ್ವಂದ್ವ ಗಾಂಧೀಜಿಯನ್ನು ಕೊಂದ ಕೋಮುವಾದಿಗಳೇ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವಾಗ, ಇನ್ನೊಂದೆಡೆ ಜನಸಮೂಹಗಳ ದೊಡ್ಡ ವಿಭಾಗಗಳ, ಅಲ್ಪಸಂಖ್ಯಾತರ ಕೊಲೆಯ ಸಂಚುಗಳನ್ನು ಮುಂದುವರೆಸುತ್ತಿರುವುದನ್ನು ಕಂಡಾಗ ಸ್ಪಷ್ಟವಾಗುತ್ತದೆ. ಒಂದೆಡೆ ಮೇಲ್ಜಾತಿ ಜನಗಳು ದಲಿತರನ್ನು ಸುಡುತ್ತಿರುವಾಗ, ಮಾನವ ಕುಲವನ್ನು ತಿನ್ನುವಂತೆ ಮಾಡುತ್ತಿರುವಾಗಲೇ ಇತ್ತ ಕೋಮುವಾದಿಗಳು ಅಂಬೇಡ್ಕರ್ ಫೋಟೋ ಪ್ರದರ್ಶಿಸಿ ಪರಿಶಿಷ್ಟ ಜಾತಿಗಳ ಜನರನ್ನು ಆಕರ್ಷಿಸಬಯಸುತ್ತಿದ್ದಾರೆ - ಇಂತಹ ಬಹಿರಂಗ ದ್ವಂದ್ವಗಳಿಂದಲೂ ಅವರು ಬಯಲಾಗುತ್ತಿಲ್ಲ.

ಇನ್ನು ಭಾರತ ಸ್ವಾತಂತ್ರ್ಯವಾದಾಗ ಮಹಾತ್ಮಗಾಂಧಿಯ ಹೆಸರನ್ನು ಹಿಡಿದು ಹೊರಟ ಆಳುವ ಪಕ್ಷ ದೇಶದಲ್ಲಿ ಮೂರು ದಶಕಗಳ ಕಾಲ ಯಾವ ಅಡೆತಡೆಯಿಲ್ಲದೆ ಆಳ್ವಿಕೆ ನಡೆಸಿ. ಈ ರಾಷ್ಟ್ರಪಿತನ ಕನಸಿಗೆ ವಿರುದ್ಧವಾದ ಸಮಾಜವನ್ನೇ ಕಟ್ಟುತ್ತಿದೆ. ರಾಷ್ಟ್ರಪಿತನಿಗೆ ಏನು ಬೇಕಿತ್ತು ಎಂಬುದರ ಪರಿವೆಯೇ ಇಲ್ಲದ ಚಾಚಾಗಳು ಎರಡು ಮೂರು ದಶಕಗಳ ಕಾಲ ಖಾದಿ ಧರಿಸಿ ಆತನ ಪ್ರತಿಮೆಗಳನ್ನು ಪ್ರದರ್ಶಿಸಿದರಷ್ಟೆ. ಇದರಿಂದಾಗಿ ಖಾದಿಯೂ ಆಳುವ ವರ್ಗದ ಸಂಕೇತವಾಯಿತು. ಖಾದಿ ತೊಡುತ್ತಲೇ ಅದಕ್ಕೆ ವಿರುದ್ಧವಾದ ಉತ್ಕೃಷ್ಟ ಬಟ್ಟೆಗಳನ್ನು, ಇತರ ಆಮದು ಉತ್ಪನ್ನಗಳನ್ನು ಪ್ರೋತ್ಸಾಹಿಸಿದರು. ಇವರ ದ್ವಂದ್ವ ಕೋಮುವಾದಿಗಳಷ್ಟು ಬಹಿರಂಗವಾಗಿಲ್ಲ. ಕೇವಲ ಮತ ಬ್ಯಾಂಕಿಗಳಿಗಾದರೂ ಪರಿಶಿಷ್ಟ ಜಾತಿಗಳ ಮತ್ತು ಪಂಗಡಗಳ ಹಿತಾಸಕ್ತಿಗಳನ್ನು ಅವರು ಪ್ರತಿಪಾದಿಸಿದರು.

ಸಾಮೂಹಿಕ ಚೌಕಾಸಿಯ ನಿರಾಕರಣೆ

ಆಳುವವರ್ಗಗಳ ಈ ದ್ವಂದ್ವ ಆಳುವ ಬಂಡವಾಳಶಾಹಿ ವರ್ಗದ ದ್ವಂದ್ವವಲ್ಲದೆ ಬೇರೇನೂ ಅಲ್ಲ. ಆಳುವ ವರ್ಗದ ವ್ಯಾವಹಾರಿಕತೆಯ ತತ್ವ ಉತ್ಪಾದನೆಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಮತ್ತು ತಾರ್ಕಿಕ ನೀತಿಗಳನ್ನು ಅನುಸರಿಸುತ್ತದೆ. ಆದರೆ ಉತ್ಪನ್ನದ ವಿತರಣೆಯ ಪ್ರಶ್ನೆ ಬಂದಾಗ ಮೂಢನಂಬಿಕೆ, ಸುಳ್ಳುಗಳನ್ನು ಅನುಸರಿಸುತ್ತದೆ. ಕೆಲಸವನ್ನು ನಡೆಸುವಾಗ ಅವರು ಟೀಮ್ ಸ್ಪಿರಿಟ್, ತಂಡವೆಂಬ ಭಾವನೆ ಇತ್ಯಾದಿ ಹೆಸರಿನಲ್ಲಿ ಸಮೂಹದ ಹಿತಾಸಕ್ತಿಗಳನ್ನು ಪ್ರತಿಪಾದಿಸುತ್ತಾರೆ. ಆದರೆ ಸಾಮೂಹಿಕ ಚೌಕಾಸಿ, ಯೂನಿಯನ್ ಸದಸ್ಯತ್ವ ಇತ್ಯಾದಿಗಳು ಬಂದಾಗ ಸಾಮೂಹಿಕ ಹಿತಾಸಕ್ತಿಗಳನ್ನು ಗುರುತಿಸಲು ನಿರಾಕರಿಸುತ್ತಾರೆ. ಹಾಗೂ ವೈಯಕ್ತಿಕ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸುತ್ತಾರೆ. ಅವರ ದ್ವಂದ್ವ ಅಥವಾ ದ್ವೈತ್ಯ ಸಮೂಹಿಕ ಹಿತಾಸಕ್ತಿಗಳು ವೈಯಕ್ತಿಕ ಹಿತಾಸಕ್ತಿಗಳ ಮೊತ್ತ ಎಂಬ ಸಂಗತಿಯನ್ನು ಕೂಡಾ ಗುರುತಿಸುವುದಿಲ್ಲ.

ಸಾಮಾಜಿಕ ಹಿತಾಸಕ್ತಿ

ಇಂತಹ ದ್ವಂದ್ವಕ್ಕೆ ಕಾರ್ಮಿಕ ವರ್ಗದ ಆಂದೋಲನವಷ್ಟೇ ವಿರುದ್ಧವಾಗಿದೆ. ಆದರ ಭೌತ, ಅಧ್ಯಾತ್ಮಿಕತೆಯಲ್ಲಿ ಭಿನ್ನತೆಯಿಲ್ಲದೆ ಏಕತತ್ವ ಕಾರ್ಮಿಕವರ್ಗ ಉತ್ಪಾದನೆಯಲ್ಲೂ, ಅದರ ವಿತರಣೆಯಲ್ಲೂ ಸಾಮೂಹಿಕ ಹಿತಾಸಕ್ತಿಗಳನ್ನು ಬಯಸುತ್ತದೆ. "ಪ್ರತಿಯೊಬ್ಬನಿಂದಲೂ ಆತನ ಸಾಮರ್ಥ್ಯಕ್ಕನುಗುಣವಾಗಿ, ಪ್ರತಿಯೊಬ್ಬನಿಗೂ ಆತನ ಕೆಲಸಕ್ಕೆ ಅನಗುಣವಾಗಿ" ಎಂದು ಸಮಾಜವಾದದ ನೀತಿ ಸಾಮೂಹಿಕ ಹಿತಾಸಕ್ತಿಗಳನ್ನೇ ಆಧರಿಸಿದೆ. ನಾವಿಂದು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಸಮಾಜವಾದವೇ ಉತ್ತರ. ಕಾರ್ಮಿಕವರ್ಗವನ್ನು ಒಂದುಗೂಡಿಸಿ ಸಮಾಜವಾದವನ್ನು ಸ್ಥಾಪಿಸಲು ಮತ್ತು ಎಲ್ಲ ಜನರಿಗೂ ಪ್ರಜಾಪ್ರಭುತ್ವ ಎಂಬಂತೆ ಮಾಡಲು ಹೋರಾಡಬೇಕು. ಇದು ಮಾತ್ರವೇ ದ್ವಂದ್ವ ನಿಲುವಿನ ದುಷ್ಪರಿಣಾಮಗಳನ್ನು ನಿವಾರಿಸಬಲ್ಲದು.

ಕಾರ್ಮಿಕವರ್ಗದ ಚಾರ್ಟರ್

ನಮ್ಮ ಸಂವಿಧಾನದಲ್ಲಿ ಸಮಾಜವಾದವನ್ನು ಪ್ರತಿಷ್ಠಾಪಿಸಲಾಗಿದೆ. ಅದನ್ನು ಒಬ್ಬ ದ್ವಂದ್ವವಾದಿ ತುರ್ತುಪರಿಸ್ಥಿತಿಯಲ್ಲಿ ಸೇರಿಸಿದ್ದರೂ ಕೂಡಾ ನಮ್ಮ ಸಮಾಜ ಆ ನೀತಿಯನ್ನು ಅಂಗೀಕರಿಸಬೇಕು. ಸಂವಿಧಾನದ ನಿರ್ದೇಶಕ ಸೂತ್ರಗಳು ದೇಶದ ಒಂದು ಕಾರ್ಯಕ್ರಮವಾಗಲಿ. ಎಲ್ಲಾ ಸಾಮಾಜಿಕ ಮತ್ತು ಮಾನವ ಅಗತ್ಯಗಳನ್ನು ಪೂರೈಸಲು ಪ್ರಭುತ್ವ ಧೋರಣೆಯ ನಿರ್ದೇಶಕ ಸೂತ್ರಗಳಿಗೆ ಆಳುವವರು ಬದ್ಧರಾಗುವಂತೆ ಜನತೆ ಒತ್ತಡ ತರಬೇಕು. ನಮ್ಮ ಸಮಾಜವನ್ನು ಸಂಘಟಿಸಲು ಐಎಂಎಫ್ ಮತ್ತು ವಿಶ್ವಬ್ಯಾಂಕ್ ಗಳಿಂದ ಉತ್ತರಗಳಿಗೆ ಹುಡುಕಾಡುವ ಬದಲು ನಮ್ಮ ಸಂಸತ್ತು ಸರ್ವೋಚ್ಛ ಎಂದು ಅದನ್ನು ಅವಲಂಬಿಸಲಿ. ಚುನಾವಣಾ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಿ ಅನುಪಾತಿಕ ಪ್ರಾತನಿಧ್ಯವನ್ನು ಅಂಗೀಕರಿಸಲಿ. ಅಂದರೆ ಪಕ್ಷಗಳು ತಮ್ಮ ಉತ್ತಮ ಪ್ರತಿನಿಧಿಗಳ ಒಂದು ಪಟ್ಟಿ ನೀಡಲಿ ಹಾಗೂ ತಾವು ಗಳಿಸಿದ ಮತಗಳ ಅನುಪಾತದಲ್ಲಿ ಸಂಸತ್ತಿಗೆ ಮತ್ತು ಇತರ ಚುನಾಯಿತ ಸಂಸ್ಥೆಗಳಿಗೆ ತಮ್ಮ ಪ್ರತಿನಿಧಿಗಳನ್ನು ನೇಮಿಸಲಿ. ಶಿಕ್ಷಣದ ಹಕ್ಕು ಮತ್ತು ಉದ್ಯೋಗದ ಹಕ್ಕು ಮೂಲಭೂತ ಹಕ್ಕುಗಳಾಗಲಿ. ಆ ಮೂಲಕ ಜಾತಿ ಆಧಾರಿತ ಮೀಸಲಾತಿಗಳ ಅಗತ್ಯವೇ ಇರುವುದಿಲ್ಲ (ಶಿಕ್ಷಣದ ಹಕ್ಕು ಮತ್ತು ಉದ್ಯೋಗದ ಹಕ್ಕು ಮೂಲಭೂತ ಹಕ್ಕು ಆಗುವವರೆಗೆ ಅಗತ್ಯವಿರುವ ಎಲ್ಲರಿಗೂ ಮೀಸಲಾತಿ ಮುಂದುವರೆಯಬೇಕು).

ಕಾರ್ಮಿಕ ವರ್ಗ ಇಂತಹ ಒಂದು ಚಾರ್ಟರ್ (ಸನ್ನದು)ನ್ನು ಅಂಗೀಕರಿಸಿ ಇದನ್ನು ಈಗಲೇ ತರಬೇಕು ಎಂದು ಘೋಷಿಸಬೇಕು. ಅದಿಲ್ಲದಿದ್ದರೆ ನಾವು ಈ ಹಿಂದೆ ಗಳಿಸಿದ ಸಾಮಾಜಿಕ ನ್ಯಾಯದಲ್ಲಿ ಹಿನ್ನಡೆ ಕಾಣಬೇಕಾಗುತ್ತದೆ. ಎಂಟು ಗಂಟೆಗಳ ಕೆಲಸ, ಮಾಹಿತಿ ತಂತ್ರಜ್ಞಾನ (ಐಟಿ) ವಲಯದಿಂದ ಹಿಡಿದು ಕಾರ್ಖಾನೆಗಳವರೆಗೆ, ಅಸಂಘಟಿತ ಉದ್ಯೋಗಗಳಲ್ಲಿ ತಿಲಾಂಜಲಿ ನೀಡಲಾಗುತ್ತಿದೆ. ಕಾರ್ಮಿಕ ಕಾನೂನುಗಳು ಮತ್ತು ಸಾಮಾಜಿಕ ನ್ಯಾಯ ನೀಡಿಕೆಯ ತಿರುಗು ಮುರುಗುಗೊಳಿಸುವ ನೀತಿಗಳನ್ನು ತಿರುಗುಮುರುಗು ಗೊಳಿಸಲು ನಮ್ಮ ಸಂಘಟನಾ ವಿಧಾಗಳನ್ನು ಬದಲಿಸಬೇಕಾದ ಸಮಯ ಬಂದಿದೆ.

ಉದಾರೀಕರಣ ಮತ್ತು ಜಾಗತೀಕರಣದ ಪ್ರಕ್ರಿಯೆ ಕಾರ್ಮಿಕ ಆಂದೋಲನಕ್ಕೆ ಹಲವು ಸವಾಲುಗಳನ್ನು ಒಡ್ಡಿದೆ. ಈ ಇಂತಹ ಪ್ರತಿಯೊಂದು ಸವಾಲನ್ನು ಹೊಸ ಅವಕಾಶವಾಗಿ ಪರಿವರ್ತಿಸಲು ಸಾಧ್ಯ. ಬದುಕುಳಿಯಲು ಅಗತ್ಯವಿರುವುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಆರಂಭವಾಗುವ ಏಕರೂಪದ ಕನಿಷ್ಟ ಕೂಲಿಗಳನ್ನು ಕೇಳುತ್ತಾ, ಅದೇ ವೇಳೆಗೆ ಕಾರ್ಯನಿರ್ವಹಣೆಗೆ ಅನುಸಾರವಾದ ವೇತನವನ್ನು ಆಧರಿಸಿದ ಒಂದು ನ್ಯಾಯಕೂಲಿಯನ್ನು ಕೇಳಬೇಕು. ಅದೇ ಸಮಯದಲ್ಲಿ ಕಾರ್ಮಿಕ ಕಾನೂನುಗಳ ಜಾರಿಗೆ ನಾಗರಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಮತ್ತು ವಿಸ್ತರಣೆಗೆ ಒತ್ತಾಯಿಸಿ ಒಂದು ಆಂದೋಲನವನ್ನು ಆರಂಭಿಸಲು ಸಮಸ್ತ ಕಾರ್ಮಿಕ ವರ್ಗವನ್ನು ಸ್ಥಿರಗೊಳಿಸಬೇಕು. ಹೀಗೆ ಸ್ವಾತಂತ್ರ್ಯ ಹೋರಾಟದ ಕಾನೂನು ಭಂಗ ಚಳುವಳಿಗೆ ಬದಲಾಗಿ ಈಗ ಆಳುವ ವರ್ಗ ದೇಶದ ಕಾನೂನುಗಳಿಗೆ ಬದ್ಧವಾಗಿ ತನ್ನದೇ ಜನಗಳನ್ನು ರಕ್ಷಿಸುವಂತೆ ಮಾಡಬೇಕಾಗಿದೆ.

ಕಾರ್ಮಿಕ ವರ್ಗ ಒಂದು ವಿಭಾಗದ ಅಥವಾ ಗುಂಪು ಚಟುವಟಿಕೆಗಳಲ್ಲಿ ತೊಡಗುವ ಬದಲು ಒಂದುಗೂಡಿ ತಮ್ಮಲ್ಲಿನ ಭೇದಭಾಗಳನ್ನೆಲ್ಲಾ ಕೊನೆಗೊಳಿಸಿ ಸಾರ್ವತ್ರಿಕ ಬೇಡಿಕೆಗಳಿಗೆ ಹೋರಾಡಬೇಕು. ಮೇ ದಿನ ಆಂದೋಲನಕ್ಕೆ ನಾವು ಮರು ಸಮರ್ಪಣೆಯನ್ನು ಸೂಚಿಸಬಹುದು. ದೇಶಾದ್ಯಂತ ಅಥವಾ ರಾಜ್ಯದಲ್ಲಾದರೂ ಕಾರ್ಮಿಕ ವರ್ಗ ಈ ಮಾರ್ಗವನ್ನು ಅಂಗೀಕರಿಸಲು ಒಂದು ವರ್ಷ ತಗೊಂಡರು ಪರವಾಗಿಲ್ಲ. ಮೇ ದಿನದ ವೇಳೆಗಾದರೂ ಇಂತಹ ಒಂದು ಆಂದೋಲನವನ್ನು ಆರಂಭಿಸಿದರೆ ಅದು ಮೇ ದಿನವನ್ನು ಕೇವಲ ಒಂದು ಸ್ಮರಣೆಯ ಮತ್ತು ಆಚರಣೆಯ ದಿನವಾಗಿಯಷ್ಟೇ ಬಿಡದೆ ಅದನ್ನು ವಾಸ್ತವ ಮತ್ತು ಅರ್ಥಪೂರ್ಣಗೊಳಿಸಲು ಸಾಧ್ಯ. ಇಲ್ಲವಾದರೆ ನಾವು ಕೂಡಾ 'ಅದ್ವೈತ'ದ ಬದಲು 'ದ್ವೈತ'ವನ್ನು ಅನುಸರಿಸುವವರು ಎಂದು ಪರಿಗಣಿಸಲ್ಪಡುತ್ತೇವೆ. ಎಲ್ಲಾ ಮೌಲ್ಯಗಳನ್ನು ಶ್ರಮಶಕ್ತಿ ಸೃಷ್ಟಿಸುತ್ತದೆ, ಆದ್ದರಿಂದ ಅದನ್ನು ಶ್ರಮಶಕ್ತಿ ಮಾತ್ರವೇ ಪಡೆಯಬೇಕು, ಬಂಡವಾಳವಲ್ಲ. ಈ ಅರ್ಥದಲ್ಲಿ ನಾವು 'ಅದ್ವೈತಿ'ಗಳು ಆಳುವವರಿಗೆ ಮೌಲ್ಯವನ್ನು ಸೃಷ್ಟಿಸುವುದು ಶ್ರಮಶಕ್ತಿ ಎಂದು ಗೊತ್ತಿಗೆ, ಆದರೆ ಶ್ರಮಶಕ್ತಿ ಬದುಕುಳಿಯಲು ಸಾಕಾಗುವಷ್ಟೆ ಕನಿಷ್ಟ ಅಂಶವನ್ನು ಕೊಟ್ಟು ಲಾಭವನ್ನೆಲ್ಲಾ ಬಂಡವಾಳವೇ ಸ್ವಾಧೀನಪಡಿಸಿ ಕೊಳ್ಳುತ್ತೆಯಾದ್ದರಿಂದ ಅವರು 'ದ್ವೈತಿ'ಗಳು. ಬಂಡವಾಳವು ಶೇಖರಣೆಗೊಂಡ ಶ್ರಮಶಕ್ತಿ ಯಾದ್ದರಿಂದ ಅದು ಸಾಮಾಜಿಕವಾದದ್ದು. ಆದ್ದರಿಂದ ಅದನ್ನು ಸಮಾಜದ ಹಿತಾಸಕ್ತಿಗಳಿಂದ ಮಾತ್ರವೇ ಶ್ರಮಶಕ್ತಿಯ ವರ್ತಮಾನ ಮತ್ತು ಭವಿಷ್ಯಕ್ಕಷ್ಟೇ ಬಳಕೆಯಾಗಬೇಕು ಎಂಬ ದೃಢ ನಂಬಿಕೆ ನಮ್ಮದು. ○

ರಾಮ - ಕೃಷ್ಣರ ಹೆಸರಿನಲ್ಲಿ ನಾಮ...

ಪುಟ 5 ರಿಂದ

ಮುಖ ತೋರಿಸಿ, ವಿದೇಶಗಳಲ್ಲಿ ಮತ್ತು ಭಾರತದಲ್ಲಿ ಭಿಕ್ಷೆಗೆ ಹೊರಟಿರುವ ಇಸ್ಕಾನ್ ಎಲ್ಲೂ...ಕೂಡ. ಭಾರತ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರ ಗಳಿಂದ ಇಂತಿಷ್ಟು ಸಹಾಯಧನ ಪಡೆಯುತ್ತಿದ್ದೇನೆ ಎಂಬ ಒಂದು ಅಕ್ಷರವನ್ನು ಬರೆದಿಲ್ಲ.

ಇಸ್ಕಾನ್ ನಿಜವಾದ ಕಾಯಕ

ರಿಯಲ್ ಎಸ್ಟೇಟ್ ದಂಧೆ

ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಎತ್ತರಿಸುವುದಾಗಿ ಹೇಳಿಕೊಂಡು ಇಸ್ಕಾನ್ ಎನ್ನುವ ಸಂಸ್ಥೆಯನ್ನು ಪ್ರಭುಪಾದ ಎನ್ನುವವನು ಆರಂಭಿಸಿದರಂತೆ. ಆದರೆ ಕೃಷ್ಣನ ಬಗ್ಗೆ ಜಾಗೃತಿ ವಹಿಸಿಬೇಕಾದ ಇದು ಮಾಡಿರುವುದು ಮಾಡಿಸುತ್ತಿರುವುದು ಎಂತಹ ಘನ ಕಾರ್ಯವೆಂದು ನೀವೇ ನೋಡಿ.

1. ಕೃಷ್ಣ ಹೆಸರಿನಲ್ಲಿ ಥೀಮ್ ಪಾರ್ಕ್ ಮಾಡಲು ರಾಜ್ಯ ಸರ್ಕಾರದಿಂದ ಆದರ ಮ್ಯಾನೇಜಿಂಗ್ ಟ್ರಸ್ಟಿ ಪಡೆದಿರುವ ಭೂಮಿ 42.3 ಎಕರೆ ಆದರೆ, ಭೂಮಿ ಸಿಕ್ಕನಂತರ ತನ್ನ ಮೂಲ ಯೋಜನೆಯನ್ನು ಕೈ ಬಿಟ್ಟಿತು. ಬದಲಾಗಿ ಆ ಜಾಗದಲ್ಲಿ ಐಟಿ,ಬಿಪಿಓ ಪಾರ್ಕ್, ಹೆರಿಟೇಜ್ ರೆಸಾರ್ಟ್ ವಸತಿ ಸಮುಚ್ಚಯ ನಿರ್ಮಿಸಲು ಪುನಃ ಅನುಮತಿ ಪಡೆದಿದ್ದಲ್ಲದೇ ಪುನಃ 35 ಎಕರೆ ಭೂಮಿಯನ್ನು ಸರ್ಕಾರದಿಂದ ಕಬಳಿಸಿತು.
2. ಸದ್ಯ ಇಸ್ಕಾನ್ ಅಧೀನದಲ್ಲಿರುವ ಆಸ್ತಿಗಳ ವಿವರ ಈ ರೀತಿ ತಿಳಿದು ಬಂದಿದೆ.
3. ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡು 500 ಕೋಟಿ ಆಸ್ತಿ.
4. ಶ್ರೀರಂಗಪಟ್ಟಣದ ನೈಸ್ ಕಾರಿಡಾರ್ ಬಳಿ 125 ಎಕರೆ ಆಸ್ತಿ.
5. ಮೈಸೂರು ನಗರದಲ್ಲಿ 9 ಎಕರೆ ಆಸ್ತಿ.
6. ತಿರುಪತಿಯಲ್ಲಿ 25 ಕೋಟಿ ರೂನ ಡಿಸ್ನಿ ಲ್ಯಾಂಡ್ ಆಸ್ತಿ
7. ಚೆನ್ನೈನಲ್ಲಿ ಬೀಚ್ ರೆಸಾರ್ಟ್ ಆಸ್ತಿ.

ನೋಡಿ ಧಾರ್ಮಿಕ ಮುಖವಾಡ ಸೋಗು ಹಾಕಿ ಇಸ್ಕಾನ್ ನಡೆಸುತ್ತಿರುವ ನಿಜವಾದ ದಂಧೆಯನ್ನು, ಆದರೆ ದುರಂತವೆಂದರೆ ಕಾಂಗ್ರೆಸ್ ಬಿಜೆಪಿ ಜೆಡಿ(ಎಸ್) ಇಂತಹ ಎಲ್ಲಾ ಪಕ್ಷಗಳ ಸರ್ಕಾರಗಳು ಇಂತಹ ನಯ ವಂಚಕರಿಗೆ ಕಣ್ಮುಚ್ಚಿ ಬೆಂಬಲಿಸುತ್ತಿರುವುದು ದುರಂತವೇ ಸರಿ.

ತನಿಖೆ ಅಗತ್ಯ

ಮಕ್ಕಳಿಗೆ ನೀಡುವ ಬಿಸಿಯೂಟವನ್ನು ಬಂಡವಾಳ ಮಾಡಿಕೊಂಡು ಇಸ್ಕಾನ್‌ನ ಅಕ್ಷಯಪಾತ್ರ ನಡೆಸಿರುವ ಈ ಹಗಲು ದರೋಡೆ ಬಗ್ಗೆ ವಿಶೇಷವಾದ ತನಿಖೆ ಅಗತ್ಯವಿದೆ. ಭಾರತ ಸರ್ಕಾರ ನೀಡುತ್ತಿರುವ ಕೋಟ್ಯಾಂತರ ರೂಪಾಯಿ ಸಹಾಯಧನ ಪಡೆದೂ, ಅದರಲ್ಲಿಯೇ ಬಿಸಿಯೂಟದ ಎಲ್ಲಾ ಖರ್ಚುಗಳನ್ನು ನಿಭಾಯಿಸಲು ಸಾಧ್ಯವಿದ್ದಾಗ್ಯೂ, ಅದನ್ನು ಮರೆ ಮಾಡಿ ಕೇಂದ್ರ ರಾಜ್ಯ ಸರ್ಕಾರಕ್ಕೆ ಮತ್ತು ಜನತೆಗೆ ವಂಚಿಸಲು ಹೊರಟಿರುವುದು ಅಕ್ಷಮ್ಯ ಅಪರಾಧ. ಹೀಗಾಗಿ ಇಸ್ಕಾನ್‌ನ ಈ ಎಲ್ಲಾ ಹಗರಣಗಳ ಬಗ್ಗೆ ಕೇಂದ್ರ ರಾಜ್ಯ ಸರ್ಕಾರಗಳು ಸಮಗ್ರ ತನಿಖೆಗೆ ಒಳಪಡಿಸಲೇಬೇಕು. ಅಲ್ಲದೇ ಈ ಯೋಜನೆಯನ್ನು ಅಕ್ಷಯ ಪಾತ್ರೆಯಿಂದ ವಶಪಡಿಸಿಕೊಂಡು ಸರ್ಕಾರವೇ ನಡೆಸಬೇಕಿದೆ. ಸರ್ಕಾರದ ಮೇಲೆ ಈ ಒತ್ತಡವನ್ನು ಹಾಕಲು ಎಲ್ಲಾ ಜನಪರ ಕಾರ್ಮಿಕ ಸಂಘಟನೆಗಳು ಒಂದಾಗಿ ಹೋರಾಟ ನಡೆಸಬೇಕಾಗಿದೆ.

'ಸುಳ್ಳು ಹೇಳುವ ಇಸ್ಕಾನ್'

ಶಾಸನ ಸಭೆಯಲ್ಲಿ ಅಕ್ಷಯ ಪಾತ್ರೆ ಹಗರಣ ಹೊರ ಬರುತ್ತಿದ್ದಂತೆ. ಅಕ್ಷರ ದಾಸೋಹ ಸಂಘಟನೆಗಳು ಪ್ರತಿಭಟಿಸುತ್ತಿದ್ದಂತೆ, ಇಸ್ಕಾನ್ ದೇವಸ್ಥಾನದ ಮುಖ್ಯಸ್ಥ ಮಧುಪಂಡಿತ್ ದಾಸ್ ಇದಕ್ಕೂ ನಮಗೂ ಸಂಬಂಧವಿಲ್ಲವೆಂದು ಜಾರಿಕೊಳ್ಳಲು ಯತ್ನಿಸುತ್ತಿದ್ದಾರೆ. ಆದರೆ ಲಭ್ಯವಿರುವ ದಾಖಲೆಗಳು ಈ ಹಗರಣದಲ್ಲಿ ಇಸ್ಕಾನ್ ನೇರ ಪಾತ್ರವಿದೆ ಎಂಬುದನ್ನು ಸಾಬೀತುಪಡಿಸುತ್ತಿವೆ. ಇಸ್ಕಾನ್ ದಾಖಲೆಗಳ ಪ್ರಕಾರವೇ ಮಧುಪಂಡಿತ್‌ದಾಸ್ ಅಕ್ಷಯ ಪಾತ್ರೆ ಟ್ರಸ್ಟ್‌ಗಳಲ್ಲಿ ಒಂದು.

ಆದರೆ ಈ ಸಂಬಂಧ ಗದ್ದಲ ಆರಂಭವಾಗುತ್ತಿದ್ದತೆ ಅಕ್ಷಯ ಪಾತ್ರೆ ಎಂಬ ಹೆಸರಲ್ಲಿ ಇಂಟರ್‌ನೆಟ್, ವೆಬ್‌ಸೈಟ್‌ನಲ್ಲಿದ್ದ ಎಲ್ಲಾ ಮಾಹಿತಿಗಳನ್ನು ತೆಗೆದುಹಾಕಿದ್ದಾರೆ ಈ ನಾಮದ ಗುರುಗಳು ಹೇಗಿದೆ. ಹರೇ ಕೃಷ್ಣಾ...ಕೃಷ್ಣಾ... ○

ಬೊಲಿವೇರಿಯನ್ ಕ್ರಾಂತಿಯ ಐದನೇ ವಾರ್ಷಿಕೋತ್ಸವ


‘ಜಗತ್ತಿನ ಪ್ರತಿ 11 ಕ್ಕೆ ವೆನೆಜುವೆಲಾದ 13 ಇದೆ’

ವೆನೆಜುವೆಲಾದಲ್ಲಿ ಇತ್ತೀಚಿಗೆ ಸಂಭ್ರಮದ ಐದನೇ ವಾರ್ಷಿಕೋತ್ಸವ ಆಚರಿಸಲಾಯಿತು. ಇದು ಚುನಾಯಿತ ಸರ್ಕಾರವನ್ನು ಪದಚ್ಯುತಗಳಿಸಿ ಅಧಿಕಾರಕ್ಕೆ ಬಂದ ಮಿಲಿಟರಿ ಸರ್ಕಾರವನ್ನು ಎರಡು ದಿನಗಳಲ್ಲಿ ದೇಶದ ಜನತೆ ಓಡಿಸಿದ ಅದ್ಭುತ ವಿಜಯದ ಐದನೇ ವಾರ್ಷಿಕೋತ್ಸವ.

‘ಪ್ರತಿಯೊಂದು 11ಕ್ಕೆ ಅದರ 13 ಇದೆ’ - ಇದು ರಾಜಧಾನಿ ಕ್ಯಾರಕಾಸ್‌ನಲ್ಲಿ ಎಲ್ಲೆಡೆ ಬ್ಯಾನರ್ ಪೋಸ್ಟರ್‌ಗಳಲ್ಲಿ ಕಂಡು ಬಂದ ರ್‍ಯಾಲಿಗಳಲ್ಲಿ ಕೇಳಿ ಬಂದ ಘೋಷಣೆಗಳು. ಏಪ್ರಿಲ್ 11, 2002 ರಂದು ಮಿಲಿಟರಿ ‘ಕ್ಷಿಪ್ರಕ್ರಾಂತಿ’ ಎನ್ನಲಾಗುವ ಅಮೆರಿಕನ್ ಸಿಐಎ ಪ್ರೇರಿತ ಕ್ಷಿಪ್ರ ಪಿತೂರಿಯಲ್ಲಿ ಚವೇಝರನ್ನು ಪದಚ್ಯುತಗೊಳಿಸಿದರು. 13ರಂದು ಆ ಜಾಗದಲ್ಲಿ ಸ್ಥಾಪಿಸಬೇಕಾಗಿದ್ದ ಮಿಲಿಟರಿ ಸರ್ಕಾರವನ್ನು ಜನತೆ ಕೆಳಗಿಳಿಸಿ, ಚವೇಝರನ್ನು ಮತ್ತೆ ಅಧ್ಯಕ್ಷರಾಗಿಸಿದರು. ಆಳುವ ಶ್ರೀಮಂತರ, ಅವರ ಸಾಮ್ರಾಜ್ಯಶಾಹಿ ದಾಳಿಗಳ ಪ್ರತಿಯೊಂದು ದಾಳಿಗೆ, ಜನ ಪ್ರತಿದಾಳಿ ಕೊಡುತ್ತಾರೆ ಎನ್ನುವುದು ಇದರ ಒಳ ಅರ್ಥ. ಏಪ್ರಿಲ್ 13ರಂದು ಅಧ್ಯಕ್ಷೀಯ ನಿವಾಸದ ಎದುರು ನಡೆದ 10 ಲಕ್ಷ ಜನರ ರ್‍ಯಾಲಿಯಲ್ಲಿ, ಮಿಲಿಟರಿ ಕ್ಷಿಪ್ರ ಕ್ರಾಂತಿ ಸಾಮ್ರಾಜ್ಯಶಾಹಿ ವಿರೋಧಿ ಬೊಲಿವಿವೇರಿಯನ್ ಕ್ರಾಂತಿಗೆ ನಾಂದಿ ಹಾಡಿತು, ಅದನ್ನು ನಾವು ‘ಸಮಾಜವಾದ’ ದತ್ತ ಒಯ್ಯುತ್ತಿದ್ದೇವೆ ಎಂದರು ಚವೇಝ್.

ಪ್ರತಿ ‘ಪಿತೂರಿ’ಗೆ ಪ್ರತಿರೋಧವಿದೆ

ಜಗತ್ತಿನಲ್ಲಿ ನಡೆಯುತ್ತಿರುವ ಪ್ರತಿಯೊಂದು ಏಪ್ರಿಲ್ 11(ಸಿಐಎ ಪಿತೂರಿ)ಕ್ಕೆ ವೆನೆಜುವೆಲಾದ 13 (ಪ್ರತಿರೋಧ) ಇದೆ. ಜಗತ್ತಿನಲ್ಲೆಲ್ಲಾ ಖಾಸಗೀಕರಣ ನಡೀತಾ ಇದೆ. ವೆನೆಜುವೆಲಾದಲ್ಲಿ ರಾಷ್ಟ್ರೀಕರಣದ ಭರಾಟೆ. ಹೆಚ್ಚಿನ ದೇಶಗಳಲ್ಲಿ ಇದ್ದಬದ್ದ ಭೂ ಸುಧಾರಣೆಗಳನ್ನು ಗಾಳಿಗೆ ತೂರಲಾಗುತ್ತಿದೆ. ಇಲ್ಲಿಯ ದೊಡ್ಡ ಖಾಸಗಿ ಎಸ್ಟೇಟ್‌ಗಳನ್ನು ಭೂಹೀನ ಬಡವರಿಗೆ ಹಂಚಲಾಗುತ್ತಿದೆ. ಕಾರ್ಮಿಕರು ದಶಕಗಳ ಕಾಲ ಹೋರಾಟದಲ್ಲಿ ಪಡೆದ ಟ್ರೇಡ್ ಯೂನಿಯನ್ ಹಕ್ಕುಗಳು ನಶಿಸಿ ಹೋಗದಿರುವ ದೇಶ ಇಲ್ಲ. ಆದರೆ ವೆನೆಜುವೆಲಾದಲ್ಲಿ ಕಾರ್ಮಿಕರ ಕೌನ್ಸಿಲ್‌ಗಳು ಮುಚ್ಚಿರುವ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳ ನಿರ್ವಹಣೆ ವಹಿಸಲು ಮುಂದಾಗಿವೆ. ಸರ್ಕಾರದ ಪೂರ್ಣ ಕುಮ್ಮಕ್ಕಿನ ಜತೆಗೆ, ಅತ್ಯಂತ ದೀರ್ಘ, ‘ಪ್ರಬುದ್ಧ’ ಪ್ರಜಾಸತ್ತಾತ್ಮಕ ವ್ಯವಸ್ಥೆ ಇರುವ ದೇಶಗಳಲ್ಲೂ ಜನರ ನಿಜವಾದ ಪಾಲ್ಗೊಳ್ಳುವಿಕೆ, ದೇಶದ ಆಗುಹೋಗುಗಳ ಮೇಲೆ ನಿಜವಾದ ನಿಯಂತ್ರಣ ಹೆಸರಿಗೆ ಮಾತ್ರ ಇದೆ. ಈ ದೇಶದಲ್ಲಿ ಬೂರ್ಜ್ವಾ, ಅಧಿಕಾರಶಾಹಿ ಪ್ರಭುತ್ವವನ್ನು ನಾಶಗೊಳಿಸುತ್ತಿವೆ. ‘ಸಮುದಾಯ ಕೌನ್ಸಿಲ್’ ಗಳಿಗೆ ಅಧಿಕಾರ ವಿಕೇಂದ್ರೀಕರಣ, ಆಯಾ ಪ್ರದೇಶಗಳಲ್ಲಿ ಎಲ್ಲಾ ಆಗುಹೋಗುಗಳ ಮೇಲೆ ಕೌನ್ಸಿಲ್


ಭೂ ಹೀನರಿಗೆ ಭೂಮಿ ಪಟ್ಟಾ ವಿತರಣೆ

ನಿಯಂತ್ರಣ ಹೊರುವ ಬದಲಾವಣೆಯನ್ನು ಚವೇಝ್ ಸರ್ಕಾರದ ನಾಯಕತ್ವದಲ್ಲಿ ನಡೆಸಲಾಗುತ್ತಿದೆ. ಹೊಸ ‘ಜನತಾ ಪ್ರಭುತ್ವ’ ವನ್ನು ಕಟ್ಟಲಾಗುತ್ತಿದೆ.

ಸಮಾಜವಾದದ ದಿಕ್ಕಿನಲ್ಲಿ

ಸಮಾಜವಾದ, ಎಡಪಂಥ ಈಗ ‘ಹಾಸ್ಯಾಸ್ಪದ’ ಅಥವಾ ‘ಕೆಟ್ಟ’ ಶಬ್ಧ. ಸಮಾಜವಾದಿ ಎಡಪಕ್ಷಗಳು ಒಂದೋ ಬಲಗುಂದುತ್ತಿವೆ ಅಥವಾ ಸಿದ್ಧಾಂತ ಬಿಟ್ಟು ಬೂರ್ಜ್ವಾ ಪಕ್ಷಗಳಂತೆ ಆಗುತ್ತಿವೆ. ಆದರೆ ಇಲ್ಲಿ ‘ಬೊಲಿವಿರಿಯನ್ ಕ್ರಾಂತಿ’ ಗೆ ಬದ್ಧವಾಗಿರುವ ಎಲ್ಲಾ ಪಕ್ಷಗಳು ಸೇರಿ ಸಂಯುಕ್ತ ಸಮಾಜವಾದಿ ಪಕ್ಷವೊಂದನ್ನು ಕಟ್ಟಲು ರಭಸದ ಕೆಲಸ ಸಾಗಿದೆ. ಸಮಾಜವಾದಿ ದೇಶಗಳು ಸೇರಿದಂತೆ ಹೆಚ್ಚಿನ ದೇಶಗಳು ‘ಸಮಾಜವಾದ’ ದ ಸೊಲ್ಲು ಎತ್ತದೆ ಇರುವ ಸಂದರ್ಭದಲ್ಲಿ ಈ ದೇಶದ ಸರ್ಕಾರ ಮತ್ತು ಬಹುಸಂಖ್ಯಾತ ಜನತೆ ‘ನಾವು ಸಮಾಜವಾದದ ಕಡೆಗೆ ಹೆಜ್ಜೆ ಇಡುತ್ತೇವೆಂದು’ ಪಣತೊಟ್ಟಿದ್ದಾರೆ.

ಅಮೇರಿಕದ ಬಡವರಿಗೆ ತೈಲ ಸಬ್ಸಿಡಿ

ಅಂತರಾಷ್ಟ್ರೀಯ ಸಂಬಂಧಗಳು ಸರ್ಕಾರಗಳ ನಡುವೆ, ಹೆಚ್ಚೆಚ್ಚು ಆರ್ಥಿಕ ಮಿಲಿಟರಿ ರಾಜಕೀಯ ಪೈಪೋಟಿಯದ್ದು ಆಗುತ್ತಿವೆ. ಎರಡು ದೇಶಗಳ ಜನತೆ ಅಥವಾ ಸರ್ಕಾರದ ಜನತೆಗಳ ನಡುವೆ ಸಂಬಂಧವೇ ಇಲ್ಲ ಎಂಬ ಪರಿಸ್ಥಿತಿಯಲ್ಲಿ, ವೆನೆಜುವೆಲಾ ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳ (ಅಮೇರಿಕಾ, ಬ್ರಿಟನ್ ಮುಂತಾದ) ಬಡವರ ಇಂಧನಕ್ಕೆ ಸಬ್ಸಿಡಿ ಕೊಡಲು ಮುಂದಾಗಿದೆ.

ಹಲವು ಅಭಿವೃದ್ಧಿ ಹೊಂದಿದ ಮಿಲಿಟರಿ ಶಕ್ತಿ ಇರುವ ದೇಶಗಳು ಸೇರಿದಂತೆ ಎಲ್ಲಾ ದೇಶಗಳು ಅಮೇರಿಕದ ಕೈ ತಿರುಚುವಿಕೆಗೆ, ಭಯಕ್ಕೆ ಮಣಿಯುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಅಮೇರಿಕದ ಅಧ್ಯಕ್ಷರನ್ನು ವಿಶ್ವ ಸಂಸ್ಥೆಯಲ್ಲಿ ‘ದೆವ್ವ’ ಎಂದು ಕರೆದು, ಆ ದೇಶದ ಸಾಮ್ರಾಜ್ಯಶಾಹಿ ಸೊಕ್ಕಿಗೆ ಸವಾಲು ಹಾಕುವ ದಾರ್ಷ್ಟ್ಯವನ್ನು ವೆನೆಜುವೆಲಾ ತೋರಿದೆ, ಮಾತ್ರವಲ್ಲ ಅದರ ನಾಯಕತ್ವದಲ್ಲಿ ಇಡೀ ಲ್ಯಾಟಿನ್ ಅಮೇರಿಕಾದಲ್ಲಿ, ಅಮೇರಿಕನ್ ಸಾಮ್ರಾಜ್ಯಶಾಹಿ ವಿರೋಧಿ ಸರ್ಕಾರಗಳ ಅಲೆಯೇ ಎದ್ದಿದೆ. ಇಡೀ ಜಗತ್ತಿನ ಬಡವರು ವೆನೆಜುವೆಲದತ್ತ ಆಶಾಭಾವನೆಯಿಂದ ನೋಡುತ್ತಿದ್ದಾರೆ. ಸೋವಿಯತ್ ವಿಭಜನೆ ಮತ್ತು ಪತನದ ನಂತರ ಆರಂಭವಾದ ಒಂದುವರೆ ದಶಕಗಳಲ್ಲಿ ‘ಶಾಂತಿ, ಪ್ರಗತಿ, ಸಮಾನತೆ’ಗಳು ‘ರಿವರ್ಸ್ ಗೇರ್’ನಲ್ಲಿ ಹೋಗುತ್ತಿದ್ದರೆ, ಅದು ಪ್ರಗತಿ, ಸುಧಾರಣೆ, ಕ್ರಾಂತಿ ಎಂದನ್ನಿಸಿಕೊಳ್ಳಲು ಆರಂಭವಾಗಿತ್ತು. ವೆನೆಜುವೆಲಾ ಇದರ ವಿರುದ್ಧ ದಿಕ್ಕಿನಲ್ಲಿ ಚಲಿಸತೊಡಗಿದ್ದು ಎಲ್ಲರಿಗೂ ನಾವು ‘ರಿವರ್ಸ್ ಗೇರ್’ ನಿಂದ ‘ಫಾರ್ವರ್ಡ್ ಗೇರ್’ ಗೆ ಬದಲಾಯಿಸಬೇಕು ಎನಿಸುತ್ತಿದೆ.

ಎರಡನೇ ಹಂತದ ಭೂಸುಧಾರಣೆ

ಕಳೆದ ತಿಂಗಳು ವೆನೆಜುವೆಲಾ ಎರಡನೇ ಹಂತದ ಭೂ ಸುಧಾರಣೆ ಆರಂಭಿಸಿ ಜಗತ್ತಿನಲ್ಲೆಲ್ಲಾ ಸುದ್ದಿ ಮಾಡಿತು. ಕೃಷಿ ಅಥವಾ ಇತರ ಉತ್ಪಾದಕ ಬಳಕೆಯಲ್ಲಿ ಇರದ 16 ಬಾರಿ ಖಾಸಗಿ ಎಸ್ಟೇಟ್‌ಗಳನ್ನು ಸರ್ಕಾರ ವಹಿಸಿಕೊಂಡು ಬಡ ಭೂ ಹೀನರಿಗೆ ಮತ್ತು ಅವರ ಕೃಷಿ ಸಹಕಾರಿಗಳಿಗೆ ಹಂಚಲು ಕಾರ್ಯಕ್ರಮ ಹಾಕಿಕೊಂಡಿದೆ. ಈ ಕ್ರಮದ ಮೂಲಕ 3.3 ಲಕ್ಷ ಹೆಕ್ಟೇರ್‌ಗಳ ಅಧಿಕ ಜಮೀನು ಹಂಚಿಕೆಗೆ ದೊರಕುವಂತಾಗಿದೆ. ಚವೇಝ್ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಸುಮಾರು 20 ಲಕ್ಷ ಹೆಕ್ಟೇರ್ ಜಮೀನನ್ನು ಒಂದುವರೆ ಲಕ್ಷ ಕುಟುಂಬಗಳಿಗೆ ಹಂಚಿದೆ. ಲ್ಯಾಟಿನ್ ಅಮೇರಿಕಾದಲ್ಲೇ ಅತ್ಯಂತ ಹೆಚ್ಚಿನ ಭೂ ಒಡೆತನದ ಕೇಂದ್ರೀಕರಣದ ಹೊಂದಿರುವ ವೆನೆಜುವೆಲಾ ಕೃಷಿ ಉತ್ಪಾದನೆಯಲ್ಲಿ ತೀರಾ ಹಿಂದುಳಿದಿದೆ, ಅದರಲ್ಲೂ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ. ದೇಶದ ಆಹಾರ ಧಾನ್ಯಗಳ ಬೇಡಿಕೆಯ ಶೇ.70 ಆಮದಿನ ಮೇಲೆ ಅವಲಂಬಿಸಿದೆ. ಎರಡು ವರ್ಷಗಳಲ್ಲಿ ‘ಆಹಾರ ಭದ್ರತೆ’ ಮತ್ತು ‘ಆಹಾರ ಸ್ವಾವಲಂಬನೆ’ ಸಾಧಿಸಬೇಕು. ಇದರ ಭಾಗವಾಗಿಯೇ ಈ ಎರಡನೇ ಹಂತದ ಭೂ ಸುಧಾರಣೆ. ಕೃಷಿ ಮತ್ತು ಉತ್ಪಾದಕ ಚಟುವಟಿಕೆಯಲ್ಲಿ ತೊಡಗಿರುವ ಖಾಸಗಿ ಎಸ್ಟೇಟ್‌ಗಳನ್ನು ಸರ್ಕಾರ ಕಿತ್ತುಕೊಳ್ಳುವುದಿಲ್ಲ ಎಂದು ಸರ್ಕಾರ ಘೋಷಿಸಿದೆ. ಇತ್ತೀಚಿನ ದಶಕಗಳಲ್ಲಿ ಜಗತ್ತಿನಲ್ಲೇ ಅತ್ಯಂತ ದೊಡ್ಡ ಭೂ ಸುಧಾರಣೆಯ ಪ್ರಯತ್ನ ಇದು.

ಪುನಃ ರಾಷ್ಟ್ರೀಕರಣದ ಭರಾಟೆ

ಇತ್ತೀಚಿಗೆ ಅಧ್ಯಕ್ಷ ಚವೇಝ ಘೋಷಿಸಿದ ರಾಷ್ಟ್ರೀಕರಣದ ಯೋಜನೆಯನ್ನು 70ರ ದಶಕದ ನಂತರ ಯಾವುದೇ ದೇಶದಲ್ಲಿ ಅತ್ಯಂತ ವ್ಯಾಪಕ ರಾಷ್ಟ್ರೀಕರಣದ ಅಲೆ ಎಂದು ‘ವಾಶಿಂಗ್‌ಟನ್ ಪೋಸ್ಟ್’ ಹೇಳಿದೆ. ಈ ರಾಷ್ಟ್ರೀಕರಣದ ಭರಾಟೆ ಜಗತ್ತಿನ ಷೇರು ಮಾರುಕಟ್ಟೆಯಲ್ಲಿ ನಡುಕ ತಂದಿತ್ತು. ಖಾಸಗಿ ಸೆಂಟ್ರಲ್ ಬ್ಯಾಂಕ್, (1991ರಲ್ಲಿ ಖಾಸಗೀಕರಿಸಲ್ಪಟ್ಟ) ಟೆಲಿಕಾಂ ದೈತ್ಯ ಸಿಎಎನ್‌ಟಿವಿ, ರಾಜಧಾನಿಯ ವಿದ್ಯುತ್ ಕಂಪನಿ ಎಇಎಸ್, ನಾಲ್ಕು ಖಾಸಗಿ ತೈಲ ಪ್ರಾಜೆಕ್ಟ್‌ಗಳು ಸರ್ಕಾರದ ಪುನರ್ ರಾಷ್ಟ್ರೀಕರಣದ ಯೋಜನೆಯಲ್ಲಿ ಸೇರಿವೆ. ಇವೆಲ್ಲವೂ 80 ರ ದಶಕದವರೆಗೆ ರಾಷ್ಟ್ರೀಕೃತವಾಗಿದ್ದು, 90ರ ದಶಕದಲ್ಲಿ ಅವನ್ನು ಖಾಸಗೀಕರಿಸಲಾಗಿತ್ತು. ಖಾಸಗೀಕರಣದ ಅಂಗವಾಗಿ ಅಮೇರಿಕನ್ ಬಹುರಾಷ್ಟ್ರೀಯ ಕಂಪನಿಗಳು ಅವನ್ನು ಮೂರು ಕಾಸಿಗೆ ನುಂಗಿ ಹಾಕಿದ್ದವು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಸಮುದಾಯ ಕೌನ್ಸಿಲ್‌ಗಳು

ಇನ್ನೂರರಿಂದ, ನಾಲ್ಕು ನೂರು ಕುಟುಂಬಗಳ ಸಮುದಾಯಕ್ಕೆ ಸಮುದಾಯ ಕೌನ್ಸಿಲ್‌ಗಳು ಇರುತ್ತವೆ. ಕೌನ್ಸಿಲ್ ಸದಸ್ಯರನ್ನು ವಾಪಸ್ಸು ಕರೆಸುವ ಸಾಧ್ಯತೆ ಇರುತ್ತದೆ. ಇಂತಹ 13 ಸಾವಿರ ಕೌನ್ಸಿಲ್‌ಗಳನ್ನು ಈಗಾಗಲೇ ರಚಿಸಲಾಗಿದೆ. ಆ ಪ್ರದೇಶದ ಸಾಮಾಜಿಕ ಕಾರ್ಯಕ್ರಮ, ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಕೌನ್ಸಿಲ್ ನಿರ್ಧರಿಸುತ್ತದೆ. ಕೌನ್ಸಿಲ್‌ಗಳು ಇಡೀ ಸಮುದಾಯಕ್ಕೆ ಬದ್ಧವಾಗಿರುತ್ತವೆ.

15 ವರ್ಷದ ಎಲ್ಲರೂ ಭಾಗವಹಿಸಬಹುದಾದ ಸಭೆ ಕೌನ್ಸಿಲ್‌ನ್ನು ನಿಯಂತ್ರಿಸುತ್ತದೆ. ಈ ಕೌನ್ಸಿಲ್‌ಗಳು ಕೇರಳದಲ್ಲಿ ‘ಜನತಾ ಯೋಜನೆ’ ಯ ಅಡಿಯಲ್ಲಿ ರಚಿಸಲಾದ ಸ್ಥಳೀಯ ಮಂಡಳಿಗಳಂತೆ ಕೆಲಸ ಮಾಡುತ್ತವೆ. ಇವು ಹೊಸ ವಿಕಾಸವಾಗುತ್ತಿರುವ ಜನತಾ ಪ್ರಭುತ್ವದ ಮೂಲ ರಚನೆಗಳಾಗಿದ್ದು, ಹಳೆಯ ಪ್ರಭುತ್ವದ ಅಧಿಕಾರಶಾಹಿ ಜತೆ ಸಂಘರ್ಷಕ್ಕೆ ಇಳಿದಿವೆ. ಕೇಂದ್ರದಲ್ಲಿ ಮಾತ್ರವಲ್ಲ, ಎಲ್ಲಾ ಹಂತಗಳಲ್ಲಿ ಶ್ರೀಮಂತ ಆಳುವ ವರ್ಗದ ಅಧಿಕಾರಶಾಹಿ ಪ್ರಭುತ್ವವನ್ನು ಕಿತ್ತು ಹಾಕುವ, ಅದಕ್ಕೆ ಬದಲಿ ನಿರ್ಮಿಸುವ ಬದಲಾವಣೆಯ ಪ್ರಕ್ರಿಯೆ ಇದು. ದೇಶವ್ಯಾಪಿಯಾಗಿ ಇಂತಹ ಕಾರ್ಯಕ್ರಮ ಹಾಕಿಕೊಂಡಿರುವುದು ಬಹುಶಃ ಜಗತ್ತಿನಲ್ಲೇ ಇದೇ ಮೊದಲು.

■ ಶರತ್‌ಚಂದ್ರ

ಹೊಸ ಸೋಷಲಿಸ್ಟ್ ಪಾರ್ಟಿ

ಚವೇಝ್ ಸರ್ಕಾರದ ಜೊತೆಗಿರುವ ಆಳುವ ಪಕ್ಷಗಳು ಮತ್ತು ಕ್ರಾಂತಿಯನ್ನು ಬೆಂಬಲಿಸುವ ಪಕ್ಷಗಳು ಹತ್ತಿರ ಬರುತ್ತಿದ್ದು, ಹೊಸ ಸಂಯುಕ್ತ ಸೋಶಲಿಸ್ಟ್ ಪಾರ್ಟಿಯೊಂದನ್ನು ರಚಿಸಲು ನಿರ್ಧರಿಸಿವೆ. ಚವೇಝರ ವೈಯಕ್ತಿಕ ವರ್ಚಸ್ಸಿನ ಬದಲು ಒಂದು ಸುಸಂಘಟಿತ ಪಕ್ಷ ಕ್ರಾಂತಿಯ ಮುಂದಿನ ಹಂತದಲ್ಲಿ ನಿರ್ದೇಶಕ, ನಾಯಕ ಆಗಬೇಕು ಎಂಬುದು ಆಶಯ. ಈ ಪಕ್ಷವನ್ನು ಕೆಳಗಿನಿಂದ ಮೇಲಕ್ಕೆ ಕಟ್ಟಲಾಗುತ್ತಿದೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಿಜಿಸ್ಟರ್ ಮಾಡಲು ಏಪ್ರಿಲ್ ಕೊನೆಯಿಂದ ದೇಶದಾದ್ಯಂತ ಆರು ಸಾವಿರ ‘ಬೂತ್’ಗಳನ್ನು ರಚಿಸಲಾಗಿದೆ. ರಿಜಿಸ್ಟರ್ ಮಾಡುವ ಪ್ರತಿ ಸದಸ್ಯರನ್ನು ಸೇರಿಸಿ ಪ್ರದೇಶ, ಫ್ಯಾಕ್ಟರಿ, ಸಂಸ್ಥೆ (ವಿಶ್ವವಿದ್ಯಾಲಯ ಇತ್ಯಾದಿ)ಗಳ ಅನುಸಾರವಾಗಿ 200 ಸದಸ್ಯರಿರುವ ಪ್ರಾಥಮಿಕ ಶಾಖೆಗಳನ್ನು ರಚಿಸಲಾಗುತ್ತದೆ. ಇಂತಹ ಶಾಖೆಗಳು ಹೊಸ ಪಕ್ಷದ ‘ಸ್ಥಾಪನಾ ಮಹಾಧಿವೇಶನ’ಕ್ಕೆ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತವೆ. ಈಗ ಇರುವ ಪಕ್ಷಗಳ ನಾಯಕರಿಗೆ ಯಾವುದೇ ರೀತಿಯ ‘ಮೀಸಲಾತಿ’ ಇರುವುದಿಲ್ಲ. ಮಹಾಧಿವೇಶನದಲ್ಲಿ ಭಾಗವಹಿಸಲು ಪ್ರಾಥಮಿಕ ಶಾಖೆ ಒಂದರ ಸದಸ್ಯರಾಗಿರುವುದು," ಮತ್ತು ಆ ಶಾಖೆಯಿಂದ ಆಯ್ಕೆಯಾಗುವುದು ಅಗತ್ಯ. ಚವೇಝ ಸಹ ಇಂತಹ ಶಾಖೆ ಒಂದರಿಂದ ಆಯ್ಕೆಯಾಗಬೇಕು. ಸಂಸ್ಥಾಪನಾ ಮಹಾಧಿವೇಶನ ಮೂರು ತಿಂಗಳವರೆಗೆ ನಡೆಯುತ್ತದೆ! ಮಹಾಧಿವೇಶನ ಪಕ್ಷದ ಕಾರ್ಯಕ್ರಮದ ಕರಡನ್ನು ಚರ್ಚಿಸುತ್ತದೆ. ಮಹಾಧಿವೇಶನದಿಂದ ಶಾಖೆಗೆ, ಶಾಖೆಯಲ್ಲಿ ಚರ್ಚೆ, ಶಾಖೆಯಿಂದ ಸ್ಥಳೀಯ ಸಮುದಾಯಕ್ಕೆ ಚರ್ಚೆ ನಡೆದು, ಪುನಃ ಮಹಾಧಿವೇಶನಕ್ಕೆ ಹೀಗೆ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಯುತ್ತದೆ. 16 ಸಾವಿರ ಪಕ್ಷದ ಸಂಘಟಕರು ರಿಜಿಸ್ಟ್ರೇಷನ್ ಪ್ರಕ್ರಿಯೆಗೆ ಪ್ರಚಾರ ಮಾಡುತ್ತಿದ್ದಾರೆ. ಪಕ್ಷವನ್ನು ಕೆಳಗಿನಿಂದ ಕಟ್ಟುವ ಈ ಕೆಲಸ ರಭಸವಾಗಿ ಸಾಗಿದೆ. ಸುಮಾರು 40-50 ಲಕ್ಷ ಸದಸ್ಯರನ್ನು ಹೊಂದುವ ಉದ್ದೇಶ ಹೊಸ ಪಕ್ಷಕ್ಕಿದೆ. ಕೆಳಗಿನಿಂದ ಮೇಲಕ್ಕೆ ಸಾಮೂಹಿಕ ಕ್ರಾಂತಿಕಾರಕ ಪ್ರಜಾಸತ್ತಾತ್ಮಕ ಪಕ್ಷ ಕಟ್ಟುವ ಇದು ಜಗತ್ತಿನಲ್ಲೇ ಅತ್ಯಂತ ವಿಶಿಷ್ಟ ಪ್ರಯತ್ನ.

ಕಾರ್ಮಿಕರ ಕೌನ್ಸಿಲ್‌ಗಳು

ವೆನೆಜುವೆಲಾದಲ್ಲಿ ಹೊಸ ರೀತಿಯ ಟ್ರೇಡ್ ಯೂನಿಯನ್‌ಗಳು ಅಸ್ತಿತ್ವಕ್ಕೆ ಬರುತ್ತಿವೆ. ಚವೇಝ ಸರ್ಕಾರದ ಪೂರ್ಣ ಬೆಂಬಲದಿಂದ ಇವುಗಳನ್ನು ಕಾರ್ಮಿಕರ ಕೌನ್ಸಿಲ್‌ಗಳು ಎಂದು ಕರೆಯಲಾಗುತ್ತದೆ. ಈಗ ಇರುವ ಟ್ರೇಡ್ ಯೂನಿಯನ್‌ಗಳು ಹೊಸ ರೀತಿಯ ಪಾತ್ರಕ್ಕೆ ಬದ್ಧವಾಗುತ್ತಿವೆ. ವರ್ಕ್‌ರ್ಸ್ ಕೌನ್ಸಿಲ್‌ಗಳು ಟ್ರೇಡ್ ಯೂನಿಯನ್‌ಗಳಂತೆ ತಮ್ಮ ಚಟುವಟಿಕೆಗಳಾದ ಕಾರ್ಮಿಕರ ವೇತನ, ಕೆಲಸದ ಪರಿಸ್ಥಿತಿ ಉತ್ತಮಗೊಳಿಸಲು ಹಕ್ಕುಗಳನ್ನು ಕಾಪಾಡುವುದಕ್ಕೇ ಸೀಮಿತವಾಗಿರುವುದಿಲ್ಲ. ಕಾರ್ಖಾನೆಯ ಉತ್ಪಾದನೆಯ ನೇರ ನಿಯಂತ್ರಣ, ನಿರ್ವಹಣೆಯಲ್ಲಿ ಭಾಗವಹಿಸುವುದು ಕೌನ್ಸಿಲ್‌ಗಳ ವಿಶಿಷ್ಟತೆ. ಇಂತಹ ಕೌನ್ಸಿಲ್‌ಗಳು ಮುಚ್ಚಿದ ಫ್ಯಾಕ್ಟರಿಗಳನ್ನು ಪುನಃ ಆರಂಭಿಸಿ ಸ್ವತಃ ಕಾರ್ಮಿಕರೆ ನಡೆಸುವ ಚಳುವಳಿಯ ಭಾಗವಾಗಿ ಆರಂಭವಾಗಿತ್ತು. ಈಗ ಅವನ್ನು ಸರ್ಕಾರಿ ಸ್ವಾಮ್ಯದಲ್ಲಿರುವ ಪುನಃ ರಾಷ್ಟ್ರೀಕರಣಗೊಳ್ಳುತ್ತಿರುವ, ಖಾಸಗಿ ಫ್ಯಾಕ್ಟರಿಗಳಿಗೂ ವಿಸ್ತರಿಸಲಾಗುತ್ತಿದೆ. ಕಾರ್ಮಿಕರಿಗೆ ಬದ್ಧವಾದ ಈ ಕೌನ್ಸಿಲ್‌ಗಳು ಕಾರ್ಮಿಕರ ರಾಜಕೀಯ ಶಿಕ್ಷಣ, ಪ್ರಜ್ಞೆ, ಹೆಚ್ಚಿಸುವ ಮೂಲಕ ರಾಜಕೀಯವಾಗಿ ವೆನೆಜುವೆಲಾಕ್ಕೆ ನಾಯಕತ್ವ ಕೊಡುವ ಪ್ರಕ್ರಿಯೆ ಆರಂಭವಾಗಿದೆ. ಇಂತಹ ಕಾರ್ಮಿಕರ ಕೌನ್ಸಿಲ್‌ಗಳೇ, ಎರಡು ಫ್ಯಾಕ್ಟರಿಗಳ ನಡುವಿನ ವ್ಯಾಪಾರ ವಹಿವಾಟನ್ನು ನಿರ್ಧರಿಸಲಿದ್ದು, ಲಾಭಕ್ಕಿಂತ ಹೆಚ್ಚಾಗಿ ಸಮುದಾಯದ ದೇಶದ ಒಳಿತನ್ನು ಗುರಿಯಾಗಿ ಇಟ್ಟುಕೊಳ್ಳಲಿವೆ. ಇದು ಕಾರ್ಮಿಕರು ಆಧುನಿಕ ಸಮಾಜದ ಪ್ರಮುಖ ನೆಲೆಯಾದ ಕೈಗಾರಿಕಾ ಕ್ಷೇತ್ರದಲ್ಲಿ ನಾಯಕತ್ವ ವಹಿಸುವ ಮೂಲಕ ಸಮಾಜ,ದೇಶದ ನಾಯಕತ್ವ ವಹಿಸುವ ವಿಶಿಷ್ಟ ಪ್ರಯೋಗ ಸಹ.

• ಜಿ.ಎಸ್.ಮಣಿ

ಚಿಲ್ಲರೆ ಮಾರಾಟಕ್ಕೆ ದೊಡ್ಡ ಕಂಪನಿಗಳು

ಇದು ಉದಾರೀಕರಣದ ಹೊಸ ಬೆಳವಣಿಗೆ. ದೊಡ್ಡ ದೊಡ್ಡ ಕಂಪನಿಗಳು ಚಿಲ್ಲರೆ ಮಾರಾಟಕ್ಕೆ ತಮ್ಮ ಮಳಿಗೆಗಳನ್ನು ತೆರೆಯುತ್ತಿವೆ.

ಉದಾಹರಣೆಗೆ ರಿಲಯನ್ಸ್ ಎಂಬ ಭಾರತದ ಬಹುದೊಡ್ಡ ಕಂಪನಿ ತರಕಾರಿ, ಜನಿಸು, ಕಾಳುಕಡಿಗಳನ್ನು ಮಾರುವ ಮಳಿಗೆಗಳನ್ನು ದೇಶದ ಪ್ರಮುಖ ನಗರಗಳಲ್ಲಿ ತೆರೆಯುತ್ತಿದೆ. ಬೆಂಗಳೂರಿನಲ್ಲಿ ಆಗಲೇ 'ರಿಲಯನ್ಸ್ ಫ್ರೆಷ್' ಹೆಸರಿನಲ್ಲಿ ಹನ್ನೊಂದು ಮಳಿಗೆಗಳು ಬಂದಿವೆ. ಇಲ್ಲಿ ತರಕಾರಿ, ಹಣ್ಣು, ಕಾಳುಕಡಿಗಳನ್ನು ಮಾರುತ್ತಿವೆ. ಇದಲ್ಲದೆ ಹೆರಿಟೇಜ್‌ನವರ ಹಲವು ಇಂತಹ ಮಳಿಗೆಗಳನ್ನು ರಿಲಯನ್ಸ್‌ನಲ್ಲಿ ಇನ್ನು ಹಲವು ಮಳಿಗೆಗಳು ಬರಲಿವೆಯಂತೆ.

ಈ ಕಂಪನಿಗಳು ತರಕಾರಿ ಹಣ್ಣು ಇತ್ಯಾದಿ ಮಾರಬಾರದೆ ಎಂದು ನೀವು ಕೇಳಬಹುದು. ಇಂತಹ ದೊಡ್ಡ ಕಂಪನಿಗಳು ಚಿಲ್ಲರೆ ಮಾರಾಟ ಮಾಡಬಾರದೆಂದೇನೂ ಇಲ್ಲ. ಆದರೆ ಇವರು ಇಂತಹ ಮಾರಾಟಕ್ಕೆ ಇಳಿಯುವ ಅವಶ್ಯಕತೆ ಇದೆಯೇ ಹಾಗೂ ಇದರ ಪರಿಣಾಮ ಏನು ಎಂಬುದು ಪ್ರಶ್ನೆಗಳು.

ಉದಾರೀಕರಣದ ಪರ ವಾದಿಗಳು ಈ ಕಂಪನಿಗಳ ಮೂಲಕ ಉತ್ತಮ ಗುಣಮಟ್ಟದ ವಸ್ತುಗಳು ಕಡಿಮೆ ಬೆಲೆಯಲ್ಲಿ ಜನರಿಗೆ ದೊರೆಯುತ್ತವೆ. ಆದ್ದರಿಂದ ಇವು ಸ್ವಾಗತಾರ್ಹ ಎಂದು ಹೇಳುತ್ತಾರೆ. ರಿಲಯನ್ಸ್ ಆಗಲೇ ಮೈಸೂರು, ತುಮಕೂರು, ಕೋಲಾರ, ಚಿಂತಾಮಣಿ, ಮಂಡ್ಯಗಳಂತಹ ಕಡೆ ರೈತರಿಂದ ಈ ಸರಕುಗಳನ್ನು ಕೊಳ್ಳುವ ಪಡೆಗಳನ್ನು ರಚಿಸಿದ್ದು ಈ ಮೂಲಕ ಏಳು ಸಾವಿರ ಜನರಿಗೆ ಉದ್ಯೋಗ ನೀಡಿದೆಯಂತೆ.

ಒಳ್ಳೆಯದಲ್ಲವೇ?

ಜನರಿಗೆ ಉತ್ತಮ ವಸ್ತುಗಳು, ರೈತರಿಗೆ ಉತ್ತಮ ಬೆಲೆ ಉದ್ಯೋಗ ಬಹಳ ಒಳ್ಳೆಯದಲ್ಲವೆ! ಆದರೆ ಇಂತಹ ಕಂಪನಿಗಳು ಚಿಲ್ಲರೆ ಮಾರಾಟ ಕ್ಷೇತ್ರಕ್ಕೆ ಬರುತ್ತಿರುವುದರಿಂದ ಹಲವು ಜನ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ ಅಥವಾ ಅರೆ ಉದ್ಯೋಗಿಗಳಾಗುತ್ತಾರೆ. ಬೀದಿಯಲ್ಲಿ ತರಕಾರಿ ಮಾರುವವರು, ಹಲವು ದಿನಸಿ ಅಂಗಡಿಗಳು ಇಂತಹ ಪರಿಣಾಮಗಳನ್ನು ಅನುಭವಿಸುವಂತಾಗುತ್ತದೆ. ಈ ಕಂಪನಿಗಳು ನೀಡುವ ಉದ್ಯೋಗಗಳಿಗಿಂತ ಉದ್ಯೋಗ ಕಳೆದುಕೊಳ್ಳುವ ಜನರ ಸಂಖ್ಯೆ ಬಹಳ ದೊಡ್ಡದಾಗಿರುತ್ತದೆ. ಮನೆ ಮನೆಗೆ ತರಕಾರಿ ತಂದು ಮಾರುವವರ ಗತಿ? ಬೀದಿ ಪಾಲು.

ಏಕಸ್ವಾಮ್ಯದ ಅಪಾಯ

ರೈತರಿಗೆ ಮಾರಾಟ ಸಮಸ್ಯೆ ಕೆಲವು ದಿನ ಕಡಿಮೆ ಆಗಬಹುದಾದರೂ ಕೆಲವೇ ದಿನಗಳಲ್ಲಿ ಈ ಸಮಸ್ಯೆ ಬಹಳ ದೊಡ್ಡದಾಗಿ ಬಿಡುತ್ತದೆ. ಈ ಕಂಪನಿಗಳಿಗೆ ಮಾರುವ ರೂಢಿ ಮಾಡಿಕೊಂಡ ಮೇಲೆ ಈ ಕಂಪನಿಗಳು ಏಕಸ್ವಾಮ್ಯ ಬೆಳೆಸುವ ಪ್ರವೃತ್ತಿ ತೋರುತ್ತವೆ. ಹಾಗಾದಾಗ ರೈತರಿಗೆ ಈ ಕಂಪನಿಗಳಿಗೆ ಮಾರದೇ ಬೇರೆ ದಾರಿಯೇ ಕಾಣದಂತಾಗುತ್ತದೆ. ಅಲ್ಲದೆ ಈ ಕಂಪನಿಗಳು ನಿಧಾನಕ್ಕೆ ರೈತನ ಮೇಲಿನ ಹಿಡಿತವನ್ನು ಹಲವು ರೀತಿಯಲ್ಲಿ ಬಿಗಿಗೊಳಿಸುತ್ತವೆ.

ಮಧ್ಯವರ್ತಿಗಳನ್ನು ಕಡಿಮೆ ಮಾಡುವ ಮೂಲಕ ತಾವೇ ದೊಡ್ಡ ಲಾಭ ಮಾಡತೊಡಗುತ್ತವೆ. ಅವು ಗುತ್ತೇದಾರಿಗಳಾಗತೊಡಗಿದ ಮೇಲೆ ಗ್ರಾಹಕರಿಗೂ ಕಡಿಮೆ ಬೆಲೆಯ ಅನುಕೂಲಗಳಿರುವುದಿಲ್ಲ.

ಅಲ್ಲದೆ ಈ ಕಂಪನಿಗಳ ನೌಕರರಿಗೆ ಅತಿ ಕಡಿಮೆ ಸಂಬಳಕ್ಕೆ ಕೆಲಸ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಗ್ರಾಹಕ ಸೇವೆಯ ಹೆಸರಿನಲ್ಲಿ ಈ ನೌಕರರಿಗೆ ಕಡಿಮೆ ಸಂಬಳದ /ಭತ್ಯೆಯ ಸೇವೆಯಾಗುತ್ತದೆ.

ಬೀದಿ ವ್ಯಾಪಾರಿಗಳು ಬೀದಿಗೆ

ಬೆಂಗಳೂರಿನಂತಹ ನಗರಗಳ ರೂಪವೇ ಈ ಕಂಪನಿಗಳಿಂದಾಗಿ ಬದಲಾಗುತ್ತದೆ. ಎಲ್ಲಿ ನೋಡಿದರಲ್ಲಿ ದೊಡ್ಡ ದೊಡ್ಡ ಮಳಿಗೆಗಳು ಅವುಗಳ ಜಾಹೀರಾತುಗಳು ಪ್ರಚಾರಗಳು ರಸ್ತೆ ಬದಿಯಲ್ಲಿ ಮಾರಾಟ ಮಾಡುತ್ತಿದ್ದವರೆಲ್ಲ ಬೀದಿಪಾಲು. ಈ ದೊಡ್ಡ ದೊಡ್ಡ ಮಳಿಗೆಗಳಿಗೆ ಗ್ರಾಹಕರಾಗಿ ಹೋಗುವವರ ಜೇಬುಗಳಿಗೆ ದೊಡ್ಡ ದೊಡ್ಡ ಕತ್ತರಿಗಳು. ಇಂತಹ ಪರಿಸ್ಥಿತಿ ಆಗಲೇ ಬಂದಿದೆ.



ರಿಲಯನ್ಸ್‌ನವರ ತರಕಾರಿ ಮಳಿಗೆ

ಇದಲ್ಲದೆ ಚಿಲ್ಲರೆ ವ್ಯಾಪಾರಕ್ಕೆ ವಿದೇಶಿ ಬಂಡವಾಳದ ಹೆಸರಿನಲ್ಲಿ ಅಮೇರಿಕದ ವಾಲ್ ಮಾರ್ಟ್ ಎಂಬ ಬಹುರಾಷ್ಟ್ರೀಯ ಕಂಪನಿ ಭಾರತದ ಭಾರತಿ ಕಂಪನಿ ಜೊತೆ ಸೇರಿ ಭಾರತದಲ್ಲಿ ತನ್ನ ಮಳಿಗೆಗಳನ್ನು ತೆರೆಯಲಿದೆಯಂತೆ.

ವಾಲ್‌ಮಾರ್ಟ್ 'ಖ್ಯಾತಿ'

ಈ ವಾಲ್‌ಮಾರ್ಟ್ ಅಮೇರಿಕಾದಂತಹ ದೇಶದಲ್ಲೇ ನೌಕರರಿಗೆ ಅತಿ ಕಡಿಮೆ ಸಂಬಳ ಸೇವಾ ಸೌಲಭ್ಯಗಳಿಗೆ ಕುಖ್ಯಾತವಾದ ಕಂಪನಿ. ಇನ್ನು ಅದು ಭಾರತಕ್ಕೆ ಬಂದರೆ ಕೇಳಬೇಕೇ?

ಭಾರತದ ಇಂದಿನ ಸಂದರ್ಭದಲ್ಲಿ ಇನ್ನೂ ಹಲವು ಪ್ರಶ್ನೆಗಳಿವೆ. ಭಾರತದ ಕೃಷಿ ಇಂದಿಗೂ ಹಿಂದುಳಿದಿದೆ. ಅಪಾರ ಲಾಭ ಬಾಚುವ ಈ ಕಂಪನಿಗಳು ಭಾರತದ ಕೃಷಿ ಅಭಿವೃದ್ಧಿಗೆ ಏನಾದರೂ ಕೆಲಸ ಮಾಡಬಹುದಲ್ಲವೇ? ಮಣ್ಣು, ನೀರು, ಬೀಜ ಇತ್ಯಾದಿ ನಿರ್ವಹಣೆಗಳಲ್ಲಿ ಸಂಶೋಧನೆ ಮಾಡುವ ಮತ್ತು ಉತ್ತಮ ತಂತ್ರಜ್ಞಾನ ಅಳವಡಿಸಿಕೊಳ್ಳುವ ಅವಶ್ಯಕತೆ ಇದ್ದೇ ಇದೆ. ಜನರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಸಬೇಕಾದ ಅವಶ್ಯಕತೆ ಇದೆ. ಬಡತನ ಹೋಗಲಾಡಿಸಬೇಕಾದ ಸಮಸ್ಯೆ ಇದೆ. ಈ ಎಲ್ಲ ಕ್ಷೇತ್ರಗಳಲ್ಲಿ ಈ ಕಂಪನಿಗಳು ಕೆಲಸ ಮಾಡತೊಡಗಿದರೆ ನಿಜಕ್ಕೂ ಸಾಮಾಜಿಕ ಜವಾಬ್ದಾರಿಯನ್ನು ಅವು ಮೆರೆದಂತಾಗುತ್ತದೆ. ಈ ಕಂಪನಿಗಳು ಬರೀ ಲಾಭಕ್ಕಾಗಿ ಈ ಕ್ಷೇತ್ರಗಳಿಗೆ ಬರುತ್ತಿವೆ. ಲಾಭವೊಂದೇ ಅವುಗಳ ಉದ್ದೇಶ.

ಇದು ಉದಾರೀಕರಣದ ಬಹುಮುಖ್ಯ ಉದ್ದೇಶ. ಉಳ್ಳವರನ್ನು ಶ್ರೀಮಂತಗೊಳಿಸುವುದು ಬಡತನವನ್ನು ಹೆಚ್ಚಿಸುವುದು ನಿರುದ್ಯೋಗ ಹೆಚ್ಚಿಸುವುದು ಬಡತನದ ಉದಾರೀಕರಣ ಎನ್ನೋಣವೇ?

ಬಿಜೆಪಿಗೆ ಮುಖ್ಯಮಂತ್ರಿ ಸ್ಥಾನ.........

ಪುಟ 8 ರಿಂದ

ತಿಕ್ಕಿದರೆ ಕರ್ನಾಟಕದ ವಾರಪತ್ರಿಕೆಗಳ ದಿನಪತ್ರಿಕೆಗಳ ಬರಹಗಳು ಮುಕ್ಕಾಲು ಮೂರು ವೀಸಾ ಪಾಲು ಮಣ್ಣು ಮುಕ್ಕುತ್ತವೆ.

ಪ್ರಾದೇಶಿಕ ಪಕ್ಷಗಳ ಸ್ವರೂಪ ಮತ್ತು ಪಾತ್ರ

ಭಾರತದ ಸ್ವಾತಂತ್ರ್ಯನಂತರದ ಎರಡು ದಶಕಗಳಲ್ಲಿ ಕಾಂಗ್ರೆಸ್ ಭಾರತದ ಎಲ್ಲ ಶೋಷಕ ವರ್ಗವನ್ನು ಎಲ್ಲರ ರಾಜ್ಯಗಳ ಶೋಷಕವರ್ಗವನ್ನು ಪ್ರತಿನಿಧಿಸುವ ಪಕ್ಷವಾಗಿತ್ತು. ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿದ ಸಂದರ್ಭದಲ್ಲಿ ಭಾರತದ ಜನಸಾಮಾನ್ಯರೂ ಸೇರಿದಂತೆ ವಿವಿಧ ವರ್ಗಗಳನ್ನು ಅದು ಪ್ರತಿನಿಧಿಸಿದ್ದರಿಂದಾಗಿ ಸ್ವಾತಂತ್ರಾನಂತರವೂ ತಾನೇ ಜನಸಾಮಾನ್ಯರ ಹಿತರಕ್ಷಕನೆಂದು ಬಿಂಬಿಸಿಕೊಳ್ಳಲು ಸಾಧ್ಯವಾಯಿತು. ಕಾರ್ಮಿಕ ವರ್ಗದ ಪಕ್ಷವಾದ ಕಮ್ಯೂನಿಸ್ಟ್ ಪಕ್ಷ ಮಾತ್ರವೇ ಆರಂಭದಿಂದಲೂ ಕಾಂಗ್ರೆಸ್ ಪಕ್ಷದ ಶೋಷಣೆ-ಸ್ವರೂಪ ಭಾರತದ ದೊಡ್ಡ ಬಂಡವಾಳಿಗರ ಹಿಡಿತದಲ್ಲಿ ಭಾರತದ ವಿವಿಧ ರಾಜ್ಯಗಳ ಭೂಮಾಲಕರು, ಬಂಡವಾಳಗಾರರ ಕೂಟ ಎಂಬುದರ ಬಗ್ಗೆ ಜನರಿಗೆ ಅರಿವು ಮೂಡಿಸಲು ಪ್ರಯತ್ನಿಸಿತು. 1967ರ ಮಹಾ ಚುನಾವಣೆಯ ವೇಳೆಗೆ ಭಾರತದ ಜನಸಾಮಾನ್ಯರನೇಕರಿಗೆ ಕಾಂಗ್ರೆಸ್ ಪಕ್ಷ ಒಂದು ಜನವಿರೋಧಿ ಪಕ್ಷ ಎಂದು ಅರ್ಥವಾಯಿತು. ಜನರ ಅತೃಪ್ತಿ, ಅಸಮಾಧಾನಗಳ ತೀವ್ರತೆಯನ್ನು ಮನಗಂಡ ಅನೇಕ ರಾಜ್ಯಗಳ ಬಂಡವಾಳಶಾಹಿಗಳು ತಮ್ಮ ರಾಜ್ಯಗಳ ಕೆಲ ಭೂಮಾಲಕ ವಿಭಾಗಗಳನ್ನು ಜೊತೆಗೂಡಿಸಿಕೊಂಡು ಕಾಂಗ್ರೆಸ್ಸಿನಿಂದ ಸಿಡಿದು ಹೊರಬರಲು ಈ ಅವಕಾಶವನ್ನು ಬಳಸಿಕೊಂಡವು. ಕಾಂಗ್ರೆಸ್ 8 ರಾಜ್ಯಗಳಲ್ಲಿ ತೀವ್ರ ಸೋಲನ್ನುಂಡಿತು. ತಮಿಳುನಾಡಿನಲ್ಲಿ ಅಂದಿನಿಂದ ಇಂದಿನವರೆಗೂ ಪ್ರಾದೇಶಿಕ ಪಕ್ಷಗಳ ಆಳ್ವಿಕೆಯಿಂದ ಸಾಗಿದೆ. ಇದು ರಾಷ್ಟ್ರಮಟ್ಟದಲ್ಲಿಯೇ ಕಾಂಗ್ರೆಸ್ ವಿಭಜನೆಗೆ ಕಾರಣವಾಯಿತು. ಕಾಂಗ್ರೆಸ್ ಮತ್ತೆ 'ಗರೀಬೀ ಹಟಾವೋ' ಘೋಷಣೆಯೊಂದಿಗೆ ರಾಷ್ಟ್ರವ್ಯಾಪಿ ಪಕ್ಷವಾಯಿತೆಂದು ಭಾವಿಸುವ ವೇಳೆಗೆ ಮತ್ತೆ ಅನೇಕ ಹಂತಗಳನ್ನು ಹೌದು 1983ರ ವೇಳೆಗೆ ಅನೇಕ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ರೂಪುಗೊಂಡವು. ಇದು ಕಾಂಗ್ರೆಸ್ ಅನ್ನು ದುರ್ಬಲವಾಗಿಸಿತು. ಕೇಂದ್ರದಲ್ಲಿ ಹಾಗೂ ಸಮ್ಮಿಶ್ರ ಸರ್ಕಾರಗಳ ಪರಂಪರೆಗೆ ನಾಂದಿ ಹಾಡಿತು.

ಜೆಡಿ(ಎಸ್) ನ ಸಂದರ್ಭ ಸಾಧಕತನದ ಮೂಲ ದೇವೇಗೌಡರಾಗಲಿ ಅವರ ಕುಟುಂಬ ರಾಜಕಾರಣವಾಗಲಿಲ್ಲ. ಕಾಂಗ್ರೆಸ್‌ನ ಕುಟುಂಬ ರಾಜಕಾರಣವನ್ನು ಟೀಕಿಸುತ್ತಲೇ ಅಸ್ತಿತ್ವಕ್ಕೆ ಬಂದ ಪ್ರಾದೇಶಿಕ ಪಕ್ಷಗಳು. ಇಂದು ಕುಟುಂಬ ರಾಜಕಾರಣದ ಆಗರಗಳೇ ಆಗಿವೆ. ಭ್ರಷ್ಟಾಚಾರದ ಕೂಸುಗಳಾಗಿವೆ ಎಂಬುದು ಸರ್ವ ವಿದಿತ. ಆದರೆ ಪ್ರಾದೇಶಿಕ ಪಕ್ಷಗಳ ಸಂದರ್ಭ ಸಾಧಕತನದ ಮೂಲ ಕುಟುಂಬ ರಾಜಕಾರಣವಲ್ಲ ಬದಲಾಗಿ ಆ ಪಕ್ಷಗಳ ಶೋಷಕ ಸ್ವರೂಪಕ್ಕೆ ಅನುಗುಣವಾದ ಆ ವರ್ಗಗಳಿಗೆ ಲಾಭ ತಂದುಕೊಡುವ, ಜನ ವಿರೋಧಿ ನೀತಿಗಳೇ ಕಾರಣ ಎಂಬುದನ್ನು ಪುನರುಚ್ಚರಿಸಬೇಕಾಗಿದೆ.

ಕಾಂಗ್ರೆಸ್/ಬಿಜೆಪಿಗಳ ಆರ್ಥಿಕ ನೀತಿಗಳು, ಪ್ರಾದೇಶಿಕ ಪಕ್ಷಗಳು ಆಡಳಿತ ನಡೆಸುವ ರಾಜ್ಯ ಸರ್ಕಾರಗಳ ಆರ್ಥಿಕ ನೀತಿಗಳ ಪ್ರಬಲ ಹೋರಾಟ ಆ ಮೂಲಕ ಪ್ರಾದೇಶಿಕ ಪಕ್ಷಗಳು ತಮ್ಮ ಆರ್ಥಿಕ ನೀತಿಗಳನ್ನು ಬದಲಾಯಿಸಿ ಕೊಳ್ಳುವ ಒತ್ತಡ ತರುವುದೇ ಈ ಸಂದರ್ಭ ಸಾಧಕವನ್ನು ನಿವಾರಿಸುವ ಮಾರ್ಗ. ಪ್ರಾದೇಶಿಕ ಪಕ್ಷಗಳು ತಮ್ಮ ಆರ್ಥಿಕ ನೀತಿಗಳನ್ನು ಬದಲಾಯಿಸಿಕೊಳ್ಳುವುದು ಎಂದರೆ ಅದು ಪ್ರಾದೇಶಿಕ ಪಕ್ಷಗಳ ಸ್ವರೂಪವನ್ನೇ ಬದಲಾಯಿಸುವುದು ಎಂದೇ ಅರ್ಥ. ಅಂದರೆ ರಾಜಕೀಯ ವಿಘಟನೆಯ ಪುನರ್ ಸಂಘಟನೆಯ ರಾಜಕೀಯ ಧ್ರುವೀಕರಣ ಹೋರಾಟ.

ಪ್ರಾದೇಶಿಕ ಪಕ್ಷವನ್ನು ಗುಳುಂ ಮಾಡುವ ಯತ್ನ:

ಪ್ರಾದೇಶಿಕ ಪಕ್ಷಗಳ ಸ್ವರೂಪವನ್ನು ಜನಪರವಾಗಿ ಬದಲಾಯಿಸಬೇಕೆಂದು ಜನ ಸಾಮಾನ್ಯರು, ಪ್ರಗತಿಪರರು ಬಯಸುವಾಗಲೇ ಅದಕ್ಕಾಗಿ ಒತ್ತಡ ಹೇರುವಾಗಲೇ ವಿರುದ್ಧ ದಿಕ್ಕಿನಲ್ಲಿಯೂ ಹೆಚ್ಚು ತೀವ್ರತೆಯಿಂದ ನಡೆಯುತ್ತಿವೆ. ಅಖಿಲ ಭಾರತ ಶೋಷಿತ ಪಕ್ಷಗಳಿಂದ ಭಾರತದ ದೊಡ್ಡ ಬಂಡವಾಳಶಾಹಿಗಳ ಹಿಡಿತದಲ್ಲಿರುವ ಕಾಂಗ್ರೆಸ್ ಮತ್ತು ಬಿಜೆಪಿಗಳು ಪ್ರಾದೇಶಿಕ ಪಕ್ಷಗಳನ್ನು ತಮ್ಮ ಜೊತೆಗೂಡಿಸಿಕೊಂಡು ಕೂಟಗಳನ್ನು ರಚಿಸುವಾಗಲೇ ಪತ್ರಿಕೆಗಳು ಪ್ರಚಾರ ಮಾಧ್ಯಮಗಳ ಮೇಲಿನ ಹಿಡಿತವನ್ನು ಬಳಸಿಕೊಂಡು ಒಂದು ಕಡೆ ಪ್ರಾದೇಶಿಕ ಪಕ್ಷಗಳ ಮೇಲೆ ವ್ಯಾಪಕ ಧಾಳಿಯನ್ನೆಸಗುತ್ತವೆ. ಮತ್ತೊಂದುಕಡೆ ಕೇಂದ್ರ ಸರ್ಕಾರದ ಮೇಲಿನ ಹಿಡಿತ ಪ್ರಚಾರ ಮಾಧ್ಯಮ ಮೇಲಿನ ಹಿಡಿತವನ್ನು ಬಳಸಿಕೊಂಡು ಪ್ರಾದೇಶಿಕ ಪಕ್ಷಗಳ ಹಿಂದಿನ ಜನ ಬೆಂಬಲವನ್ನು ಕಸಿದುಕೊಳ್ಳಲು ತೀವ್ರ ಪ್ರಯತ್ನ ಮಾಡುತ್ತವೆ. ಪ್ರಾದೇಶಿಕ ಪಕ್ಷಗಳ ನಾಯಕರನ್ನು ಅಪಹಾಸ್ಯ ಮಾಡುತ್ತಾ, ತುಚ್ಛವಾಗಿ ಪರಿಗಣಿಸುತ್ತಾ ಅವರನ್ನು ಖಳನಾಯಕರನ್ನಾಗಿ ವಿದೂಷಕರನ್ನಾಗಿ ಬಿಂಬಿಸುವುದು ನಮಗೆ ಚಿರಪರಿಚಿತ (ಉದಾ: ಲಾಲೂಪ್ರಸಾದ್ ಯಾದವ್) ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ದೇಶ ಮಟ್ಟದಲ್ಲಿ ಮಾಡುವ ಅಪಾರ ಭ್ರಷ್ಟಾಚಾರವನ್ನು ಮುಚ್ಚಿಟ್ಟು ಇದೇ ಪಕ್ಷಗಳ ರಾಜ್ಯ ಸರ್ಕಾರಗಳ ನಾಯಕರ ಭ್ರಷ್ಟಾಚಾರಗಳನ್ನು ಹೆಚ್ಚೇನೂ ಬಯಲಿಗೆಳೆಯದೆ ಪತ್ರಿಕೆಗಳು ಮಾಧ್ಯಮಗಳು ಪ್ರಾದೇಶಿಕ ಪಕ್ಷಗಳ ಜನ ಬೆಂಬಲವನ್ನು ಅದರ ನಾಯಕರ ನೈತಿಕ ಸ್ಥೈರ್ಯವನ್ನು ಕುಗ್ಗಿಸುತ್ತವೆ.

ಅಂತಹ ದುರ್ಬಲಕ್ಷಣಗಳನ್ನು ನೋಡಿ ಆ ಪಕ್ಷಗಳನ್ನು ಒಡೆಯಲು, ನಾಶ ಮಾಡಲು, ನುಂಗಿ ಹಾಕಲು ಪ್ರಯತ್ನಿಸುತ್ತವೆ. ಆ ಮೂಲಕ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಬಿಜೆಪಿ ಹೊರತಾದ ಮೂರನೇ ಶಕ್ತಿಯೊಂದು ರೂಪುಗೊಳ್ಳಲು ಅವಕಾಶವೇ ಸಿಗಬಾರದೆಂದು ಅವುಗಳ ಪ್ರಯತ್ನ. ರಾಜ್ಯದ ಜನತಾಪಕ್ಷದಲ್ಲಿ ಅನೇಕ ಒಡಕುಗಳು ರಾಮಕೃಷ್ಣಹೆಗಡೆ, ಜೆ.ಹೆಚ್.ಪಟೇಲ್ ಬಿಜೆಪಿಯ ಜೊತೆ ಸಾಗಿದ್ದು ಮುಂದೆ ಇತ್ತೀಚಿನ ಸಿದ್ಧಾರಾಮಯ್ಯನವರ ಗುಂಪು ಸೇರಿ ಅನೇಕರು ತಂಡ ತಂಡವಾಗಿ ಕಾಂಗ್ರೆಸ್ ಸೇರಿಕೊಂಡಿದ್ದು ಇವೆಲ್ಲವೂ ಇದೇ ಪ್ರಕ್ರಿಯೆಯ ವಿವಿಧ ರೂಪಗಳು.

ದೊಡ್ಡ ಬಂಡವಾಳಶಾಹಿ ಮತ್ತು ವಿವಿಧ ರಾಜ್ಯಗಳ ಬಂಡವಾಳಶಾಹಿಗಳ ವೈರುಧ್ಯವೇ ಕಾಂಗ್ರೆಸ್ ಒಡೆದು ಪ್ರಾದೇಶಿಕ ಪಕ್ಷಗಳಾಗಲು ಕಾರಣ ಹಾಗೆಯೇ ಅವುಗಳ ನಡುವಳ ಮೈತ್ರಿ, ಸಂಘರ್ಷ ನುಂಗುವಿಕೆಗಳು, ಇದೇ ಪ್ರಕ್ರಿಯೆ ಮುಂದುವರಿಕೆ.

ಆದ್ದರಿಂದ ದೇವೇಗೌಡರು ಸೋನಿಯಾ ಗಾಂಧೀಯವರ ಭೇಟಿ ಇತ್ಯಾದಿ ಮಾತುಗಳು ಈ ಹಿನ್ನೆಲೆಯಿಂದ ಉದ್ಭವಿಸಿದುವೇ ಹೊರತು ದೇವೇಗೌಡರ ವೈಯಕ್ತಿಕ ಒಲವು, ನಿಲುವುಗಳಲ್ಲ. ಇಬ್ಬರೂ ಭಾರತ ಎರಡು ಬಂಡವಾಳಶಾಹಿ ವರ್ಗಗಳ ಪ್ರತಿನಿಧಿಗಳು, ಹೀಗಾಗಿ ದೇವೇಗೌಡರನ್ನು ವೈಯಕ್ತಿಕವಾಗಿ ದೂಷಿಸುವುದು, ಟೀಕಿಸುವುದು ಈ ಅಖಿಲ ಭಾರತ ಕ್ರಿಯೆಯನ್ನು, ವರ್ಗ ವೈರುಧ್ಯಗಳನ್ನು ಮನಗಾಣದೆ ಕೇವಲ ಕರ್ನಾಟಕವನ್ನಷ್ಟೆ ಪರಿಗಣಿಸಿ ವ್ಯಕ್ತಿ ನಿಷ್ಠನಾಗಿ ಚಿಂತಿಸುವ ಪರಿಯಾಗಿದೆ. ಈ ಮಿತಿಗಳನ್ನು ಮೀರಿದಾಗ ಮಾತ್ರ ಸತ್ಯ ಗೋಚರಿಸಲು ಸಾಧ್ಯ.

ಇನ್ನು ಜೆಡಿ(ಎಸ್) ಬಿಜೆಪಿಗೆ ಅಧಿಕಾರ ಹಸ್ತಾಂತರಿಸುವುದೇ ಎಂಬ ಪ್ರಶ್ನೆಗೆ ರಾಜ್ಯದ ಹಾಗೂ ದೇಶದ ಹಿತಿದೃಷ್ಟಿಯಿಂದ ಹಸ್ತಾಂತರಿಸಬಾರದು ಎಂಬುದು ಪ್ರಗತಿಪರ ಶಕ್ತಿಗಳೆಲ್ಲರ ಬಯಕೆ. ಮತ್ತೆ ಚುನಾವಣೆ ಶಿಫಾರಸ್ಸು ಮಾಡಿ, ಜನತೆಯನ್ನು ಎದುರಿಸಲು ಜೆಡಿ(ಎಸ್) ಹಿಂಜರಿಯುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸಿದೆ. ಅಧಿಕಾರವನ್ನು ಹಸ್ತಾಂತರಿಸದಿರುವುದು ಜೆಡಿ(ಎಸ್)ನ ಹಿತದೃಷ್ಟಿಯಿಂದಲೂ ಒಳ್ಳೆಯದು. ಆ ದಿಶೆಯಲ್ಲಿಯೇ ರಾಜಕಾರಣ ಸಾಗುತ್ತಿರುವಂತಿದೆ ಕಾದು ನೋಡೋಣ?

ಸೀಮೆಗಿಲ್ಲದ ಮದುವೆಯೂ, ಎಗ್ಗಿಲ್ಲದ ಮಾಧ್ಯಮವೂ


ಮೊಬೈಲ್ ಫೋನ್ ರಿಂಗಣಿಸಿತು. ಅದಾರು ಎಂದು ನೋಡಲಾಗಿ ಅದು ಜಿ.ಕೆ. ಮಾಸ್ತರರ ಕರೆ. ಕರೆಯೆಂದರೆ ಬರೀ ಕರೆಯಲ್ಲ, ಎಷ್ಟೋ ಸಲ ಅದು ಬರೆ ಎಂಬುದೇ ಖರೆ! 'ರೀ ಗುರುಶಾಂತ್, ಏನ್ ಮಾಡ್ತಾ ಇದ್ದೀರ್ರೀ? 'ನಿಮ್ಮೊಂದಿಗೆ ಮಾತನಾಡುತ್ತಿದ್ದೇನಲ್ಲ' 'ಅದು ಗೊತ್ತೂರಿ ಶನಿವಾರ ಸಂಜೆ ಏನು?' ಗುರುಗಳು ಗತ್ತಿನಿಂದ ಘಟ್ಟಿಸುವ ಸ್ವರದಲ್ಲಿ ಮಾತನಾಡುವುದು ಕೇಳಿದಾಗ 'ಬಹುಶಃ ನಿನ್ನ ತಾನೇ ಯಾವುದೇ ಸಿನಿಮಾ ಅಥವಾ ಧಾರವಾಹಿ ಶೂಟಿಂಗ್ ಮುಗಿಸಿಬಂದಿರಬೇಕು ಎನ್ನಿಸಿತು. 'ಸಾರ್' ಎಂದಾಗ, ನೋಡ್ರೀ ಶನಿವಾರ ಸಂಜೆ ನನ್ನ ಪುಸ್ತಕದ ಬಿಡುಗಡೆ ಸಮಾರಂಭ. ಅಲ್ಲಿ ನೀವಿಲ್ಲದಿದ್ದರೆ ಈ ಭೂಮಿ ಮೇಲೆ ಇರೋದಿಲ್ಲ'... ಗುರುಗಳು ಒಳ್ಳೇ ಮೂಡ್‌ನಲ್ಲಿದ್ದಾರೆ ಎನ್ನಿಸಿತು 'ಆಗಲಿ' ಎಂದೆ.

"ನೋಡ್ರೀ ಗುರುಶಾಂತ್ ಇನ್ನೂ ಮೇಲೆ ನೀವು ಘೋಷಣೆ ಕೂಗಬೇಕಾದ್ದಿಲ್ಲ. ಹೋರಾಟ ಮಾಡಬೇಕಾಗಿಲ್ಲ... 'ನೋಡ್ರೀ ನಿರುದ್ಯೋಗ ಇನ್ನಿರುವುದಿಲ್ಲ, ರೇಷನ್ ಕಾರ್ಡ್ ರೇಷನ್ ಅಂತಾ ಚಿಂತಿಸಬೇಕಿಲ್ಲ'. 'ಅದ್ಯಾಕೆ ಸಾರ್' ಎಂದೆ, ನೋಡ್ರೀ ಅಭಿಷೇಕ್ ಬಚ್ಚನ್ ಐಶ್ವರ್ಯರೈಳನ್ನು ಮದುವೆಯಾಗುತ್ತಿದ್ದಾನೆ. ಆಹಾ! ಎಂತಹ ಸಂಭ್ರಮ, ಏನ್ ಸಮಾಚಾರ, ಈ ದೇಶದ ಸಮಸ್ಯೆಗಳೆಲ್ಲಾ, ಮಂಗಮಾಯ! ನೋಡ್ತಿದ್ದಿರಲ್ಲಾ, ಪೇಪರ್‌ಗಳಲ್ಲಿ ಟಿ.ವಿ.ಯಲ್ಲಿ ಎಲ್ಲಾ ಛಾನಲ್ ಸಂಭ್ರಮವೇನೂ? ಆಹಾ 'ಅಬ್ಬೈಶ್' ಅಂತೆ, ಹೇಂಗಿಂದೆರೀ ಮಾಧ್ಯಮದವರ ಸೃಷ್ಟಿ, ಬರಿಸುದ್ದಿ ಮಾತ್ರ ಸೃಷ್ಟಿಸುತ್ತಾರೆ ಎಂದು ಕೊಳ್ಳಬೇಡಿ, ಹೀಗೆ ತುಂಬಿ ತುಳುಕುವ ವಿವಾಹದ ಸುದ್ದಿ ಸಂಭ್ರಮದ ಅಮಲಿನಲ್ಲಿ ಸಮಸ್ಯೆಗಳಿಗೆ ಜಾಗವೆಲ್ಲ?" ಜಿ.ಕೆ.ಜಿ.ಯವರು ಗಂಭೀರವಾಗಿ ನಮ್ಮ ಮಾಧ್ಯಮಗಳ ಭಂಡತನವನ್ನು ದಿವಾಳಿಯ ದಾಟಿಯಲ್ಲಿ ಮುಳುಗೇಳುತ್ತಿರುವುದನ್ನು ತೀಕ್ಷ್ಣವಾಗಿ ಚುಚ್ಚುತ್ತಿದ್ದರು.

ಹೌದು ಜನ ಸಾಮಾನ್ಯರ ನಿತ್ಯದ ಜೀವನದ ಹೆಣಗಾಟ, ಗೋಣಗಾಟಕ್ಕೆ ಮಾಧ್ಯಮದಲ್ಲಿ ಜಾಗವೆಲ್ಲಿ? ಹಿಂದೆ ಆಗೀಗಾದರೂ ರೈತರು ಆತ್ಮಹತ್ಯೆ ಮಾಡಿಕೊಂಡಾಗ ತಲ್ಲಣದ, ಒಂದಿಷ್ಟು ಅಘಾತದ ಸುದ್ದಿಯಾಗಿ ಕೆಲವರ ಎದೆಗಳಲ್ಲಿ ನಾಟುವಂತೆ ಸುದ್ದಿ ಬಿತ್ತರವಾಗುತ್ತಿತ್ತು. ಆದರೀಗ... ಸಾಲದ ಭಾದೆಗೆ, ಕೃಷಿಯ ವಿನಾಶಕ್ಕೆ ನಿತ್ಯವೂ ಆತ್ಮಹತ್ಯೆಗೆ ರೈತ ಕುಟುಂಬವೇ ಬಲಿಯಾಗುತ್ತಿದ್ದರೂ ಅದು ಒಂದು ಮನ ಕಲಕುವ ಸಂಗತಿಯಾಗುತ್ತಿಲ್ಲ. ಪರಿಸ್ಥಿತಿ ಘೋರವಾಗುತ್ತಿದ್ದರೂ ಪ್ರತಿಕ್ರಿಯಿಸಲಾಗದಂತೆ ಮೆದುಳಿಗೆ ಗರ ಬಡಿದು ಬಿಟ್ಟಿದೆ. 'ದಿನವೂ ಸಾಯುವವರಿಗೆ ಅಳುವವರ್‍ಯಾರು'? ಎಂದು ಮಾಧ್ಯಮಗಳು ನಂಬಿಸಿ ಬಿಟ್ಟಿವೆ. ರೈತರು ಆತ್ಮಹತ್ಯೆ, ನಿರುದ್ಯೋಗಿಗಳ ಅಳಲು, ಮಹಿಳೆಯರ ಆಕ್ರಂದನ, ಕಾರ್ಮಿಕರ ಬವಣೆ, ಕೂಲಿಕಾರರ ನಿಲ್ಲದ ವಲಸೆ, ವರದಕ್ಷಿಣೆಯ ಹತ್ಯೆಗಳು, ಸಾರ್ವಜನಿಕ ಹಣದ ಎಗ್ಗಿಲ್ಲದ ಲೂಟಿಗೆ ಸಿಗುತ್ತಿದ್ದ ಜಾಗವೀಗ ಅಜೀಂ ಪ್ರೇಮ್‌ಜಿ ವಿಶ್ವವಿಖ್ಯಾತ ಸಿರಿವಂತನಾಗುತ್ತಿರು ವುದಕ್ಕೆ, ಐ.ಟಿ. ನಾರಾಯಣಮೂರ್ತಿಯ ಅಸಂಬದ್ಧ ಆರ್ಥಿಕ ನೀತಿ ಉಪದೇಶಕ್ಕೆ ಕ್ರಿಕೆಟ್, ಬೆಟ್ಟಿಂಗ್‌ಗೆ, ಪ್ರೇಮ್ ಮತ್ತು ರಕ್ಷಿತಾಳ ಮದುವೆಯ ಬಗ್ಗೆ, ಅಬ್ಬೈಶ್‌ಗಳ ವಿವಾಹ ವಿನೋದಗಳಿಗೆ ಮೀಸಲಾಗಿಬಿಟ್ಟಿವೆ. ಅಂದರೆ ಸಮಾಜದ ಕ್ರೂರ ಮುಖದ ಛಾಯೆಯೇ ಕಾಣದಂತೆ ಚಿತ್ತಾರದ ಪರದೆ ಹಾಕಿ ಬಿಡಿಸಲಾಗುತ್ತಿದೆ. ಬಣ್ಣ ಬಣ್ಣದ ಬೊಂಬೆಗಳ ನರ್ತನಗಳ ಹಿಂದೆ ನರಳಾಟದ ಧ್ವನಿ ಹೂತುಹೋಗಿ ಬಿಡುತ್ತವೆ.

ನಿಜ, ಅಬ್ಬೈಶ್‌ಗಳ ಮದುವೆ ಬಗ್ಗೆ ಸುದ್ದಿ ಏನೂ ಪ್ರಕಟಗೊಳ್ಳಬಾರದೆಂಬುದು ನಮ್ಮ ಇರಾದೆ ಏನಲ್ಲ, 'ಮದುವೆಯಾದರು' ಎಂಬುದಕ್ಕೆ ಮಾತ್ರ ಆ ಸುದ್ದಿ ಅರ್ಹ ಅಷ್ಟೇ. ಆದರೆ ನಮ್ಮ ಮಾಧ್ಯಮಗಳು ಮದುವೆಯಾಗಬಹುದು ಎಂಬಲ್ಲಿಂದ ಆರಂಭಗೊಂಡು ಪಂಚಾಂಗ ನೋಡುವುದು, ಇಬ್ಬರು ಮಾತನಾಡಿದರೆ, ಹೂಂಗುಟ್ಟಿದರೆ ಅದೊಂದು ದೊಡ್ಡ ವಿಷಯವೆಂಬಂತೆ ಹಿಗ್ಗಿಸುತ್ತಲೇ ಹೋದರು.

"... ಹೇಗೆಲ್ಲಾ ಗುಡಿಗುಂಡಾರಗಳನ್ನು ಸುತ್ತಿ, ಪ್ರಶಸ್ತವಾದ ಮೂಹರ್ತವನ್ನು ನಿಗದಿಪಡಿಸಿ ಭಾರಿ ಭದ್ರತೆ, ಖಾಸಗಿಯವರಿಗೆ ಮಾತ್ರ ಪ್ರವೇಶವೆಂದು ನಿರ್ಬಂಧಿಸಿ ವಿಶ್ವ ಸುಂದರ ಸುಂದರಿಯರ ಮದುವೆ ನಡೆಸಿದರೂ ಒಂದು ಘಟನೆ ತಪ್ಪಿಸಲಾಗಲಿಲ್ಲ.





ಯಾವುದು ಆದ್ಯತೆ ಈ ಮಾಧ್ಯಮಗಳಿಗೆ

ಅದೇನೆಂದರೆ ತನ್ನನ್ನೇ ಮದುವೆಯಾಗುವುದಾಗಿ ನಂಬಿಸಿ 'ವಿವಿಧ ರೀತಿ ನಟಿಸಿದ' ಅಭಿಷೇಕ್ ತನಗೆ ಕೈಕೊಟ್ಟು ಬಿಟ್ಟನೆಂದು ಜಾಹ್ನವಿ ಎಂಬ ತರುಣ ನಟಿ ಆತ್ಮಹತ್ಯೆಗೆ ಯತ್ನಿಸಿದಳು... ಇದನ್ನೇ 'ನೂರಾರು ಯಜ್ಞ ಮಾಡಿದರೂ ವಿಘ್ನ ತಪ್ಪಿಸಲಾಗಲಿಲ್ಲ' ಎಂದದ್ದು ನಿತ್ಯಾನಂದಸ್ವಾಮಿ!

ಅದು ಅಂತರ್ ಜಾತೀಯ ವಿವಾಹ ಎಂಬುದು ಗಮನಿಸಬೇಕಾದ ವಿಷಯವಾದರೂ ಪ್ರತಿದಿನವೂ ಪುಟಗಟ್ಟಲೇ ಸುದ್ದಿಯನ್ನು ಊದಬೇಕೇ? 'ವಿಶ್ವಸುಂದರಿ' ಗೆ ಇಷ್ಟಾದರೂ ಜಾಗಬೇಡವೇ ಎಂದು ತರ್ಕಿಸಲೂ ಬಹುದು. ಈ ವಿಶ್ವಸುಂದರಿಯ ಮಾದರಿ ಯೊಂದನ್ನು ಮಂಡಿಸಿ ಕೋಟ್ಯಾಂತರ ಯುವಜನರಲ್ಲಿ ಕೀಳರಿಮೆ ಹುಟ್ಟು ಹಾಕಿದ್ದ ಸೌಂದರ್ಯವರ್ಧಕ ಕಂಪನಿಗಳು ಖಜಾನೆ ತುಂಬಿ ಹರಿಯುವಂತೆ ಮಾಡಿದ್ದನ್ನು ಮರೆಯಲಾದೀತೆ? ಮೆಗಾಸ್ಟಾರ್ ವಿಶ್ವಸುಂದರಿ ಕುಟುಂಬದಲ್ಲಿನ ವಿವಾಹವು ಮಾಧ್ಯಮಗಳು ಮತ್ತು ಸಿನಿಮಾ, ಬಂಡವಾಳಗಾರರ 'ಮ್ಯಾಚ್‌ಫಿಕ್ಸಿಂಗ್' ಯಾಕಲ್ಲ? ಬಂಡವಾಳ ತೋಳೇರಿಸಿ ಎತ್ತರದ ದನಿಯಲ್ಲಿ ಹುಕುಂ ಹೇಳಿ ಡಿರಿಕಿ ಹೊಡೆಯುತ್ತಿರುವಾಗ 'ಪ್ರಜಾಪ್ರಭುತ್ವ' ದ ನಾಲ್ಕನೆಯ ಈ ಸ್ತಂಭ ಅವರ ಸುತ್ತ ಗಿರಿಕಿ ಹೊಡೆಯದೇ ಇರಲು ಸಾಧ್ಯವೇ

- ಎಸ್.ವೈ.ಜಿ.

ಕ್ಯಾತೆ

'ನಮ್ ಫ್ಯಾಮಿಲಿಯಿಂದಲೇ ಎಲ್ಲಾ...'

ಇದು 2007 ಅಕ್ಟೋಬರ್‌ನಲ್ಲಿ ಹಂಗಾಮಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಮಗ ನಿತಿನ್ 'ಜನಶಕ್ತಿ'ಗೆ ನೀಡಿದ ಸಂದರ್ಶನ. ಮುಖ್ಯಮಂತ್ರಿ ಪದವಿ ವರ್ಗಾವಣೆಗೆ ಒತ್ತಡದ ಕಾರಣ, ಬಿಜೆಪಿ ಸರ್ಕಾರ ಉರುಳಿಸಿ ಮಧ್ಯಂತರ ಚುನಾವಣೆ ನಡೆಯುತ್ತದೆ. ಜನತಾದಳ (ಎಸ್)ನ ಪ್ರಧಾನ ವಕ್ತಾರ ಮತ್ತು ಪ್ರಚಾರದ ಭಾರ ಹೊತ್ತಿರುವ ಯುವ ನಾಯಕ ನಿತಿನ್ ಕುಮಾರಸ್ವಾಮಿ ಜತೆ ಈ ಸಂದರ್ಶನ. ಕರ್ನಾಟಕ ಚರಿತ್ರೆ, ರಾಜಕೀಯ, ಬೆಳವಣಿಗೆ, ಪ್ರಸ್ತುತ ಹಿಂದಿನ ಪರಿಸ್ಥಿತಿ ಬಗ್ಗೆ ಜನಶಕ್ತಿಯ ಹೊಸ 'ಸ್ಕೂಪ್'

ಜನಶಕ್ತಿ : ರಾಜಕಾರಣದಲ್ಲಿ ಕಾಂಗ್ರೆಸ್‌ನ ಏಕಸ್ವಾಮ್ಯ ಕೊನೆಗೊಳಿಸುವುದರಲ್ಲಿ ಕರ್ನಾಟಕ ಕೊನೆಯ ರಾಜ್ಯವಾಗಿತ್ತು. ಇದಕ್ಕೇನು ಕಾರಣ ಅಂತೀರಿ ?

ನಿತಿನ್ : ನಮ್ ತಾತ ವಿರೋಧಪಕ್ಷದ ನಾಯಕರಾಗಿದ್ದರು... ಅವರೇ ಕಾರಣ... ಹಿಂದೆ ಅವರು ವಿರೋಧಿ ನಾಯಕರಾಗಿರಲಿಲ್ಲ. ಆದ್ದರಿಂದ ಏಕಸ್ವಾಮ್ಯ ಇತ್ತು.. ಆ ಮೇಲೆ ಆದ್ರು... ಆದ್ದರಿಂದ ಕಾಂಗ್ರೆಸ್ ಸೋತಿತು.

ಜನಶಕ್ತಿ: ಆದರೆ ಕಾಂಗ್ರೆಸ್ಸಿನ ಸರ್ಕಾರಗಳು ಸ್ಥಿರ ಸರ್ಕಾರ ಕೊಡಲೇ ಇಲ್ಲ. ಅದಕ್ಕೇನು ಕಾರಣ ಅಂತೀರಿ?

ನಿತಿನ್: ಅದಕ್ಕೂ ನಮ್ ತಾತನೇ ಕಾರಣ... ಅಲ್ಲ. ಅಲ್ಲ. ..ಅವರ ವಿರೋಧಿಗಳೇ ಕಾರಣ... ನಮ್ ತಾತನ್ನ ಮುಖ್ಯಮಂತ್ರಿ ಮಾಡಿದ್ದೇ ಕಾರಣ.

ಜನಶಕ್ತಿ : ಆ ಮೇಲೆ ಮುಖ್ಯಮಂತ್ರಿ ಆದ್ರಲ್ಲ... ಆ ಮೇಲೆ?

ನಿತಿನ್ : ಅದಕ್ಕೂ ನಮ್ ತಾತನ ವಿರೋಧಿಗಳೇ ಕಾರಣ

ಜನಶಕ್ತಿ: ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂತಲ್ಲ... ಅದಕ್ಕೆ ಏನಂತೀರಿ?

ನಿತಿನ್: ಅದಕ್ಕೂ ನಮ್ ತಾತ ಮತ್ತು ಅಪ್ಪನೇ ಕಾರಣ.... ನಮ್ ಫ್ಯಾಮಿಲಿ ಬೆಂಬಲ ಇಲ್ಲಂದ್ರೆ ಅವರಿಗೆ ಅಧಿಕಾರ ಹೆಂಗೆ ಬರ್ತಿತ್ತು?

ಜನಶಕ್ತಿ: ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬಂದಿರುವ ಬಗ್ಗೆ ಏನಂತೀರಿ?

ನಿತಿನ್ : ಇದಕ್ಕೆ ನಮ್ಮಪ್ಪನೇ ಕಾರಣ.. ನಮ್ ತಾತ ಸರ್.... ಮೌನವಾಗಿದ್ರಲ್ಲ.. ಇಲ್ಲಂದ್ರೆ ಬಿಜೆಪಿಗೆ ಛಾನ್ಸ್ ಇರಲಿಲ್ಲ.

ಜನಶಕ್ತಿ: ಕಾವೇರಿ ವಿವಾದ ಏನೂ ಇತ್ಯರ್ಥವಾಗುವ ಹಾಗೆ ಕಾಣುತ್ತಿಲ್ಲವಲ್ಲ.. ಇದಕ್ಕೆ ಏನು ಕಾರಣ ಅಂತೀರಿ.

ನಿತಿನ್: ಇದಕ್ಕೂ ನಮ್ ತಾತನೇ ಕಾರಣ.... ಕಾವೇರಿ ಬಗ್ಗೆ ವಿವಾದದ ಬಗ್ಗೆ ನಮ್ ತಾತನೇ ಮೊದಲು ಗಲಾಟೆ ಮಾಡಿದ್ದು..

ಜನಶಕ್ತಿ: ಕರ್ನಾಟಕ ಹಿಂದೆ ಮುಂದುವರಿದ ಕೈಗಾರಿಕಾ ರಾಜ್ಯವಾಗಿತ್ತು. ಈಗ ಹಿಂದೆ ಬಿದ್ದಿದೆಯಲ್ಲ.

ನಿತಿನ್ : ಹೌದಾ... ಅದಕ್ಕೂ ನಮ್ಮ ತಾತ, ಅಪ್ಪ ಮುಖ್ಯಮಂತ್ರಿಯಾಗಿ ಹೆಚ್ಚು ದಿನ ಆಗಿಲ್ಲದೆ ಇದ್ದದ್ದೇ ಕಾರಣ ಇರಬೇಕು.

ಜನಶಕ್ತಿ: ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಲ್ಲ.. ಅದಕ್ಕೆ ಏನಂತೀರಿ?

ನಿತಿನ್ : ರೈತರಿಗೆ ನಮ್ ಫ್ಯಾಮಿಲಿ ಮಾಡಿದ್ದನ್ನು ಇನ್ಯಾರೂ ಮಾಡಿಲ್ಲರಿ... ಇನ್ನೂ ಹೆಚ್ಚಿಗೆ ಮಾಡಲು ಬಿಟ್ಟಿಲ್ಲ... ಕರ್ನಾಟಕದಲ್ಲಿ ಆಗಿದ್ದು, ಆಗಿಲ್ಲದೆ ಇರುವುದಕ್ಕೆ... ನಮ್ಮ ಫ್ಯಾಮಿಲಿನೇ ಕಾರಣ... ಒಂದು ತಿಳ್ಕಳಿ ನಮ್ ಫ್ಯಾಮಿಲಿ ಯಿಂದಲೇ ಎಲ್ಲ ನಮ್ ಫ್ಯಾಮಿಲಿಗೆ... ಅಲ್ಲಲ್ಲ ಜನತಾದಳ (ಎಸ್) ಗೆ ಓಟು ಕೊಡಿ.... ನಮ್ಮ ಫ್ಯಾಮಿಲಿ ಅಧಿಕಾರಕ್ಕೆ ಬಂದ್ರೆ ಎಲ್ಲಾ ಸರಿ ಹೋಗುತ್ತೆ.

• ನಕ್ಷತ್ರಿಕ



ಇದು ಜೋಕಲ್ಲ..

ಭಾರತದ ಪರಾಭವಕ್ಕೆ ಯಾರು ಕಾರಣ

ವಿಶ್ವಕಪ್‌ನಲ್ಲಿ ಭಾರತದ ಪರಾಭವಕ್ಕೆ ಕಾರಣ ಹುಡುಕಲು ಸರ್ಕಾರ ಒಂದು ವಿಚಾರಣಾ ಆಯೋಗವನ್ನು ನೇಮಿಸಿತ್ತು. ಆಯೋಗವು ಭಾರತ ತಂಡ, ಅವರ ಸ್ಪಾನ್ಸರ್‌ಗಳು, ಟಿ.ವಿ. ಕಂಪನಿಗಳೂ, ಕ್ರಿಕೆಟ್ ಬೋರ್ಡ್, ಸಂಬಂಧಪಟ್ಟವರನ್ನೆಲ್ಲಾ ವಿಚಾರಿಸಿ ಒಂದು ವರದಿ ತಯಾರಿಸಿದೆ. ಎಲ್ಲವನ್ನೂ ಪರಿಶೀಲಿಸಿ ಆಯೋಗ ಪರಾಭವಕ್ಕೆ ಮೂಲ ಕಾರಣವು ಭಾರತದ ಜನತೆ ಅಂದುಕೊಂಡಂತೆ ತಂಡದ ಕಳಪೆ ಆಟ ಅಥವಾ ಸ್ಪಾನ್ಸರ್‌ಗಳ ಕಮರ್ಷಿಯಲ್ ಒತ್ತಡ, ಕ್ರಿಕೆಟ್ ಬೋರ್ಡ್‌ನ ಭ್ರಷ್ಟಾಚಾರ, ಸ್ವಜನಪಕ್ಷಪಾತ ಯಾವುದೂ ಅಲ್ಲ. ಪರಾಭವಕ್ಕೆ ಮೂಲ ಕಾರಣ ಎರಡು ಚಾರಿತ್ರಿಕ ವ್ಯಕ್ತಿಗಳು ಎಂದಿದೆಯಂತೆ. ಈ ಎರಡು ವ್ಯಕ್ತಿಗಳ ಬಗ್ಗೆ ಜನತೆಗೆ ಅತ್ಯಂತ ಗೌರವ ಭಾವನೆ ಇರುತ್ತಾದರಿಂದ ಅದನ್ನು ಬಹಿರಂಗ ಪಡಿಸುತ್ತಿಲ್ಲ ಎಂದು ಆಯೋಗ ಯಥಾ ಪ್ರಕಾರ ವರದಿಯನ್ನು 'ಲೀಕ್' ಮಾಡುತ್ತಾ ಹೇಳಿದೆ.

ಈ ಎರಡು ವ್ಯಕ್ತಿಗಳು ಯಾರು ಎಂದು ವರದಿ 'ಲೀಕ್ ' ಮಾಡಿದೆ. ಹನುಮಂತ ಮತ್ತು ಇಂದಿರಾಗಾಂಧಿ ಆ ಇಬ್ಬರು ವ್ಯಕ್ತಿಗಳಂತೆ. ಅವರ ಎರಡು ಚಾರಿತ್ರಿಕ ಕ್ರಮಗಳು - ಹನುಮಂತ ಶ್ರೀಲಂಕಾವನ್ನು ಪೂರ್ಣವಾಗಿ ನಾಶ ಮಾಡದೆ ಇದ್ದದ್ದು, ಇಂದಿರಾಗಾಂಧಿ ಬಾಂಗ್ಲಾದೇಶ ಎಂಬ ಹೊಸ ದೇಶ ಹುಟ್ಟಿ ಹಾಕಿದ್ದು ಪರಾಭವಕ್ಕೆ ಕಾರಣ ಎಂದೂ ಆಯೋಗ ಹೇಳಿದೆ. ಭಾರತ ಕ್ರಿಕೆಟ್‌ನಲ್ಲಿ ಯಾವುದೇ ಬದಲಾವಣೆ ಬೇಕಿಲ್ಲ ಎಂದು ಹೇಳಿದೆಯಂತೆ!?

JANASHAKTHI KANNADA VARA PATRIKE Price : Rs. 5/- No. KARKAN 15538/10/1/2004-TC NO. MAG(3)/NPP/201/2006-07

'ಹೆಣ್ಣಿನ ನೋವು ಸಂಕಟಗಳ ಮನೋಜ್ಞ ಅಭಿವ್ಯಕ್ತಿ' - ಪ್ರೊವೊಕ್ಡ್



ಗಂಡನ ಕೊಲೆ ಮಾಡಿ ವಿಚಾರಣಾಧೀನ ಕೈದಿ ಜೈಲಿನಲ್ಲಿದ್ದಾಳೆ. 'ನಿನಗೆ ಈಗ ಏನನಿಸುತ್ತಿದೆ'? ಎಂಬ ಪ್ರಶ್ನೆಗೆ `I feel free' (ಈಗ ನಿರಾಳ ಎನಿಸುತ್ತಿದೆ) ಇದು ಉತ್ತರ. ಪ್ರಶ್ನಿಸಿದವರ ಜೊತೆ ಪ್ರೇಕ್ಷಕರೂ ಒಮ್ಮೆ ಹ್ಞಾಂ ಅನ್ನುವಂತ ಉತ್ತರ. ಬಹುಶಃ ಈ ವ್ಯವಸ್ಥೆ ಅವಳಿಂದ ಬಯಸಿದ್ದುದು, ತಾನು ಮಾಡಿದ್ದು ಘೋರ ಅಪರಾಧ ಎಂದು ಹಳಿಹಳಿಸುವಿಕೆಯ ಧ್ವನಿಯನ್ನು. ಇದು ಕಿರಣ್‌ಜಿತ್ ಅಹ್ಲುವಾಲಿಯಾಳ ಪಾತ್ರದಲ್ಲಿ ಐಶ್ವರ್ಯ ರೈ Provocked ಸಿನಿಮಾದಲ್ಲಿ ಆಡುವ ಮಾತುಗಳು. ಈ ಮೂರು ಪದಗಳನ್ನು ಹೇಳುವಾಗ ಅವಳ ಕಣ್ಣುಗಳಲ್ಲಿನ ಆತ್ಮಸ್ಥೈರ್ಯ ಆ ಹೆಣ್ಣು ಅನುಭವಿಸಿದ ನೋವು, ಅವಮಾನವನ್ನು ಬಿಂಬಿಸುತ್ತದೆ.

ಮನೋಜ್ಞ, ಅರ್ಥಪೂರ್ಣ

ಕೌಟುಂಬಿಕ ದೌರ್ಜನ್ಯ ತಡೆಯಲು ಕಾಯ್ದೆಯೊಂದು ಬೇಕೆಂದು ನಡೆಸಿದ ಹೋರಾಟ ನಮ್ಮ ನೆಲದಲ್ಲಿ ಫಲ ನೀಡುತ್ತಿರುವಾಗಲೇ ದೂರದ ಲಂಡನ್ನನಲ್ಲಿ ಅನಿವಾಸೀ ಭಾರತೀಯ ಕುಟುಂಬದಲ್ಲಿ ನಡೆದ ಘಟನೆಯನ್ನಾಧರಿಸಿ ತೆಗೆದ ಈ ಚಿತ್ರ ಅತ್ಯಂತ ಮನೋಜ್ಞ ಮತ್ತು ಅರ್ಥಪೂರ್ಣ. ಈ ಚಿತ್ರ ಅನಾವರಣಗೊಳಿಸುವ ಮತ್ತೊಂದು ಸತ್ಯ ಕೌಟುಂಬಿಕ ದೌರ್ಜನ್ಯ ಕೇವಲ ನಮ್ಮ ದೇಶಕ್ಕೆ ಸೀಮಿತವಾದದ್ದಲ್ಲ, ಇದಕ್ಕೆ ಗಡಿ ಸೀಮೆಗಳಿಲ್ಲ.

Provocked ಚಿತ್ರ ಕಿರಣ್‌ಜಿತ್ ಅಹ್ಲುವಾಲಿಯಾ ಎಂಬ ಅನಿವಾಸಿ ಭಾರತೀಯ ಕುಟುಂಬದಲ್ಲಿ ನಡೆದ ಘಟನೆ. 10 ವರ್ಷಗಳ ಕಾಲ ಕೌಟುಂಬಿಕ ಹಿಂಸೆ ಅನುಭವಿಸಿ ಅಂತರಾಳದ ನೋವು ತಣ್ಣನೆಯ ಕ್ರೌರ್ಯವಾಗಿ ಹೊಮ್ಮಿದಾಗ ನಡೆದದ್ದು. ನಿದ್ರಿಸಿದ್ದ ಗಂಡನ ಮೇಲೆ ಆ್ಯಸಿಡ್ ಸುರಿದು ಬೆಂಕಿ ಹಚ್ಚಿ, ಈ ಆಪಾದನೆಯ ಮೇಲೆ ಜೈಲು ಸೇರುವ ಕಿರಣ್‌ಗೆ ಸಿಕ್ಕ ಸಹ ಖೈದಿ ಇಂತಹುದೇ ದೌರ್ಜನ್ಯಕ್ಕೆ ರೋಸಿ ಗಂಡನನ್ನು ಕೊಂದು ಬಂದ ಮತ್ತೋರ್ವ ವಿದೇಶಿ ಮಹಿಳೆ - ಹೀಗೆ ಪ್ರಾರಂಭವಾಗುತ್ತದೆ ಕಿರಣ್‌ಳ ಕಥೆ.

ಹಿಂಸೆಯೆಂದರೆ....

ಹಿಂಸೆ ಎಂದರೆ ಕೇವಲ ಹೊಡೆತ ಬಡಿತಗಳಷ್ಟೇ ಅಲ್ಲ. ಬದಲಿಗೆ ಮಾನಸಿಕವಾಗಿ ಕೊಡುವ ಹಿಂಸೆ ಅದಕ್ಕಿಂತಲೂ ಮಿಗಿಲಾದುದು. ಹೇಳಲಾಗದ, ಅನುಭವಿಸಲಾಗದ ಮಾನಸಿಕ ಹಿಂಸೆ, ಅಸಹ್ಯ ವರ್ತನೆ, ಮತ್ತೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವುದು - 'ಇವೆಲ್ಲವೂ ನಾನು ನಿನ್ನನ್ನು ಪ್ರೀತಿಸುತ್ತೇನೆ ಅದಕ್ಕಾಗಿ' ಎನ್ನುವುದು. ಇದನ್ನು ಕೇಳಿದರೆ 'ಎಂತಹ ವಿಕೃತ ಮನಸ್ಥಿತಿ (Sadiest obsessive) ಯಾರಿಗಾದರೂ ಅನ್ನಿಸದೇ ಇರದು. ಈ ಸನ್ನಿವೇಶದಲ್ಲಿ ಕಾರ್ಯೇಷುದಾಸಿ... ಕ್ಷಮಾಯಾಧರಿತ್ರಿ ಎಂದು ವಿನೀತಳಾಗಿಯೇ ಬದುಕಬೇಕೆಂದು ಹೆಣ್ಣು ಮಕ್ಕಳನ್ನು ಬೆಳೆಸುವ ಈ ಸಮಾಜಕ್ಕೆ ಧಿಕ್ಕಾರವಿರಲಿ ಎನಿಸಿತು. ವಿದೇಶದಲ್ಲಿ ಅಳಿಯ(NRI) ಎಂದು ಸಂಭ್ರಮಿಸಿ ಮದುವೆ ಮಾಡಿ ಕಳಿಸುವ ತಂದೆ ತಾಯಿಯರ ಬಗ್ಗೆಯೂ ಬೇಸರವಾಯಿತು.

10 ವರ್ಷದ ಹಿಂಸಾತ್ಮಕ ಜೀವನದಲ್ಲಿ ಹುಟ್ಟಿದ ಎರಡು ಮಕ್ಕಳು ಕೂಡ ಬದುಕಿನ ಕೊಂಡಿ ಬೆಸೆಯಲಿಲ್ಲ. ತನ್ನೆದುರಿಗೆ ಹೆಂಡತಿಯನ್ನು ತನ್ನ ಮಗ ಹಿಂಸಿಸಿದ್ದನ್ನು ನೋಡಿ ನೋಯುವ ತಾಯಿ, ಅವಳ ವಿಚಾರಣೆ ಕೋರ್ಟಿನಲ್ಲಿ ನಡೆಯುವಾಗ ಸುಳ್ಳು ಹೇಳುವ ಅತ್ತೆಯಾಗಿ ಮಾರ್ಪಡುತ್ತಾಳೆ. ಯಥಾಪ್ರಕಾರ ಕಾನೂನಿನ ಕಟಕಟೆಯಲ್ಲಿ, ಸಾಮಾಜಿಕ ಪ್ರಜ್ಞೆಯ ಪರಿಧಿಯಿಂದಾಚೆಯೇ ಬಹಳ ಸಂದರ್ಭಗಳಲ್ಲಿ ಉಳಿದು ಬಿಡುವ ಸರ್ಕಾರಿ ವಕೀಲರು ಇಲ್ಲಿಯೂ ಸಿಗುತ್ತಾರೆ. ಇಲ್ಲಿ ದೌರ್ಜನ್ಯದ ವಿವಿಧ ಮುಖಗಳು ಅನಾವರಣಗೊಳ್ಳುತ್ತವೆ. ಶಿಕ್ಷೆಯಾಗುವುದೆಂಬ ಸುದ್ದಿಗೆ ತಳಮಳಿಸುವ ಮಹಿಳಾ ಹಕ್ಕುಗಳ ವೇದಿಕೆ ಅವಳ ಬೆಂಬಲಕ್ಕೆ ನಿಲ್ಲುತ್ತವೆ. ಆದರೆ ಎಲ್ಲೋ ಭಾರತದ 'ಉನ್ನತ ಪರಂಪರೆ'ಯಲ್ಲಿ ಬೆಳೆದು ಬಂದ ಕಿರಣ್‌ಗೆ



ಗಂಡನ ಬಗ್ಗೆ ದೂರಲು ಮನಃಸಾಕ್ಷಿ ಒಪ್ಪದ ಸ್ಥಿತಿ. ಜೊತೆಗೆ ತನಗೆ ಸರಿಯಾಗಿ ಬಾರದ ಭಾಷೆಯ ಅಳುಕು. ಆದರೆ ಒಂದು ಸಂಘಟನೆಯಾಗಿ ಇಂತಹ ವ್ಯಕ್ತಿಗಳಿಗೆ ಆತ್ಮ ವಿಶ್ವಾಸ ಹೇಗೆ ಬೆಳೆಸಲು ಸಾಧ್ಯ ಎಂಬುದು ಇಲ್ಲಿ ಕಾಣ ಸಿಗುತ್ತದೆ.

ಸಂಘಟನೆಯ ತೀವ್ರ ಪರಿಶ್ರಮ, ಕಾನೂನಿನಲ್ಲಿ ಸಿಗುವ 'ಕೊಂದಿದ್ದು ಅಪರಾಧ ಆದರೆ ಕೊಲ್ಲಲು ಆದ ಪ್ರಚೋದನೆ ಕೊಲೆಗಿಂತ ಹೆಚ್ಚು ಕ್ರೂರ' ವೆಂಬ ಅವಕಾಶವನ್ನು ಉಚ್ಛರಿಸಿ ಆದ ಅವಳ ಬಿಡುಗಡೆ. ಬಿಡುಗಡೆಯಾದ ನಂತರ ಪ್ರಪಂಚದ ಯಾವ ಹೆಣ್ಣು ಇಂತಹ ಕ್ರೌರ್ಯಕ್ಕೆ ಒಳಗಾಗದಿರುವಂತಹ ವಾತಾವರಣ ನಿರ್ಮಾಣವಾಗಬೇಕೆಂಬ ಕಿರಣ್‌ಳ ಸಂದೇಶದೊಂದಿಗೆ ಸಿನಿಮಾ ಮುಕ್ತಾಯವಾಗುತ್ತದೆ.

ಗ್ಲಾಮರ್ ನಟಿಯಾಗಿ ಐಶ್ವರ್ಯ ಹೆಸರು ಮಾಡಿದ್ದರೂ ಈ ಚಿತ್ರದಲ್ಲಿ ನಿಜವಾಗಿಯೂ ಉತ್ತಮವಾಗಿ ನಟಿಸಿದ್ದಾರೆ. ಆದರೆ ಈ ಚಿತ್ರ ಬೆಂಗಳೂರಿನ 'ಪ್ರತಿಷ್ಠಿತ' ರು ಮಾತ್ರ ನೋಡಬಹುದಾದ ಪಿವಿಆರ್ ನಲ್ಲಿ ಮಾತ್ರ ಪ್ರದರ್ಶಿತವಾಗುತ್ತಿದೆ. ಇದು ಎಲ್ಲರಿಗೂ ನೋಡಲು ಸಿಗಬೇಕು.

● ಸುಶ್ಮಾರಾವ್

'ಸೌಂದರ್ಯ' - ಹಳಿತಪ್ಪಿದ ಕಥೆ

ಬೆಂಗಳೂರಿನ ಭೂಮಾಫಿಯಾದ ಒಳಹೊರಹುಗಳ ಬಗ್ಗೆ ಬೆಳಕು ಚೆಲ್ಲಬಹುದೆಂಬ ನಿರೀಕ್ಷೆಯಿದ್ದ ಚಿತ್ರ, ಸೂತ್ರ ಹರಿದ ಗಾಳಿಪಟದಂತೆ ಚಿತ್ರಕಥೆ ಎಲ್ಲೆಲ್ಲೋ ಸಾಗಿ ತೀವ್ರ ನಿರಾಶೆ ಹುಟ್ಟಿಸುತ್ತದೆ 'ಸೌಂದರ್ಯ'. ಸರ್ಕಾರಿ ಅಧಿಕಾರಿಯಾಗಿದ್ದು, ಈಗ ರಾಜಿನಾಮೆ ನೀಡಿ ನಿರ್ದೇಶನಕ್ಕೆ ಇಳಿದಿರುವ ಚನ್ನಗಂಗಪ್ಪನವರು ಭೂಮಾಫಿಯಾ ಬಗ್ಗೆ ವಸ್ತುನಿಷ್ಠ ಚಿತ್ರಣ ಕೊಡಬಹುದೇನೋ ಎಂಬ ನಿರೀಕ್ಷೆಯನ್ನು ಸುಳ್ಳಾಗಿಸಿದ್ದಾರೆ.

ರಾಜಕಾರಣಿಗಳು, ಪೋಲೀಸರು ಮತ್ತು ಭೂ ಮಾಫಿಯಾದವರ ಸಖ್ಯತೆಯನ್ನು ಅನಾವರಣ ಗೊಳಿಸುತ್ತಲೇ ಚಿತ್ರ ಆರಂಭವಾಗುತ್ತದೆ. ಭೂ ಮಾಫಿಯಾದವರ ವಿರುದ್ಧ ಕಾರ್ಯಾಚರಣೆಗಿಳಿಯುವ ಪೊಲೀಸ್ ಅಧಿಕಾರಿ ಹತ್ಯೆಯಾಗುತ್ತಾರೆ. ತಮಗೆ ಬೇಕಾದ ಭೂಮಿಯನ್ನು ಪಡೆಯಲು ಆ ಭೂ ಮಾಲಕರಿಗೆ ಬೆದರಿಕೆ ಒಡ್ಡುವುದು, ಒಪ್ಪದವರು ಹತ್ಯೆಗೀಡಾಗುವುದು - ಹೀಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಘಟನಾವಳಿಗಳು ಕಣ್ಣಮುಂದೆ ಬರುತ್ತವೆ.

ಇಂತಹ ಭೂ ಮಾಫಿಯಾ ಕೈಗೆ ಸಿಕ್ಕ ನರಳುವ ಕುಟುಂಬವೇ ರಮೇಶ್ ಕುಟುಂಬ. ಉದ್ಯಾನವೊಂದರ ಮೇಲೆ ಕಣ್ಣು ಹಾಕುವ ಭೂಮಾಫಿಯಾ ಅದನ್ನು ಕಬಳಿಸಲು ಯತ್ನಿಸುತ್ತದೆ. ಮಹಿಳಾ ಸಂಘವೊಂದು ಅದನ್ನು ಪ್ರತಿಭಟಿಸಿ, ಮೂಲ ದಾಖಲೆಗಳೊಂದಿಗೆ ಕೋರ್ಟಿಗೆ ಹೋಗಲು ನಿರ್ಧರಿಸುತ್ತದೆ. ಆ ದಾಖಲೆಗಳು ರಮೇಶ್ ಪತ್ನಿ 'ಸೌಂದರ್ಯ' (ಸಾಕ್ಷಿಶಿವಾನಂದ್)ಯ ಬಳಿ ಇರುತ್ತದೆ. ಮಹಿಳಾ ಸಂಘದ ಅಧ್ಯಕ್ಷೆ ಭೂ ಮಾಫಿಯಾರ ಕ್ರೌರ್ಯಕ್ಕೆ ಹೆದರಿ, ಸೌಂದರ್ಯಳ ಬಳಿ ದಾಖಲೆ ಇರುವುದನ್ನು ತಿಳಿಸುತ್ತಾಳೆ. ದೂರವಾಣಿ ಮೂಲಕ ದಾಖಲೆಗಳನ್ನು ಕೊಡುವಂತೆ ಕೇಳಿದಾಗ ಸೌಂದರ್ಯ ಅದಕ್ಕೆ ಜಗ್ಗದೆ ನಿರಾಕರಿಸುತ್ತಾಳೆ. ಆದರೆ ಭೂ ಮಾಫಿಯಾದವರು ಅವರ ಮಗಳನ್ನು ಅಪಹರಿಸಿ, ರಮೇಶರಿಗೆ ಬೆದರಿಸುತ್ತಾರೆ. ಅವರನ್ನು ಎದರು ಹಾಕಿಕೊಳ್ಳಲು ಇಚ್ಛಿಸದ ರಮೇಶ್ ದಾಖಲೆಗಳನ್ನು ಕೊಟ್ಟುಬಿಡುತ್ತಾನೆ. ಆದರೆ ಆತನ ಹೆಂಡತಿ ತೋರಿದ ದರ್ಪ ಮತ್ತು ಸೌಂದರ್ಯಕ್ಕೆ ಮರುಳಾಗಿ ಭೂ ಮಾಫಿಯಾದ ದೊರೆ ಆಕೆಯನ್ನು ಬಯಸಿ, ಮತ್ತೆ ಬೆದರಿಕೆ ಒಡ್ಡುತ್ತಾನೆ. ಇಕ್ಕಟ್ಟಿನಲ್ಲಿ ಸಿಲುಕುವ ರಮೇಶ್ ಅವರಿಂದಾಗ ಬಹುದಾದ ಅನಾಹುತಗಳನ್ನು ಮನಗಂಡು, ಹೆಂಡತಿಯನ್ನು ಕಳುಹಿಸಿಕೊಡುವುದಾಗಿ ತಿಳಿಸಿ, ಮಾಫಿಯಾ ದೊರೆ ಹೇಳಿದ ಜಾಗಕ್ಕೆ ಹೋಗಿ ಆತನನ್ನೇ ಹತ್ಯೆಗೈಯುತ್ತಾನೆ.



ಇಲ್ಲಿಂದ ಸೂತ್ರವಿಲ್ಲದ ಚಿತ್ರಕಥೆ ಮುಂದಕ್ಕೆ ಸಾಗದೆ ರಮೇಶ್ ಸುತ್ತ ಗಿರಕಿ ಹೊಡೆಯುತ್ತದೆ. ಕೊಲೆ ಮಾಡಿ, ಯಾರಿಗಾದರೂ ಸಿಕ್ಕಿಬೀಳಬಹುದೆಂಬ ಆತಂಕದಲ್ಲೇ ದಿನದೂಡುವ ರಮೇಶ್ ಇಲ್ಲಿ ಪ್ರೇಕ್ಷಕರ ಸಹನೆ ಪರೀಕ್ಷಿಸುತ್ತಾರೆ. ಮೊದಲೆಲ್ಲ ರಮೇಶ್ ನಟನೆ ಎಂದರೆ ಉತ್ಸಾಹ, ಕಚಗುಳಿ, ಆಪ್ತತೆಯ ಅನುಭವವಾಗುತ್ತಿದ್ದರೆ-ಇಲ್ಲಿ ನಿರುತ್ಸಾಹದ ಅಭಿನಯ ಚಿತ್ರದ ಆಮೆ ನಡಿಗೆಗೆ ಸಾಕಷ್ಟು ಕೊಡುಗೆ ನೀಡಿದೆ.

ಪೊಲೀಸ್ ಅಧಿಕಾರಿಯಾದ ರಮೇಶ್ ಸ್ನೇಹಿತನೇ ಈ ಕೊಲೆಯ ತನಿಖೆಗೆ ಬರುವುದು, ಇವರ ಮನೆಯಲ್ಲೇ ವಾಸ್ತವ್ಯ ಹೂಡುವುದು - ರಮೇಶನೇ ಕೊಲೆಗಾರನೆಂದು ಗೊತ್ತಾದರೂ ಕೊಲೆಯಾದ ಮಾಫಿಯಾ ದೊರೆಯ ವಿರೋಧಿಯನ್ನು ಎಳೆದುತಂದು ಅವನಿಂದ ಕೊಲೆ ಮಾಡಿದ್ದು ತಾನೇ ಎಂದು ಪತ್ರ ಬರೆಯಿಸಿಕೊಂಡು ಅನಂತರ ಆತನನ್ನು ಕಸ್ಟಡಿಯಲ್ಲೇ ಗುಂಡಿಕ್ಕಿ ಕೊಂದು - ರಮೇಶನನ್ನು ಬಚಾವು ಮಾಡುವುದು.... ಅಬ್ಬಾ ! ವಾಸ್ತವತೆಗಾಗಲೀ - ತರ್ಕಕ್ಕಾಗಲೀ ಸಿಗುವುದಲ್ಲ ಚನ್ನಗಂಗಪ್ಪನವರ ಚಿತ್ರಕಥೆ!

ಸರ್ಕಾರಿ ಅಧಿಕಾರಿಯಾಗಿದ್ದ ಚನ್ನಗಂಗಪ್ಪನವರು ಪೊಲೀಸ್ ಕಾರ್ಯಾಚರಣೆಯಾಗಲೀ, ತನಿಖೆಯ ಬಗ್ಗೆ ಸ್ವಲ್ಪ ಹೆಚ್ಚೇ ತಿಳುವಳಿಕೆಯುಳ್ಳವರಾಗಿರುತ್ತಾರೆಂಬ ಕಾರಣಕ್ಕೆ, ಚಿತ್ರಕ್ಕೆ ಒಂದಿಷ್ಟು ಶಕ್ತಿ ತುಂಬಿರುತ್ತಾರೆಂಬ ಊಹೆ ಸುಳ್ಳಾಗಿ - ಪ್ರೇಕ್ಷಕರು ಚಿತ್ರದ ಅವಾಸ್ತವಿಕ, ಅಸಹನೀಯ ಸನ್ನಿವೇಶನ್ನು ನೋಡಿ ಬಿದ್ದು ಬಿದ್ದು ನಗುತ್ತಿದ್ದುದ್ದರಲ್ಲಿ ಆಶ್ಚರ್ಯವೇನಿರಲಿಲ್ಲ. ಪಕ್ಕ ಸೀಟಿನಲ್ಲಿದ್ದ ಮಹಾಶಯನೊಬ್ಬ ಸೀಟಿಗೆ ಒರಗಿ ಒಂದು ಒಳ್ಳೆಯ ನಿದ್ದೆ ತೆಗೆದದ್ದು ನೋಡಿ, ಇಂತಹ ಸದಾವಕಾಶವನ್ನು ನಾವು ಸದುಪಯೋಗಪಡಿಸಿಕೊಳ್ಳಲಿಲ್ಲವಲ್ಲ ಎಂದು ಮರುಗಿ ಎದ್ದು ಬರಬೇಕಾಯಿತು!.

● ನಕುಲ

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE - 560027 Published by : G.N.NAGARAJ, No 12, 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE 560027 Editor S.Y.GURURSHANTH, No12, 18th Cross, S.R.Nagar, BANGALORE - 560 027 Editor : S.Y.GURUSHANTH